ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿಯ ಸಂಪ್ರಬಂಧ

ಪಿ. ಲಂಕೇಶ್‌ರವರ ಕಥೆಗಳು – ಒಂದು ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ಸಿ.ಎನ್. ಮೋಹನ್‌ರಾವ್
ನೋಂದಣಿ ಸಂಖ್ಯೆ: BMSBKS-00410

ಮಾರ್ಗದರ್ಶಕರು
ಪ್ರೊ. ಕೆ.ಎಸ್. ಮಧುಸೂದನ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು – 560 019

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿಯ ಸಂಪ್ರಬಂಧ

ಪಿ. ಲಂಕೇಶ್‌ರವರ ಕಥೆಗಳು – ಒಂದು ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ಸಿ.ಎನ್. ಮೋಹನ್‌ರಾವ್
ನೋಂದಣಿ ಸಂಖ್ಯೆ: BMSBKS-00410

ಮಾರ್ಗದರ್ಶಕರು
ಪ್ರೊ. ಕೆ.ಎಸ್. ಮಧುಸೂದನ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು – 560 019

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2009–2010ನೇ ಸಾಲಿನ ಎಂ.ಫಿಲ್. ಪದವಿಗಾಗಿ **"ಪಿ. ಲಂಕೇಶ್‌ರವರ ಕಥೆಗಳು – ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು **ಮೋಹನ್ ರಾವ್ ಸಿ.ಎನ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲಿಯೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸಿದ್ದೇನೆ.

ಸಹಿ

(ಪ್ರೊ.ಕೆ.ಎಸ್. ಮಧುಸೂದನ)
ಮಾರ್ಗದರ್ಶಕರು.

ದಿನಾಂಕ: 14/09/2010
ಸ್ಥಳ: ಬೆಂಗಳೂರು.

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2009–2010ನೇ ಸಾಲಿನ ಎಂ.ಫಿಲ್. ಪದವಿಗಾಗಿ "ಪಿ. ಲಂಕೇಶ್‌ರವರ ಕಥೆಗಳು – ಒಂದು ಅಧ್ಯಯನ" ಎಂಬ ನಿಬಂಧವನ್ನು ಪ್ರೊ. ಕೆ. ಎಸ್. ಮಧುಸೂದನ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ. ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

Mohan C.N.

ಸಹಿ

(ಮೋಹನ್ ರಾವ್ ಸಿ.ಎಸ್.)

ದಿನಾಂಕ: 14/09/2010

ಸಂಶೋಧನ ವಿದ್ಯಾರ್ಥಿ

ಸ್ಥಳ: ಬೆಂಗಳೂರು.

ನೋಂದಣಿ ಸಂಖ್ಯೆ: BMSBKS-00410

ಪರಿವಿಡಿ

ಅಧ್ಯಾಯ –1	ಅಧ್ಯಾಯದ ಉದ್ದೇಶ, ಸ್ವರೂಪ, ವ್ಯಾಪ್ತಿ	1–3
ಅಧ್ಯಾಯ –2	ಪಿ. ಲಂಕೇಶರ ಪರಿಚಯ	4–8
ಅಧ್ಯಾಯ –3	ಪಿ. ಲಂಕೇಶರ ಕಥೆಗಳಲ್ಲಿ ಗ್ರಾಮೀಣ ಜೀವನ ಚಿತ್ರಣ	9–23
ಅಧ್ಯಾಯ – 4	ಪಿ. ಲಂಕೇಶರ ಕಥೆಗಳಲ್ಲಿ ಅಸ್ಪೃಶ್ಯತೆ ಮತ್ತು ಊಳಿಗಮಾನ್ಯ ವ್ಯವಸ್ಥೆ	24–37
ಅಧ್ಯಾಯ –5	ಪಿ. ಲಂಕೇಶರ ಕಥೆಗಳಲ್ಲಿ ಪರಕೀಯ ಪ್ರಜ್ಞೆ	38–45
ಅಧ್ಯಾಯ –6	ಪಿ. ಲಂಕೇಶರ ಕಥೆಗಳಲ್ಲಿ ನಗರ ಜೀವನ ಚಿತ್ರಣ	46–58
ಅಧ್ಯಾಯ –7	ಪಿ. ಲಂಕೇಶರ ಕಥೆಗಳಲ್ಲಿ ಸ್ತ್ರೀಪಾತ್ರಗಳ ವಿಶ್ಲೇಷಣೆ	59–75
ಅಧ್ಯಾಯ –8	ಉಪಸಂಹಾರ ಅಥವಾ ಸಮಾರೋಪ ಫಲಿತಗಳು	76–81
ಅಧ್ಯಾಯ –9	ಆಕರ ಗ್ರಂಥಗಳು, ಪರಾಮರ್ಶನ ಗ್ರಂಥಗಳು	82–83.

ಅಧ್ಯಾಯ – 1

ಅಧ್ಯಾಯದ ಉದ್ದೇಶ, ಸ್ವರೂಪ, ವ್ಯಾಪ್ತಿ

ಸಾಹಿತ್ಯವು ನಿರಂತರವಾಗಿ ಚಲನೆಗೊಳ್ಳುವ ಸಾಂಸ್ಕೃತಿಕ ಕ್ರಿಯೆ. ಮಾನವ ಜೀವನದ ಎಲ್ಲಾ ಸಾಧ್ಯತೆಗಳನ್ನು ಹುಡುಕಾಟ, ನಂಬಿಕೆ, ಪುರಾಣ ಪದ್ಧತಿ, ಆಚಾರ ವಿಚಾರ, ಧರ್ಮ, ಹುಟ್ಟು, ಸಾವು ಮುಂತಾದವುಗಳನ್ನೆಲ್ಲಾ ಸಾಹಿತ್ಯವು ಶೋಧಿಸುತ್ತದೆ. ಮಾನವನ ತೀವ್ರವಾದ ಅನುಭವ, ದಿಗ್ಭ್ರಮೆ, ಬುದುಕಿನ ವಿಶಿಷ್ಟ ಕ್ಷಣಗಳನ್ನು ದಾಖಲಿಸುತ್ತದೆ. ಜೀವನದ ನಿಗೂಢತೆಯನ್ನು ಧ್ವಂದ್ವಗಳನ್ನೆಲ್ಲಾ ತನ್ನ ಉತ್ಕೃಷ್ಟ ಭಾಷೆಯಲ್ಲಿ ಸಮರ್ಥವಾದ ರೂಪಕ, ಪ್ರತಿಮೆ, ಸಂಕೇತಗಳನ್ನು ಶೋಧಿಸುತ್ತದೆ. ಹಾಗೆಯೇ ಅದು ಮಾನವೀಯತೆಯನ್ನು ಅತ್ಯುನ್ನತ ಮಟ್ಟದಲ್ಲಿ, ತೀವ್ರ ಪ್ರೀತಿಯಲ್ಲಿ ವ್ಯಕ್ತಪಡಿಸುತ್ತಾ ಸದಾ ಅದು ಗಮನ ಹರಿಸುತ್ತಿರುತ್ತದೆ.

ಹೀಗೆ ಸಾಹಿತ್ಯದಲ್ಲಿ ಮಂಡಿತವಾಗುತ್ತಿರುವ ಮಾನವ ಬದುಕಿನ ಎಲ್ಲಾ ಮುಖಗಳನ್ನು ಸಮರ್ಥವಾದ ಭಾಷೆ, ತಂತ್ರ ವಸ್ತು ಮುಂತಾದವುಗಳ ಮೂಲಕ ನಿರೂಪಿಸುತ್ತದೆ.

ಕನ್ನಡದ ನವ್ಯ ಸಂದರ್ಭದಲ್ಲಿ ಪ್ರಧಾನವಾಗಿ ಈ ರೀತಿಯಾದ ವಸ್ತು, ಭಾಷೆ, ತಂತ್ರ ಮುಂತಾದವುಗಳು ಅಭಿವ್ಯಕ್ತಿಯಲ್ಲಿ, ಅನುಭವದಲ್ಲಿ ಪರಿಣಾಮಕಾರಿಯಾಗಿ ಮಂಡಿತವಾಗುತ್ತಿವೆ. ಕೇವಲ ಯಾವಾಗಲೂ ಮನಸ್ಸಿನ ಒತಪ್ರೋತ ಭಾವನೆಗಳನ್ನು ಕೃತಕವೆನಿಸದ ಹಾಗೆ ಚಿತ್ರಿಸಲಾಗಿದೆ. ಸಮಕಾಲೀನ ವಸ್ತುಗಳು, ಸತ್ಯಗಳು ಸರ್ವಕಾಲೀಕವಾಗಿಯೂ ಪ್ರಸ್ತುತವಾಗುತ್ತವೆಂಬುದನ್ನು ಈ ಕಾಲದಲ್ಲಿನ ಕಥೆಗಳಲ್ಲಿ ಗಮನಿಸಬಹುದು. ನವ್ಯ ಕಥೆಗಳಲ್ಲಿ ಮುಖ್ಯವಾಗಿ ರಾಜಕೀಯ, ಧಾರ್ಮಿಕ, ಪರಕೀಯ, ಆಧುನಿಕ ದಾಂಪತ್ಯ ಪ್ರೇಮ, ಹಳ್ಳಿಯ ಸಂಕಷ್ಟಗಳು. ಹೀಗೆ ಹಲವಾರು ವಿಧದ ವಸ್ತುಗಳನ್ನು ಶೋಧಿಸುವಲ್ಲಿ ಪ್ರಮುಖವೆನಿಸಿದೆ. ಬಹುಮುಖ್ಯವಾಗಿ ಕೇಂದ್ರ ಪಾತ್ರವೊಂದರಲ್ಲಿನ ತೀವ್ರ

ಪರಕೀಯ ಸ್ಥಿತಿಯನ್ನು, ಹಳ್ಳಿ ನಗರಗಳ ಸಂಬಂಧ, ಇವೆರಡೂ ಸಮಾಜದಲ್ಲಿ ಹಿಂಸೆ, ಕ್ರೌರ್ಯ, ದೌರ್ಜನ್ಯ, ಶೋಷಣೆಯ ವಿವಿಧ ಬಗೆಯ ಸಮಸ್ಯೆಗಳನ್ನು ಹಿಡಿದಿಟ್ಟಿವೆ. ಹಾಗೆಯೇ ಆಧುನಿಕತೆಯು ತೀವ್ರವಾಗಿ ಎದುರಾದಾಗ ಅದನ್ನು ಎದುರಿಸುವ ದೇಶಿ ಮಾದರಿಯ ಒಳನೋಟಗಳನ್ನು, ಜಾತಿ ರಹಿತ ಮುಕ್ತ ಸಮಾಜವನ್ನು ಬಯಸುವ ಪಾತ್ರಗಳು, ವಸ್ತುಗಳನ್ನು ಕಾಣಬಹುದು. ಕಾಮ ಇಲ್ಲಿ ಹೆಚ್ಚಾಗಿದೆ.

“ನವ್ಯ ಸಾಹಿತ್ಯದ ಮೂಲಭೂತ ಧೋರಣೆ ಭಾಷೆಯ ಉಪಯೋಗಕ್ಕೆ ಸಂಬಂಧಿಸಿದ್ದು ಅಗಿದೆ” . ಆದರೆ ಈ ಧೋರಣೆಯ ಪ್ರಕಾರ ಸಾಹಿತ್ಯದಲ್ಲಿ ಪ್ರತಿಪಾದನೆಗೆಂದು, ಉಪಯೋಗಿಸಿದ ಭಾಷೆಗಿಂತ ಶೋಧನೆಗೆಂದು ತೊಡಗಿಸಿದ ಭಾಷೆ ಹೆಚ್ಚು ಮಹತ್ವವುಳ್ಳದೆಂದು ಬಗೆಯುವುದರಿಂದ ನವ್ಯ ಸಾಹಿತಿ ಜೀವನವನ್ನು ಪರಿಭಾವಿಸುವ ರೀತಿಯು ಹಿಂದಿನಕ್ಕಿಂತ ಬೇರೆಯಾಗಿದೆ”. ಈ ಮಾತಿನ ಧೋರಣೆ ಭಾಷೆಯಾಗಿದೆ.

ನವ್ಯ ಸಾಹಿತ್ಯದಲ್ಲಿ ಹೀಗೆ ಕನ್ನಡ ಭಾಷೆಯನ್ನು ಹೆಚ್ಚು ಸೃಜನಶೀಲವಾಗಿ ಬಳಸಿಕೊಂಡವರೆಂದರೆ ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಮುಂತಾದವರು ತಮ್ಮ ವಸ್ತುಗಳಿಗೆ ತಕ್ಕಂತೆ ಕಥೆಯ ಭಾಷೆಯನ್ನು ಹೊಸ ಸಂವೇದನೆಗೆ ಬಗ್ಗಿಸುವುದರ ಮೂಲಕ ಭಾಷೆಯನ್ನು ಹೆಚ್ಚು ಜೀವಂತಿಕೆಯಿಂದಿರಿಸಿದ್ದಾರೆ. ಪೂರ್ಣಚಂದ್ರ ತೇಜಸ್ವಿಯವರ ‘ಹುಲಿಯೂರಿನ ಸರಹದ್ದು ಕಥಾ ಸಂಕಲನದ ಮುನ್ನುಡಿಯಲ್ಲಿ ಅನುಭವದ ಸೂಕ್ಷ್ಮಾತಿ ಸೂಕ್ಷ್ಮಗಳನ್ನು ಆಳ, ಪಾತಾಳದ ಸತ್ಯಗಳನ್ನು ಅಭಿವ್ಯಕ್ತಿಸಲೂ ಭಾಷೆ ಬಳಸಿದ್ದಾರೆ. ಜನ ಸಮಷ್ಟಿಯ ಸಂಕೀರ್ಣ ಜವಾಬ್ದಾರಿ, ಲೇಖಕ ಆ ಸಮಷ್ಟಿಯಲ್ಲಿ ಒಬ್ಬ ಹೇಗೆ ಭಾಷೆ ಮತ್ತು ಲೇಖಕನ ಭಾವಗಳು ಒಂದು ಸಾಮಾಜಿಕ ಎಚ್ಚರಗಳಿಗೆ ಸಂಬಂಧಿಸಿರುವ ಮಾತಾಗಿದೆ.

ಹೀಗೆ ನವ್ಯ ಸಾಹಿತ್ಯವು ಭಾಷೆ ವಸ್ತು, ತಂತ್ರಗಳು ಭಿನ್ನ ಭಿನ್ನವೆನಿಸಿದರೂ, ಹೊಸತೆನಿಸಿದ್ದರೂ ಅವೆಲ್ಲವನ್ನೂ ನಾವು ಒಟ್ಟೊಟ್ಟಿಗೆ ಗಮನಿಸಬಹುದು.

ಪ್ರಸ್ತುತ ನನ್ನ ಅಧ್ಯಯನ ವ್ಯಾಪ್ತಿಯು ಪಿ. ಲಂಕೇಶರ ಕಥೆಗಳಲ್ಲಿ ಬರುವ ಪ್ರಧಾನ ವಸ್ತುಗಳತ್ತ ಕೇಂದ್ರೀಕರಿಸುವುದಾಗಿದೆ. ಈ ಕಾಲದಲ್ಲಿನ ಸಮಕಾಲೀನ ಪರಿಸ್ಥಿತಿಗಳು, ದ್ವಂದ್ವಗಳು ಎಲ್ಲವನ್ನು ವಿವರಿಸುವ ಮುಖ್ಯ ವಸ್ತುಗಳೆನಿಸುವತ್ತ ಗಮನಹರಿಸಲು ನಾನು ಯತ್ನಿಸುತ್ತೇನೆ.

ಅಧ್ಯಾಯ – 2

ಲಂಕೇಶರ ಪರಿಚಯ

ಸ್ವಾತಂತ್ರ್ಯ ನಂತರದ ಸಂದರ್ಭದಲ್ಲಿನ ಕನ್ನಡ ಸಾಹಿತ್ಯವು ಅನೇಕ ರೀತಿಯಾದ ಚಳುವಳಿಗಳು, ಸಿದ್ಧಾಂತಗಳು, ಐಡಿಯಾಲಜಿ ಪ್ರೇರಣೆ ಪ್ರಭಾವಗಳಿಗೆ ಒಳಗಾಗಬೇಕಾಯಿತು. ನವ್ಯದ ಸಂದರ್ಭದಲ್ಲಿ ಬರೆಯುತ್ತಿದ್ದ ಅನೇಕ ಲೇಖಕರ ಮೇಲೆ ಈ ಪ್ರಭಾವವು ಸಾಹಿತ್ಯಿಕ ಕೃತಿಗಳ ಮೇಲೂ ಉಂಟಾಯಿತು. ಒಂದು ಸಮಾಜದಲ್ಲಿನ ಬದಲಾವಣೆಗಳು, ಪಲ್ಲಟಗಳು, ಸಹಜವಾಗಿಯೇ ಆ ಸಮಾಜದಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಬದಲಾವಣೆಗಳು.

ಸಂಸ್ಕೃತಿಯ ವಲಯದಲ್ಲೂ, ಸಾಹಿತ್ಯಿಕ ವಲಯದಲ್ಲೂ ಬದಲಾವಣೆಗಳಾಗುತ್ತವೆ. ಅಂತಹ ಸಂದರ್ಭದಲ್ಲಿ ಬರೆಯುತ್ತಿದ್ದ ಪಿ. ಲಂಕೇಶರ ಪರಿಚಯ ಮಾಡಿಕೊಡುವುದು ನನ್ನ ಉದ್ದೇಶ.

ಲಂಕೇಶರು ಹಲವು ಜನಾಂಗಗಳ ಕಣ್ಣು ತೆರೆಸಿದ ವ್ಯಕ್ತಿತ್ವ ಎಂದು ಹೇಳಬಹುದು. ಕಾರಣವಿಷ್ಟೇ. ಒಂದು ಸಮಾಜದಲ್ಲಿನ ಬಹು ಮುಖ್ಯ ಬದಲಾವಣೆಯ ಸಾಧನಗಳಾದ ಅಧ್ಯಾಪಕ, ಸಾಹಿತಿ, ಪತ್ರಿಕೋದ್ಯಮ ಈ ಮೂರು ವಲಯದಲ್ಲೂ ತಮ್ಮನ್ನು ತೊಡಗಿಸಿಕೊಂಡವರು. ಪತ್ರಿಕೋದ್ಯಮದ ಮೂಲಕ ಸಮಾಜದ ಕಣ್ಣು, ಕಿಪಿ ಧ್ವನಿಯಾಗಿದ್ದವರು ಮತ್ತು ಹಲವು ವರ್ಗಗಳ ಲೇಖಕರನ್ನು ಮುಖ್ಯವಾಹಿನಿಗೆ ತಂದವರು.

ಲಂಕೇಶರ ಸಮಕಾಲೀನರಾದ ಯು.ಆರ್. ಅನಂತಮೂರ್ತಿ, ಪೂರ್ಣ ಚಂದ್ರ ತೇಜಸ್ವಿ, ಕೃಷ್ಣ ಆಲನಹಳ್ಳಿ, ದೇವನೂರು ಮಹಾದೇವ, ಇವರ ನಡುವೆ ವಿಶಿಷ್ಟ ರೀತಿಯಲ್ಲಿ ಗುರುತಿಸಿಕೊಂಡವರು. ಅಧ್ಯಾಪಕರಾಗಿ, ಸಿನಿಮಾ, ರಂಗಭೂಮಿ, ನಟ ನಿರ್ದೇಶಕರಾಗಿ ಕವಿಯಾಗಿ, ಕಾದಂಬರಿಕಾರರಾಗಿ, ಪತ್ರಿಕೋದ್ಯಮಿಯಾಗಿ, ರಾಜಕಾರಣದಲ್ಲಿ ಪ್ರಭಾವ ಬೀರುವಂತಹವರು.

ಪಿ. ಲಂಕೇಶರ ಜನನ: 1935, ಶಿವಮೊಗ್ಗೆಗೆ 14.4 ಕಿ.ಮೀ. ದೂರದಲ್ಲಿರುವ ಕೊನಗವಳ್ಳಿ ಎಂಬ ಗ್ರಾಮದಲ್ಲಿ. ಶಿವಮೊಗ್ಗೆಯ ಇಂಟರ್ ಮೀಡಿಯಟ್ ಕಾಲೇಜ್ (1953–55)ನಲ್ಲಿ ಇಂಟರ್ ಮೀಡಿಯಟ್; ಬೆಂಗಳೂರಿನ ಸೆಂಟ್ರಲ್ ಕಾಲೇಜ್ (1955–58)ನಲ್ಲಿ ಇಂಗ್ಲೀಷ್ ಆನರ್ಸ್; ಮೈಸೂರಿನ ಮಹಾರಾಜಾ ಕಾಲೇಜ್ (1958–59)ನಲ್ಲಿ ಇಂಗ್ಲೀಷ್ ಎಂ.ಎ.

1959ರಿಂದ 1962ರವರೆಗೆ ಶಿವಮೊಗ್ಗೆಯ ಸಹ್ಯಾದಿ ಕಾಲೇಜ್ (ಹಿಂದಿನ ಇಂಟರ್ ಕಾಲೇಜ್)ನಲ್ಲಿ ಅಧ್ಯಾಪಕ; ಆ ಮೇಲೆ ಸೆಂಟ್ರಲ್ ಕಾಲೇಜ್‌ನಲ್ಲಿ ಮೂರು ವರ್ಷ (1962–65), ಸರ್ಕಾರಿ ಫಸ್ಟ್‌ಗ್ರೇಡ್ ಕಾಲೇಜ್‌ನಲ್ಲಿ ಒಂದು ವರ್ಷ (1965–66) ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹನ್ನೆರಡು ವರ್ಷ (1966–78) ಅಧ್ಯಾಪಕ. 1978ರಲ್ಲಿ ಅಧ್ಯಾಪಕ ವೃತ್ತಿಗೆ ರಾಜೀನಾಮೆ. 1977ರಲ್ಲಿ ಪಲ್ಲವಿ ಚಿತ್ರದ ಬಿಡುಗಡೆ, 1980ರಲ್ಲಿ 'ಲಂಕೇಶ್ ಪತ್ರಿಕೆ'ಯ ಅರಂಭ.

1963ರಿಂದ 1997ರವರೆಗೆ ಬರೆದ ಕೆಲವು ಪುಸ್ತಕಗಳು: ಕೆರೆಯ ನೀರನು ಕೆರೆಗೆ ಚೆಲ್ಲಿ (1963), ನಾನಲ್ಲ (1970), ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ (1973), ಕಲ್ಲು ಕರಗುವ ಸಮಯ (1990), ಉಲ್ಲಂಘನೆ (1996) ಎಂಬ ಕಥಾ ಸಂಕಲನಗಳು; ತಲೆಮಾರು (ಕವನಗಳು), ಬಿರುಕು (1967), ಮುಸ್ಸಂಜೆಯ ಕಥಾಪ್ರಸಂಗ (1978),

ಅಕ್ಕ (1991) ಎಂಬ ಕಾದಂಬರಿಗಳು; ತೆರೆಗಳು (1964), ಸಂಕ್ರಾಂತಿ (1971), ಗುಣಮುಖ (1993) ಎಂಬ ನಾಟಕಗಳು; ಚಿತ್ರ ಸಮೂಹ (45 ವರ್ಷ ಬರೆದ ಪದ್ಯಗಳು) (1999); ಪಾಪದ ಹೂವುಗಳು (1974), ದೊರೆ ಈಡಿಪಸ್ ಮತ್ತು ಅಂತಿಗೊನೆ (1971) ಎಂಬ ಅನುವಾದಗಳು, ಪ್ರಸ್ತುತ, ಕಂಡದ್ದು ಕಂಡಹಾಗೆ, ಟೀಕೆ–ಟಿಪ್ಪಣಿ (1991) ಗದ್ಯ ಬರಹಗಳ ಸಂಕಲನಗಳು. ಅಕ್ಷರ ಹೊಸ ಕಾವ್ಯ ಇವರು 1970ರಲ್ಲಿ ಸಂಗ್ರಹಿಸಿ ಸಂಪಾದಿಸಿದ ಹೊಸ ಕಾವ್ಯ ಸಂಗ್ರಹ. 'ಪಲ್ಲವಿ' ಚಿತ್ರದ ಶ್ರೇಷ್ಠ ನಿರ್ದೇಶನಕ್ಕಾಗಿ ರಾಷ್ಟ್ರಪ್ರಶಸ್ತಿ (1977), ಕೇಂದ್ರ ಸಾಹಿತ್ಯ ಆಕಾಡೆಮಿ0ಯು ಪ್ರಶಸ್ತಿ (1993).

ಮರಣ 25, ಜನವರಿ, 2000.

ಮರಣೋತ್ತರ ಪ್ರಕಟವಾಗಿರುವ ಪುಸ್ತಕಗಳು ಟೀಕೆ–ಟಿಪ್ಪಣಿ ಭಾಗ–3, ಹಾಗೂ 'ಮಂಜು ಕವಿದ ಸಂಜೆ ಮತ್ತು ಇತರೆ ಕಥೆಗಳು', ಇತ್ಯಾದಿ.

ಲಂಕೇಶರ ಮುಖ್ಯ ಕಥೆಗಳು. ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ನಾನಲ್ಲ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ, ಕಲ್ಲುಕರಗುವಸಮಯ ಮತ್ತು ಉಲ್ಲಂಘನೆ, ಮಂಜು ಕವಿದ ಸಂಜೆ ಮತ್ತು ಇತರೆ ಕಥೆಗಳು ನೋಡಬಹುದು.

ನಾಟಕಕಾರರಾಗಿ ಲಂಕೇಶರು, ನಮ್ಮ ಗಮನ ಸೆಳೆಯುವುದು ಅವರ 'ಪ್ರತಿಮಾ ನಾಟಕ ರಂಗ' ಎನ್ನುವ ಸಂಘಟನೆಯನ್ನು ಹುಟ್ಟುಹಾಕುವುದರ ಮೂಲಕ ಅನೇಕ ನಾಟಕಗಳನ್ನು ರಚಿಸಿದ್ದಾರೆ. 'ತೆರೆಗಳು', 'ಕ್ರಾಂತಿ ಬಂತು ಕ್ರಾಂತಿ' ಗಿಳಿಯು ಪಂಜರದೊಳಿಲ್ಲ, ನನ್ನ ತಂಗಿಗೊಂದು ಗಂಡು ಕೊಡಿ, ಸಿದ್ಧತೆ, ಟ್ರಿಪ್ರಸನ್ನನ ಗೃಹಸ್ಥಾಶ್ರಮ ಮುಂತಾದ ಏಕಾಂತ ನಾಟಕಗಳ ಜೊತೆಗೆ ಬಹು ಮುಖ್ಯವಾದ 'ಸಂಕ್ರಾಂತಿ' 'ಗುಣಮುಖಗಳು', ಲಂಕೇಶರು ಕವಿಯಾಗಿ ಕಾಣಿಸುವುದು ಇವರ

'ಅವ್ವ' ಮತ್ತು ದೇಶಭಕ್ತ ಸೂಳೆ ಮಗನೆ' ಪದ್ಯದಿಂದ ಇಂಚರ ಇವರ ಮೊದಲ ಕವನ ಸಂಕಲನವಾಗಿದೆ.

ಲಂಕೇಶರು ಶ್ರೇಷ್ಠ ಅನುವಾದಕರಾಗಿ ಗ್ರೀಕ್ ನಾಟಕಕಾರ ನೆಪೋಕ್ಲಿಸ್‌ನ 'ಈಡಿಪಸ್' ಮತ್ತು 'ಅತಿಗೊನೆ' ನಾಟಕಗಳನ್ನು ಅನುವಾದ ಮಾಡಿದ್ದಾರೆ ಮತ್ತು ಫ್ರೆಂಚ್ ಕವಿ ಬೋಧಿಲೇರನ ಲೆ ಪ್ಲೌರ್ ದು ಮಾಲ್ ಎನ್ನುವುದನ್ನು 'ಪಾಪದ ಹೂಗಳು' ಎಂಬುದಾಗಿ ಅನುವಾದಿಸಿದ್ದಾರೆ.

ಲಂಕೇಶರು ನಟರಾಗಿ 'ಸಂಸ್ಕಾರ' ಚಿತ್ರದಲ್ಲಿ ನಾರಾಣಪ್ಪನ ಮೂಲಕ ಚಿತ್ರರಂಗಕ್ಕೆ ಬಂದವರು. 'ಪಲ್ಲವಿ' ಚಿತ್ರಕ್ಕೆ 1976ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ನಂತರ 'ಅನುರೂಪ' 'ಖಂಡವಿದಕೊ ಮಾಂಸವಿದಕೊ' ಎಲ್ಲಿಂದಲೋ ಬಂದವರು' ಎಂಬ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. 1980ರಲ್ಲಿ ಲಂಕೇಶ್ ಪತ್ರಿಕೆಯನ್ನು ಪ್ರಾರಂಭ ಮಾಡಿದರು. ಇದರ ಮೂಲಕ ನಾಡಿನ ಜನಪದ ಚಳುವಳಿಗೆ, ರೈತ ಚಳುವಳಿ, ದಲಿತ ಚಳುವಳಿ, ಮಹಿಳಾ ಚಳುವಳಿಗಳ ಹೋರಾಟಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಈ ಪತ್ರಿಕೆಯಲ್ಲಿ 1991ರಿಂದ ಬರೆದಂತಹ 10 1/2 ವರ್ಷಗಳ ಕಾಲ ಬರೆದ ಲೇಖನಗಳು 'ಟೀಕೆ ಟಿಪ್ಪಣಿ' ಎಂಬ ಎರಡು ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಅಂದಿನ ಹದಗೆಟ್ಟ ರಾಜಕೀಯ ವ್ಯವಸ್ಥೆಗೆ ಪರ್ಯಾಯವಾಗಿ 'ಪ್ರಗತಿ ರಂಗ'ವನ್ನು ಸ್ಥಾಪಿಸಿದರು.

ಲಂಕೇಶರು ತಮ್ಮ ವೈಯುಕ್ತಿಕ ಬದುಕಿನಲ್ಲಿ ಸಾಕಷ್ಟು ನೋವು, ನಿರಾಸೆ, ದುಃಖ, ಪ್ರೀತಿ, ಪ್ರೇಮ, ಕಾಮ, ಅನೇಕ ರೀತಿಯ ಸಂಘರ್ಷಗಳಿಗೆ ಒಳಗಾದವರು. ತಮ್ಮ ವಿರುದ್ಧವೇ ಬಂಡೇಳುವಂತಹವರು. ಸಿಟ್ಟು, ಸಿಡುಕುತನ, ಕೋಪ, ಮುಂತಾದ ಭಾವಾವೇಶಗಳಿಗೆ ಒಳಗಾದರೂ ಕೂಡಾ ಬದುಕನ್ನು ತುಂಬಾ

ಪ್ರೀತಿಯಿಂದ ನೋಡುವವರು. ಹೀಗೆ ಲಂಕೇಶರು ಏನನ್ನು ಆಗಲೂ ಬಯಸುವುದಿಲ್ಲ. ಬದಲು ಸದಾ ಸಾಗಲು ಬಯಸುತ್ತಾರೆ. ಆಗುವಿಕೆಯೇ ಅಂತ್ಯ. ಸಾಯುವಿಕೆಯೇ ಜೀವಂತ" ಎನ್ನುವ ಧೋರಣೆ ಇವರದು. ಇದು ಲಂಕೇಶರು ನಡೆದು ಬಂದ ಹಾದಿಯನ್ನು ಗಮನಿಸಿದಾಗ ಇದನು ಇನ್ನಷ್ಟು ಸ್ಪಷ್ಟವಾಗುತ್ತದೆ.

ಅಧ್ಯಾಯ – 3

ಪಿ. ಲಂಕೇಶರ ಕಥೆಗಳಲ್ಲಿ ಗ್ರಾಮೀಣ ಜೀವನ ಚಿತ್ರಣ

ನವ್ಯ ಕಾಲಘಟ್ಟದಲ್ಲಿಯೇ ಕನ್ನಡ ಸಾಹಿತ್ಯದ ಮೇಲೆ ಪ್ರಾದೇಶಿಕವಾದ ಅನೇಕ ಪರಿಣಾಮಗಳು ಉಂಟಾದವು. ಸಮಾಜದಲ್ಲಿನ ಜಾತೀಯತೆ, ಕ್ರೌರ್ಯ, ಅಸಮಾನತೆ, ರಾಜಕೀಯ ಭ್ರಮ ನಿರಸನ, ತುರ್ತು ಪರಿಸ್ಥಿತಿ ಮುಂತಾದ ವಿಷಯಗಳ ಬಗ್ಗೆ ಗಾಢವಾದ ಚಿಂತನೆಯು ಶುರುವಾಯಿತು. ಇದು ಅಂದಿನ ಅನೇಕ ರೀತಿಯ ಸಾಮಾಜಿಕ ಹೋರಾಟಗಳಿಗೆ, ಸಂಘರ್ಷಗಳಿಗೆ ಕಾರಣವಾಯಿತು. ಅದು ಸಾಹಿತ್ಯದಲ್ಲಿಯೂ ಕೂಡಾ ಪ್ರತಿಧ್ವನಿತವಾಯಿತು. 70–80ರ ದಶಕದಲ್ಲಿ ಕನ್ನಡ ಸಾಹಿತ್ಯದ ಹಿನ್ನೆಲೆಯಾಗಿ ಭೂಸುಧಾರಣೆ, ಜಾತಿವಿನಾಶ, ದಲಿತ ಸಂಘರ್ಷ ಸಮಿತಿ, ಭೂಸುಧಾರಣಾ ಚಳುವಳಿ, ಗೋಕಾಕ್ ಚಳುವಳಿ, ಬೂಸಾಚಳುವಳಿ, ಬಂಡಾಯ ಸಾಹಿತ್ಯ, ಸಂಘಟನೆಗಳು ಹುಟ್ಟಿಕೊಂಡಿತು. ಈ ಚಳುವಳಿಗಳ ನೆಲೆಯಲ್ಲಿಯೇ ನಿಂತು ಲೇಖಕರನ್ನು ನೋಡದೆ ವೈಯುಕ್ತಿಕ ನೆಲೆಯಲ್ಲಿ ಇಡೀ ಈ ರೀತಿಯ ಸಂಘಟನೆಗಳ ಹಿನ್ನೆಲೆಯಲ್ಲಿ ಗ್ರಹಿಸದೆ ಒಂದು ಸಮಷ್ಟಿ ಸಮುದಾಯದ ನಡುವೆ ಗುರ್ತಿಸಲಾಯಿತು.

ಲಂಕೇಶರು ಕೂಡಾ ಇಂತಹ ಕಾಲಘಟ್ಟಕ್ಕೆ ತೀವ್ರವಾಗಿ ಪ್ರತಿಕ್ರಿಯಿಸುತ್ತಾ ಅದರಲ್ಲಿ ಭಾಗಿಯಾದರು. ಈ ಕಾಲದಲ್ಲಿನ ಅವರ ವೈಯುಕ್ತಿಕ ಅನುಭವಗಳ ಜೊತೆಗೆ ಚಳುವಳಿಯಲ್ಲಿನ ನಡುವೆ ಕಂಡುಕೊಂಡ ಸತ್ಯಗಳು ಅಂತಿಮವೆನಿಸದ, ನಿರಂತರ ಶೋಧಿಸುಪಿಕೆಯ ನಡುವೆ ತೊಡಗಿಸಿಕೊಂಡವರು. ಈ ಅಧ್ಯಾಯದಲ್ಲಿ ಲಂಕೇಶರ ಕಥೆಗಳಲ್ಲಿ ವ್ಯಕ್ತವಾಗುವ ಗ್ರಾಮ ಸಮಾಜದ ಆತಂಕ, ಆಧುನಿಕತೆಯಿಂದಾಗಿ ಭಗ್ನಗೊಂಡ ಹಳ್ಳಿಗಳು ಜಾತೀಯತೆಯ ಪಿಡುಗು, ಊಳಿಗಮಾನ್ಯ ವ್ಯವಸ್ಥೆಯಿಂದಾಗುವ ಕ್ರೌರ್ಯ, ಹೆಣ್ಣಿನ ತುಮಲಗಳನ್ನು

ಹೇಳುವುದಾಗಿದೆ. ಮುಖ್ಯವಾಗಿ ಲಂಕೇಶರು ಎಲ್ಲವನ್ನೂ ಎಲ್ಲಾ ರೀತಿಯಿಂದಲೂ ತುಂಬಾ ತಣ್ಣನೆಯ ರೀತಿಯಲ್ಲಿ ಹೇಳುವ ರೀತಿ. "ಮಾನವರನ್ನು ಮತ್ತು ಮಾನವ ವರ್ತನೆಯನ್ನು ಕಪ್ಪು-ಬಿಳುಪು ಚೌಕಟ್ಟಿನಿಂ ದಾಚೆ" ಅದರ ಎಲ್ಲಾ ವೈರುಧ್ಯಗಳೊಂದಿಗೆ ದಾಖಲಿಸುವುದು. ಇಂತಹ ನಿಲುವಿನ ಗ್ರಹಿಕೆಯಿಂದರೆ ಮಾನವನ ವರ್ತನೆಯನ್ನು ತಾರ್ಕಿಕ ನೆಲೆಯಲ್ಲಿ ಅರ್ಥೈಸುವಂತಹದು ಅಲ್ಲ. ಯಾವ ಸಂದರ್ಭದಲ್ಲಿಯೂ ಮತ್ತು ಯಾವ ಕಾರಣಕ್ಕೂ ಭಾವೋದ್ವೇಗಕ್ಕೆ ಎಡೆಕೊಡದಿರುವುದು"*(1). ಹೀಗೆ ಲಂಕೇಶರು ಈ ರೀತಿಯ ನಡುವೆಯೇ ಮಾನವನ ಹಲವು ಸಂಕೀರ್ಣಸ್ಥಿತಿಗಳನ್ನು ಹೇಳುವುದು ಮತ್ತು ಸ್ವಾತಂತ್ರ್ಯೋತ್ತರ ಕಾಲದ ಭಾರತೀಯ ಸಮಾಜದಲ್ಲಿನ ಅದರಲ್ಲೂ ವಿಶೇಷವಾಗಿ ಹಳ್ಳಿಯಲ್ಲಿನ ಆಂತರಿಕ ವೈರುಧ್ಯಗಳನ್ನು ಗುರುತಿಸುವುದು.

ಪಿ. ಲಂಕೇಶರ ಮೂರನೆಯ ಕಥಾ ಸಂಕಲನ **"ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ"** ಯಲ್ಲಿ ಗ್ರಾಮೀಣ ಪರಿಸರದ ಚಿತ್ರಣವನ್ನು ಕಾಣಬಹುದು. ಇದುವರೆಗೂ ನಗರ ಕೇಂದ್ರಿತ ಕಥೆಗಳ ಕೇಂದ್ರವಾಗಿದ್ದರೆ ಇಲ್ಲಿಂದಾಚೆಗೆ ಗ್ರಾಮೀಣ ಪರಿಸರದಲ್ಲಿನ ಮೌಲ್ಯಗಳು ಹಾಗೂ ಮನುಷ್ಯರ ಮೂಲ ಪ್ರವೃತ್ತಿಗಳ ಶೋಧನೆಗೆ ತೊಡಗಿದ್ದಾರೆ. ಲಂಕೇಶರು ಗ್ರಾಮದಲ್ಲಿನ ಅನೇಕ ರೀತಿಯ ಸಂದರ್ಭ, ಸನ್ನಿವೇಶಗಳು, ಸಾಂಸ್ಕೃತಿಕವಾದ, ಸಾಮಾಜಿಕವಾದ, ರಾಜಕೀಯದ ಬದಲಾವಣೆಗಳನ್ನು ಕಾಣಿಸಿದ್ದಾರೆ. ಮುಖ್ಯವಾಗಿ ಈ ಸಂಕಲನವನ್ನೇ ಕೇಂದ್ರದಲ್ಲಿಟ್ಟುಕೊಂಡು ಉಳಿದ ಕಥೆಗಳಲ್ಲಿನ ಗ್ರಾಮೀಣ ಪರಿಸರವನ್ನು ನೋಡುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ. ಇದಕ್ಕೆ ಮುಖ್ಯ ಕಾರಣವೆಂದರೆ ಲಂಕೇಶರ ವ್ಯಕ್ತಿತ್ವದಲ್ಲಾದ ಆಂತರಿಕ ಬದಲಾವಣೆ ಮತ್ತು ಇಲ್ಲಿ ನಾಲ್ಕು ಕತೆಗಳು ಕೂಡಾ ಒಂದು ರೀತಿಯ ಸಂಬಂಧವನ್ನಿಸಿರಿಸಿಕೊಂಡಿವೆ. ಲಂಕೇಶರ ಈ ಕಥೆಗಳಲ್ಲಿನ

ವಸ್ತುವೈವಿಧ್ಯತೆಗಳು, ಆತಂಕಗಳು, ಪಾತ್ರಗಳು ಕೂಡಾ ಈ ಕಾಲಘಟ್ಟದಲ್ಲಿನ ತಲ್ಲಣಗಳನ್ನೇ ಹೇಳುವಂತದ್ದಾಗಿದೆ. ಲೇಖಕನಾದವನು. ತನ್ನ ಪರಿಸರದಲ್ಲಿ ಇಲ್ಲದ ಕೆಲವು ಮೌಲ್ಯಗಳನ ಜೀವಿಸಿದ ಸಾಧ್ಯತೆ0ಯ ದೃಷ್ಟಿಯಿಂದ ಬೇರೆ ನೆಲೆ0ಯಲ್ಲಿ, ಬೇರೆ ವ್ಯಕ್ತಿಗಳಲ್ಲಿ ಹುಡುಕುವುದರಲ್ಲಿ ತಪ್ಪೇನಿಲ್ಲ. ಆದರೆ ಅಂತಹ ಹುಡುಕಾಟದ ಸಂದರ್ಭದಲ್ಲಿ ಆ ಲೇಖಕನ ಸಾಕ್ಷಿ ಪ್ರಜ್ಞೆ ಅತ್ಯಂತ ಕಡು ನಿಷ್ಠುರವಾಗಿರುವುದು ಅತ್ಯಾವಶ್ಯಕ. ಅಂತಹ ಪ್ರಜ್ಞೆಯಿಂದಲೇ ಲಂಕೇಶರು ಬರೆ0ಯುತ್ತಾರೆನ್ನಬಹುದು.

ಪ್ರತಿಯೊಂದು ಸೃಷ್ಟಿಸುವ ಕೆಲಸವು ಜೀವನವನ್ನು ಧಾರೆಯೆರೆಯುವ ಕೆಲಸ ಎಂದು ನಂಬಿರುವ ಲಂಕೇಶರು ಈ ಕಥೆಯಲ್ಲಿ ಅವಮಾನ ಮತ್ತು ದಿಗ್ಭ್ರಮೆ ಮುಖ್ಯವೆಂಬಂತೆ ಹೇಳಿದ್ದಾರೆ. ಬಾಲ್ಯಕಾಲದಲ್ಲಿನ ಅವಮಾನ, ಆಘಾತ, ಮುಂತಾದ ಅನುಭವದ ಸಂಗತಿಗಳನ್ನು ಉಮಾ ಪತಿ ಹೇಳುತ್ತಾ ಹೋಗುತ್ತಾನೆ. ಹಳ್ಳಿ0ಯ ಹುಡುಗನಾದ ಉಮಾಪತಿ ಇಡೀ ಶಿವಮೊಗ್ಗದ ಹೈಸ್ಕೂಲ್‌ನಲ್ಲಿ ಫಸ್ಟ್ ಕ್ಲಾಸ್ ಬಂದವನು. ಇವನಿಗೆ ನಿಂಗೇಗೌಡರು ಸ್ಕಾಲರ್‌ಶಿಪ್ ಕೊಡಿಸುವುದಾಗಿ ಹೇಳಿ ಶಿವಮೊಗ್ಗದ ಪ್ರಭಾವಿ ರಾಜಕಾರಣಿ0ಯಾದ ಶೇಖರಪ್ಪನ ಹತ್ತಿರ ಕರೆದುಕೊಂಡು ಹೋಗುತ್ತಾನೆ. ಅದು ಅವನ ಸಹಪಾಠಿ ಸಂಧ್ಯಾಳ ಮನೆ ಕೂಡಾ. ಉಮಾಪತಿಯು ಆಗತಾನೆ ಬಾಲ್ಯವಸ್ಥೆಯನ್ನು ಬಿಟ್ಟು ಯೌವನಾವಸ್ಥೆಗೆ ಕಾಲಿಟ್ಟರುವವನು. ತನ್ನ ಮನೆಯ ಮುಂದೆ ಕೋಳಿ ಮತ್ತು ಹುಂಜದ ಸಂಭೋಗ ಕ್ರಿಯೆಯನ್ನು ನೊಡುತ್ತಾ ನೋಡುತ್ತಾ ಸಂಧ್ಯಾಳನ್ನು ನೆನಪು ಮಾಡಿಕೊಳ್ಳುತ್ತಾನೆ ಮತ್ತು ತನ್ನ ಅಕ್ಕ ಲಿಂಗಿ ಬಟ್ಟೆ ಬದಲಾಯಿಸುವಾಗ ಅವನಲ್ಲಿನ ನಾಚಿಕೆ ಕೋಪ ಸಿಟ್ಟು ಆಗುತ್ತದೆ.

ಹಳ್ಳಿಯಿಂದ ನಗರಕ್ಕೆ ಬರುವಾಗಿನ ಗೊಂದಲಗಳು ಉಮಾಪತಿಯಲ್ಲಿ ಅನೇಕ ಕೃತಕತೆ, ಆತಂತಕಗಳನ್ನು ಉಂಟು ಮಾಡುತ್ತವೆ. ತನ್ನ ತಾಯಿಯಾದರೂ

ಯಾವುದೇ ಸಂಕೋಚವಿಲ್ಲದೆ ತರಕಾರಿ ಮಾರುತ್ತಾ ಸಹಜವೆಂಬಂತೆ ಇದ್ದಾಳೆ. ಇವೆಲ್ಲದರ ನಡುವೆ ಇವನಿಗೆ ತನ್ನ ತಾಯಿಯ ಚೀರಾಟಾದಿಂದ ಅವಳನ್ನು ಬೈದು ಹೋಗುವಂತೆ ಮಾಡುತ್ತಾನೆ. ಉಮಾಪತಿಯಲ್ಲಿ ಶೇಖರಪ್ಪನ ಜೊತೆ ಮಾತನಾಡುವಾಗ ತಾನೊಬ್ಬ ಹಳ್ಳಿಯ ಹುಡುಗ. ತನಗೂ ಇಂಗ್ಲೀಷ್ ಬರುವುದೆಂಬ ಕೃತಕತೆಯಿಂದ ಮಾತನಾಡುವ, ಅವನ ರೀತಿ, ವರ್ತನೆಗಳು, ಸಹಜವಾಗಿಯೇ, ಹಳ್ಳಿಯೊಬ್ಬನ ಮುಗ್ಧತೆಯ ಆತಂಕಗಳು ವ್ಯವಸ್ಥೆಯಲ್ಲಿ ತನಗೆ ಬರಬೇಕಾದ ಸ್ಕಾಲರ್‌ಶಿಪ್‌ಗಾಗಿ ತನ್ನ ತಾಯಿ, ನಿಂಗೇಗೌಡರ ನಿವೇದನೆಯ ರೀತಿಯ ಸಿಟ್ಟು, ಕೋಪ, ತಾತ್ವಿಕತೆಯಿಂದ ಕೂಡಿರುತ್ತಾನೆ.

ಉಮಾಪತಿಯ ಮೂಲಕವೇ ಇಡೀ ಕಥೆಯನ್ನು ಗ್ರಹಿಸುವ ಕಥೆಗಾರರು ಈರಪ್ಪನ ವ್ಯಕ್ತಿತ್ವವು ಉಳಿದ ವ್ಯಕ್ತಿತ್ವಗಳಿಗಿಂತ ಭಿನ್ನವಾಗಿ ಸ್ಫೋಟಗೊಳಿಸಿದ್ದಾರೆ. ಇಡೀ ಕಥೆಯು ಹಳ್ಳಿಯಿಂದ ನಗರದ ತನಕ ಉಮಾಪತಿಯು ಬರುವುದನ್ನು ಕುರಿತು ಹೇಳುವುದಾಗಿದೆ. ಇದು ಸರ್ಕಾರದ ಸವಲತ್ತುಗಳನ್ನು, ಸೌಲಭ್ಯಗಳನ್ನು ಪಡೆ0ುಲು ದೀರ್ಘವಾದ 0ುಾತೆ0ುೀ ಮಾಡಬೇಕಾಗಿರುವ ಒಂದು ವ್ಯವಸ್ಥೆ0ು ಜೊತೆಗೆ ಸಂಪರ್ಕ ಪಡೆ0ುುವ 0ುಾತ್ರೆ0ುೆನಿಸಿದೆ. ಗ್ರಾಮೀಣ ಪರಿಸರದಲ್ಲಿ ಇರುವ 0ುುವಕ ಹೇಗೆ ನಗರದಲ್ಲಿನ ಕೃತಕ ಮಾತುಗಳು ಸಂಬಂಧಗಳ ನಡುವೆ ತೀವ್ರವಾಗಿ ಚಡಪಡಿಸುವಿಕೆ0ುನ್ನು ಕಾಣಬಹುದು.

ಜೊತೆಗಾರ ಕಥೆಯಲ್ಲಿ ನಗರದಿಂದ ಹಳ್ಳಿಗೆ ಬರುವ ಸೀತಾರಾಮು ಪತ್ರಿಕೆ ವರದಿಗಾರ ನಾ0ುಕರು ದೊಡ್ಡ ಸಾಹಿತಿ0ುಾಗಿ ಹೆಸರು ಮಾಡಿದವರು. ತನ್ನ ಹಳ್ಳಿ0ುಲ್ಲಿ ಇದ್ದುಕೊಂಡು ತೋಟ, ಹೊಲ ಗದ್ದೆಗಳನ್ನು ನೋಡಿಕೊಳ್ಳುತ್ತಿರುವರು. ಇಡೀ ಹಳ್ಳಿ0ುಲ್ಲಿ ಪ್ರಭಾವಿ ಎನಿಸುವ ವ್ಯಕ್ತಿ. ಸೀತಾರಾಮ ಬಂದಾಗ ತಾನು ಹಿಂದೆ ನೋಡಿರುವ ನಾ0ುಕರಿಗೂ ಈಗಿರುವ ನಾ0ುಕರಿಗೂ ಸಾಕಷ್ಟು ವ್ಯತ್ಯಾಸಗಳು.

[illegible]

ಇದಕ್ಕೆ ಕಾರಣ ಹಳ್ಳಿಯಲ್ಲಾದ ಬದಲಾವಣೆಗಳು. "ಕಾಡಿನ ನಡುವಿನ ನಾಯಕರ ಮನೆ, ತೋಟ, ಗದ್ದೆಗಳ ಪ್ರಶಾಂತತೆಯಿಂದ ಅವನ ತಲೆ ಕೆಟ್ಟುಹೋಗಿತ್ತು. ತನ್ನ ಯಾವೊಂದು ಆಸಕ್ತಿಯ ಬಗ್ಗೆಯೂ ಅವರೊಂದಿಗೆ ಮಾತನಾಡಲಿಲ್ಲ.*(2) ಈ ರೀತಿಯ ಅಸಡ್ಡೆ ಮಾಡುವಂತಹ ನಾಯಕರ ವ್ಯಕ್ತಿತ್ವದ ಬಗ್ಗೆ ಸೀತಾರಾಮ ಅನೇಕ ಕುತೂಹಲಗಳನ್ನಿಟ್ಟುಕೊಂಡು ಅವರ ವ್ಯಕ್ತಿತ್ವದ ಬಗ್ಗೆ ಕೆದಕುತ್ತಾ ಹೋದಂತೆಲ್ಲಾ ಅನೇಕ ರೀತಿಯ ಮುಖಗಳು, ಸತ್ಯಗಳು ಹೊಳೆಯಲಾರಂಭಿಸುತ್ತವೆ. ನಾಯಕರು ತುಂಬಾ ಬದಲಾಗಿದ್ದಾರೆ ಎಂದೆನಿಸುತ್ತಿತ್ತು. "ಸೀತಾರಾಮುವಿಗೆ ತನ್ನ ಮತ್ತು ಅವರ ನಡುವೆ ಮಾತು ಸಾಧ್ಯವಿಲ್ಲ ಎನಿಸಿತ್ತು. ತತ್ವಗಳ ಮಾತು ಹೋಗಲಿ, ರಾಜಕೀಯ ಬೆಳವಣಿಗೆ, ನಾಟಕ, ಪದ್ಯ ಎಲ್ಲಾ ಅವರ ಮನಸ್ಸಿನಿಂದ ಹೊರಟು ಹೋದ ಆಗಿತ್ತು. ಇದ್ದಕ್ಕಿದ್ದಂತೆ ಕೆಂಪು, ಕಂದು ಕಪ್ಪು ಮಣ್ಣವನ್ನು ಕುರಿತು ಅವುಗಳ ವಿವಿಧ ವಾಸನೆ ಕುರಿತು, ಹೆಣ್ಣು ಬೆವರನ್ನು ಕುರಿತು, ಹೊಲೆಯರ ಗಬ್ಬನ್ನು ಕುರಿತು, ಬದುಗಳ ಪಕ್ಕದಲ್ಲಿ ವಾಸಿಸುವ ಹುಳುಗಳನ್ನು ಕುರಿತು, ಕಪ್ಪಾಳಿಗಳ, ದರಿಗಳ ಹೂವುಗಳನ್ನು ಕುರಿತು ಮಾತಾಡ ಹತ್ತುವರು.*(3) ಹಳ್ಳಿಯವನ ನೆಲದ ವಾಸನೆಗೆ ತುಂಬಾ ಬದಲಾಗಿದ್ದ ನಾಯಕರಲ್ಲಿ ಇತ್ತೀಚೆಗೆ ಅಲ್ಲಿನ ಸೋಷಿಯಲಿಸ್ಟ್ ಕ್ರಾಂತಿ ಮಾಡುವ ಸ್ಟೀಫನ್ ಜೋಸೆಫೈನರ ಬಗ್ಗೆ ತೀವ್ರವಾಗಿ ಯೋಚಿಸುತ್ತಿರುವ, ನಿಗೂಢವಾಗಿರುವ ಇವರ ವರ್ತನೆಯನ್ನು ಸೀತಾರಾಮ ಬೆನ್ನು ಹತ್ತತೊಡಗಿದ.

"ಜೋಸೆಫೈನ್ನಳ ಜೊತೆಗಿನ ಸಂಬಂಧ, ಕ್ರಿಸ್ತ ಮತದ ಬಗ್ಗೆ ಇರುವ ಉದಾರ ನೀತಿ ಇದೆಲ್ಲವೂ ಸೀತಾರಾಮನನ್ನು ಕಂಗೆಡಿಸಿದ್ದವು. ನಾಯಕರ ಈ ಊರು ಸೊಷಾಲಿಸ್ಟ್ ಗದ್ದಲ ಶುರುವಾಗಿ ನಾಲ್ಕೈದು ವರ್ಷ ಆಗಿತ್ತು. ನಾನು ಅವರ ಜೊತೆ ಸೇರಿ ಮತ್ತೆ ಕ್ರಿಯಾಶಾಲಿ ಆಗಬಹುದಿತ್ತು. ನನ್ನಿಂದ ಅದು ಆಗಲಿಲ್ಲ. ನಮ್ಮ ಸಂಪ್ರದಾಯದ ಸತ್ವವನ್ನೆಲ್ಲಾ ಪ್ರತಿನಿಧಿಸುವ ಮನುಷ್ಯ ತಾನೆ ಅದಕ್ಕೆ

ಆಗಲಿಲ್ಲ. *(4) ಈ ಮಾತುಗಳಿಂದ ಹೊಸದಾಗಿ ಹಳ್ಳಿಗೆ ಬಂದ ರಾಜಕೀ೦ು ಸಿದ್ಧಾಂತ ಹೋರಾಟಗಳಿಗೆ ನಾ೦ುಕರು ಒಗ್ಗಿಕೊಳ್ಳಲಾರನೆಂಬುದನ್ನು ಹೇಳುವಂತಿದೆ. ಒಂದು ರೀತಿ೦ುಲ್ಲಿ ಹೊಸದಾಗಿ ಪ್ರವೇಶ ಮಾಡಿದುದರ ಬಗೆಗಿನ ತಿರಸ್ಕಾರ, ಕುತೂಹಲವನ್ನಿಟ್ಟುಕೊಂಡವರು. ಹಳ್ಳಿ೦ುಲ್ಲಾದ ಇಂತಹ ಬದಲಾವಣೆಗಳನ್ನು ಬೇಗ ಸ್ವೀಕರಿಸುವುದಾಗಲೀ, ವಿರೋಧಿಸುವುದಾಗಲೀ ಸಾಧ್ಯವಿಲ್ಲವೆಂಬುದನ್ನು ಕಾಣಬಹುದು ಮತ್ತು ಇದೇ ಕಥೆ೦ುಲ್ಲಿ ನಾ೦ುಕರು ಹೇಳುವ ಇನ್ನೊಂದು ಕಥೆ೦ು "ಮಗಳನ್ನು ಸಂಭೋಗಿಸಿ ಸತ್ತ ಬೆನಕನದ್ದು".*(5) ಕ್ರಾಂತಿ೦ುನ್ನು ಕಲಿತ ಬೆನಕ ದೆವ್ವದ ಹೊಲದಿಂದ ಬೆಳೆ ಬೆಳೆ೦ುಲು ಹೋಗಿ ದುರಂತವನ್ನಪ್ಪುವಂತಹ ಸ್ಥಿತಿ.. ಕೊನೆಗೆ ನಾ೦ುಕರು ಕೂಡಾ ಸಾವನ್ನಪ್ಪುತ್ತಾರೆ.

ಇದೇ ಕಥೆ೦ು ಮೂಲಕ ಒಂದು ಹಳ್ಳಿ೦ುಲ್ಲಾದ ಸಾಮಾಜಿಕ, ಧಾರ್ಮಿಕ, ರಾಜಕೀ೦ು ಪ್ರಭಾವಗಳು ಹೇಗೆ ಒಬ್ಬ ಸೃಜನಶೀಲ ವ್ಯಕ್ತಿತ್ವಕ್ಕೂ ಕೂಡಾ ಕ್ರಮೇಣ ಬದುಕಿನ ಕ್ಷುದ್ರತೆ೦ುೆನಿಸುವೆಡೆಗೆ ನಡೆ೦ುುತ್ತಾನೆಂಬುದನ್ನು ಕಾಣಬಹುದು. ಹಳ್ಳಿ೦ುಲ್ಲಾದ ಸಾಂಸ್ಕೃತಿಕವಾದ, ಸಾಮಾಜಿಕವಾದ, ರಾಜಕೀ೦ು ಬದಲಾವಣೆಗಳು ಕೂಡಾ ೦ುಶಸ್ಸನ್ನು ಗಳಿಸಿದ ವ್ಯಕ್ತಿತ್ವದ ದೊಡ್ಡಸ್ತಿಕೆ೦ುನ್ನು ಅನುಮಾನದಿಂದ ನೋಡುವುದನ್ನು ಕಾಣಬಹುದು. ನಾ೦ುಕರು ಈ ಸೋಲು ಸಾಹಿತ್ಯ ವಲ೦ುದಲ್ಲಿನ ಸಾಂಸ್ಥಿಕ ಸಮಾಜದ ಸೋಲಾಗಿ೦ೂ ಪರಿಣಮಿಸುವುದನ್ನು ಗಮನಿಸಿದಾಗ ಲಂಕೇಶರ ಸಮಾಜವಾದಿ ಬರವಣಿಗೆಗೆ ಇದು ಉತ್ತಮ ಕತೆ೦ುೆನಿಸುತ್ತದೆ ಮತ್ತು ಹಳ್ಳಿ೦ು ಬದಲಾವಣೆಗಳ ಕುರಿತಾದ ದೃಷ್ಟಿಕೋನವು ಮುಖ್ಯವೆನಿಸಿದೆ.

'ಮಾರಲಾಗದ ನೆಲ' ಕಥೆ೦ು ನಗರದ ವಿಶ್ವನಾಥನು ತನ್ನ ಭೂಮಿ೦ುನ್ನು ಮಾರುತ್ತೇನೆಂದು ಹಳ್ಳಿಗೆ ಹೋಗಿ ಹೇಗೆ ವಿಚಿತ್ರ ಘಟನೆಗಳನ್ನು

ಪರಿಸ್ಥಿತಿಯ ಸುಳಿಯಲ್ಲಿ ಸಿಕ್ಕಿ ಕೊನೆಗೆ ಮಾರಲಾಗದೆ ಪಟ್ಟಣಕ್ಕೆ ಹಿಂದಿರುಗುವಂತಹ ಕಥೆಯಾಗಿದೆ. ಹಳ್ಳಿಯಲ್ಲಿನ ಮೌಢ್ಯತೆ ಮತ್ತು ಭೂಮಿಯ ಸಂಬಂಧಗಳ ನಡುವೆ ವಿಶ್ವನಾಥ ಹಳ್ಳಿಯಲ್ಲಿನ ಪರಿಸರ, ದಿಗ್ಭ್ರಮೆ ವಾತಾವರಣ ಕ್ಷುದ್ರವೆನಿಸುವ ವಿಷಯಗಳ ನಡುವೆ ಮಾರಲಾಗದೆ ವಾಪಾಸಾಗುತ್ತಾನೆ. ತನ್ನ ಭೂಮಿಯನ್ನು ನೋಡಿಕೊಳ್ಳುವ ದುರುಗ ಸರಿಯಾಗಿ ಉಳುಮೆ ಮಾಡದೆ ಇರುವವನು. ಇದರಿಂದ ತನ್ನ ಭೂಮಿಯನ್ನು ಮಾರುವ ಹೊಣೆಯನ್ನು ಊರಿನ ಮಹಾದೇವಪ್ಪನಿಗೆ ಒಪ್ಪಿಸಲು ಮುಂದಾಗುತ್ತಾನೆ. ಆದರೆ ಅದು ಸಾಧ್ಯವಾಗದೆ ಊರಿನ ಎಲ್ಲಾ ಘಟನೆಗಳು ವಿಶ್ವನಾಥನಿಗೆ ಸಂಬಂಧ ಹೊಂದುತ್ತಾ ಹೋಗುತ್ತವೆ. ದುರುಗನ ಸಾವು ಸಂಕ್ರಪ್ಪ, ರುದ್ರಮೂರ್ತಿ, ಸಾವಂತ್ರ ಎಲ್ಲರೂ ಕೂಡಾ ವಿಶ್ವನಾಥನಿಗೆ ವಿಚಿತ್ರವೆನಿಸತೊಡಗಿದರು. ಇಂತಹ ಸ್ಥಿತಿಯಲ್ಲಿ ತುಂಬಾ ಅಸಾಹಯಕತೆ ಒಂಟಿತನ ಮುತ್ತಿದಂತ್ತಿತ್ತು. "ಯಾರು ನನ್ನ ನೆರವಿಗೆ ಬರುವ ಸಾಧ್ಯತೆ ಇರಲಿಲ್ಲ. ಘಟನೆಗಳಲ್ಲಿ ಎಷ್ಟು ಮೂಢ ನಂಬಿಕೆ, ಎಷ್ಟು ಸ್ವಾಭಾವಿಕ ಎಷ್ಟು ಭೂತ ಚೇಷ್ಟೆ ಎಂಬುದು ಬಗೆಹರಿಯದ ಸಂಭವ ಇರಲಿಲ್ಲ. ನಾನು ಕಂಡಾ ಊರು ಬದಲಾಗಿದೆ. ನಾನು ಬದಲಿಸಿದ್ದೇನೆ ಎಂದು ದಿಗ್ಭ್ರಾಂತಿಯಾಯಿತು". *(6) ವಿಶ್ವನಾಥನ ಈ ದಿಗ್ಭ್ರಾಂತಿ ಸಹಜವೆನಿಸುವಂತಹದು ಮತ್ತು ನಗರದವನೊಬ್ಬನನ್ನು ತನ್ನ ಬಾಲ್ಯ ಕಾಲದಲ್ಲಿನ ಹಳ್ಳಿಯ ಬಗ್ಗೆ ಇರುವ ಕುತೂಹಲ, ಆಸಕ್ತಿಯಷ್ಟೇ. ಅದು ಅವನಿಗೆ ಇದೆಲ್ಲವೂ ಇಲ್ಲದಿರಬಹುದು.

ಈ ಊರಿನಲ್ಲಿ ಬರುವ ಚೆಲುವಮ್ಮ, ಮಾಸ್ತರು, ಭೈರಪ್ಪನಂತಹವರು ಹೇಗೆ ಒಂದು ಘಟನೆಯನ್ನು ಬಳಸಿಕೊಂಡು ಇಡೀ ಊರನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಪ್ರಯತ್ನವು ಕಾಣಬಹುದಾಗಿದೆ. ತನ್ನ ಮಗಳ ಮೇಲಿನ ಅತ್ಯಾಚಾರಕ್ಕೆ ಪ್ರಯತ್ನವು ಕಾಣಬಹುದಾಗಿದೆ. ತನ್ನ ಮಗಳ ಮೇಲಿನ ಅತ್ಯಾಚಾರಕ್ಕೆ

ಇಡೀ ಊರಿನವರ ಮೇಲೆ ಕಂಪ್ಲೈಂಟ್ ನೀಡಿ ಏನೂ ಪ್ರಯೋಜನವಾಗದೆ ಕೊನೆಗೆ ತಾನೇ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಪತ್ರಿಕೆಗಳಿಗೆ ತಿಳಿಸಿ ದಿನಾಂಕವನ್ನು ನಿಗದಿ ಮಾಡಿದ್ದಳು. ವಾತಾವರಣದಲ್ಲಿ ಹಳ್ಳಿಯ ಜನರು ಇಂತಹ ಘಟನೆಗಳ ಬಗ್ಗೆ ಒಂದು ರೀತಿಯ ತೀವ್ರ ಕುತೂಹಲವನ್ನಿಟ್ಟುಕೊಂಡು ಮುಂದಿನ ಘಟನೆಗಾಗಿ ಕಾಯುತ್ತಿದ್ದರು. ಆದರೆ ಕೊನೆಗೆ ವಿಚಿತ್ರ ರೀತಿಯಲ್ಲಿ ಚೆಲುವಮ್ಮನ ಮನೆಯು ಸುಟ್ಟು ಉರಿಯತೊಡಗಿತು. ಎಲ್ಲವೂ ಕೂಡಾ ರಹಸ್ಯವೆನಿಸುತ್ತಿತ್ತು. ಕೃಷ್ಣ ಚೆಲುವಮ್ಮನ ಮಗಳನ್ನು ಮದುವೆಯಾದ ನಂತರ ಎಲ್ಲಾ ನೆಮ್ಮದಿಯಂತೆ ಅನಿಸುತ್ತಿತ್ತು. ಕತೆಯ ತುಂಬಾ ಹೆಣ್ಣೊಬ್ಬಳು ತನ್ನ ಇಡೀ ಊರನ್ನು ಎದುರಿಸಿ ಬದುಕುವ ಎಲ್ಲವನ್ನು ಧಿಕ್ಕರಿಸಿ ನಡೆಯುವ ಛಲದಿಂದಾಗಿಯೇ ಆಕೆಗೊಂದು ವಿಶಿಷ್ಟ ವ್ಯಕ್ತಿತ್ವ ಹಳ್ಳಿಯಲ್ಲಿ ಲಭಿಸಿದೆ.

ಲಂಕೇಶರು ಬರೆಯುತ್ತಿದ್ದ ಕಾಲಘಟ್ಟವು ತುಂಬಾ ಸಂಕೀರ್ಣವಾದ ಕಾಲಘಟ್ಟವೆಂದು ಹೀಗಾಗಲೇ ಹಿಂದೆ ಹೇಳಲಾಗಿದೆ. ಇಂತಹ ಸಂದರ್ಭದಲ್ಲಿ ಚಳುವಳಿಗಳು ಸಾಹಿತ್ಯ ತತ್ವಕ್ಕೆ ಆ ಪರಂಪರೆಗೂ ಒಂದು ರೀತಿಯ ನಿಶ್ಚಿತವಾದ ಸಂಬಂಧವಿರಬಹುದಾದ್ದರಿಂದ ಇವರ ಕಥೆಗಳಲ್ಲಿ ಅದು ಅಭಿವ್ಯಕ್ತವಾಗಿದೆ. ಗ್ರಾಮೀಣ ಹಿನ್ನೆಲೆಯಿಂದ ಬಂದ ಲಕೇಶರ ಅಲ್ಲಿನ ಪ್ರೀತಿ, ಪಕೃತಿ, ಮೋಸ, ಹಾದರ, ಸುಳ್ಳು, ಪ್ರಾಮಾಣೀಕತೆ, ದ್ವೇಷ ಕೊಲೆ ಎಲ್ಲವನ್ನೂ ಇಷ್ಟಪಡುತ್ತಿದ್ದವರು ತಮ್ಮ ಬದುಕಿನ ಎಲ್ಲಾ ವಿಷಮ ಸ್ಥಿತಿಗಳ ನಡುವೆ ವೈಯುಕ್ತಿಕವಾಗಿ ಲಂಕೇಶರು ಹಳ್ಳಿಯ ಜೀವನವನ್ನು ಇಷ್ಟಪಡುತ್ತಿದ್ದವರು. ಅಲ್ಲಿನ ಎಲ್ಲಾ ಕ್ಷುದ್ರತೆಗಳ ನಡುವೆಯೇ ಅದೆಲ್ಲವನ್ನು ಮೀರಿಸುವಂತಹ ಪ್ರೀತಿ, ಮಾನವೀಯತೆ, ಪ್ರಾಮಾಣೀಕತೆಯನ್ನು ಕಂಡುಕೊಂಡವರು.

ಲಂಕೇಶರ ಮತ್ತೊಂದು ಪ್ರಮುಖ ಕಥೆಯಾದ **ಮಂಜು ಕವಿದ ಸಂಜೆ ಮತ್ತು ಇತರ ಕಥೆಗಳು** ಎಂಬ ಕಥಾ ಸಂಕಲನದಲ್ಲಿ ಬರುವ ಕ್ವೀಜುವಿನ ಹಠ, ದಯೆ ಮತ್ತು ದಾಕ್ಷಿಣ್ಯ ಎಂಬ ಕಥೆಯಲ್ಲಿ ಪಿ. ಲಂಕೇಶ್‌ರವರು ಗ್ರಾಮೀಣ ಪ್ರದೇಶದಲ್ಲಿ ಊರಿನ ಗೌಡರ ದೌರ್ಜನ್ಯ, ದಬ್ಬಾಳಿಕೆ, ಕ್ರೌರ್ಯ, ಹಿಂಸೆ ಇವುಗಳ ವಿರುದ್ಧ ಒಬ್ಬ ಸಾಮಾನ್ಯ ಹೆಣ್ಣು ಮಗಳಾದ ಕ್ವೀಜುಗೌಡರ ವಿರುದ್ಧ ತಾನು ನ್ಯಾಯಕ್ಕಾಗಿ ಹಂಬಲಿಸಿ ಹಳ್ಳಿಯ ಪಂಚಾಯಿತಿ ತೀರ್ಮಾನವನ್ನು ಧಿಕ್ಕರಿಸಿ ನಗರ ಪ್ರದೇಶದ ಕೋರ್ಟ್‌ಗೆ ಅರ್ಜಿಯನ್ನು ಸಲ್ಲಿಸಿ ನ್ಯಾಯವನ್ನು ಕೇಳುವ ಧೈರ್ಯವನ್ನು ಮಾಡುತ್ತಾಳೆ. ಇಲ್ಲಿ ಲಂಕೇಶ್‌ರವರು ಹೆಣ್ಣಿನ ಹಠ, ಛಲ, ಧೈರ್ಯವನ್ನು ಕಥೆಯಲ್ಲಿ ಗ್ರಾಮೀಣ ಮಹಿಳೆಯ ತಳಮಳವನ್ನು ಚಿತ್ರಿಸಿದ್ದಾರೆ. ಕಥೆಯ ಪ್ರಾರಂಭದಲ್ಲಿ ಗೌಡರು ಕ್ವೀಜುವಿನ ಗಂಡನ ತೊಡೆಗೆ ಯಾವುದೋ ಮಾತಿಗೆ ಒದ್ದು ಬಿಡುತ್ತಾನೆ. ಒದೆಸಿಕೊಂಡು ಕ್ವೀಜುವಿನ ಗಂಡನಿಗೆ ಏನಾಗಿದೆಯೋ ಎಂದು ಹೆದರಿಕೊಂಡು ತುಂಬು ಬಸುರಿಯಾಗಿದ್ದ ಕ್ವೀಜು ಅಣ್ಣನ ಮಗಳು ಮ್ಯೇಜೀಯಾದೊಂದಿಗೆ ಗಾಡಿಯಲಿ ಆಸ್ಪತ್ರೆಗೆ ನೂಕಿಕೊಂಡು ಹೋಗುತ್ತಾಳೆ. ಆಗ ಡಾಕ್ಟರಿಗೂ ಈ ಕೇಸನ್ನು ಕಂಡು ಅಚ್ಚರಿಪಟ್ಟರು ಅಂತಹ ಒಡೆತ ಬಿದ್ದಿಲ್ಲ. ಸದ್ಯಕ್ಕೆ ಒಂದು ಬೀಜ ಊದಿಕೊಂಡಿದೆ. ಔಷಧಿ ಕೊಡುತ್ತೇನೆ. ಹಚ್ಚಿ ಕ್ರಮೇಣ ಸರಿಹೋಗುತ್ತದೆ ಎಂದರು. ಅದರೆ ಕ್ವೀಜು ಚೈನಾದ ಕಮ್ಯುನಿಸ್ಟರು ಹಲವು ಗ್ರಾಮಗಳ ಉಸ್ತುವಾರಿಗೆ ನೇಮಿಸಿದ್ದ ವಿಶೇಷ ಅಧಿಕಾರಿಯನ್ನು ಕಾಣುತ್ತಾಳೆ. ಅತ ಗೌಡನಿಗೆ ನೀವು ಮರ್ಮಾಂಗಕ್ಕೆ ಒದ್ದದ್ದು ಸರಿಯೆ ಎಂದು ಕೇಳುತ್ತಾನೆ. ಗೌಡ ನಾನೇನು ಬೇಕೆಂದು ಒದ್ದದ್ದಲ್ಲ ಎಂದು ಹೇಳುತ್ತಾನೆ. ನಾನು ನಿಮ್ಮ ತೀರ್ಮಾನಕ್ಕೆ ಬದ್ಧವಾಗಿ ದಂಡ ಕೊಡುತ್ತೇನೆ. ಅದು ಸಾಲದು ಎಂದರೆ ನಾನು ಪ್ಯಾಂಟು ತೆಗೆದು ನಿಲ್ಲುತ್ತೇನೆ. ಅವನು ನನಗೆ ಎಲ್ಲಿಗೆ ಬೇಕಾದರು ಒದೆಯಲಿ ಎಂದು ಹೇಳುತ್ತಾನೆ. ಕ್ವೀಜು ಅದಕ್ಕೆ ಒಪ್ಪುವುದಿಲ್ಲ. ಅವನ ಆಸ್ಪತ್ರೆ ಖರ್ಚು ಕೊಡುವಂತೆ ಅಧಿಕಾರಿ ಹೇಳುತ್ತಾನೆ. ಗೌಡ ಕೊಡಲು ಒಪ್ಪುತ್ತಾನೆ. ಮಾರನೇ ದಿನ ಆ ಹಣವನ್ನು ಈಸಿ

ಕೊಂಡು ಬರಲು ಹೋದಾಗ ಗೌಡ ಅವಳ ಕಡೆ ಹಣ ಎಸೆದು ಆರಿಸಿಕೋ ಎಂದು ತಲೆ ಪರಟೆ ಮಾಡುತ್ತಾನೆ. ಅವನ ವರ್ತನೆಯನ್ನು ಕಂಡ ಕ್ವೀಜುವು ಹಣವನ್ನು ಆರಿಸಿಕೊಳ್ಳದೆ ಬಂದು ಬಿಡುತ್ತಾಳೆ. ತಾನು ಒದದ್ದಕ್ಕೆ ಕ್ಷಮೆಯನ್ನಾದರೂ ಕೇಳಬಹುದು ಎಂದು ತಿಳಿದಿದ್ದ ಆಕೆಗೆ ನೋವಾಗುತ್ತದೆ. ಇದರಿಂದ ಬೇಸತ್ತ ಕ್ವೀಜು ಪಟ್ಟಣಕ್ಕೆ ಹೋಗಿ ದೂರು ಕೊಡುತ್ತಾಳೆ. ಕ್ವೀಜುವಿಗೆ ಅರ್ಜಿ ಕೊಡಲು ಬರೆಯಲು ಬರುವುದಿಲ್ಲ. ಈಗೆ ಮನೆಯಲ್ಲಿದ್ದ ಮೆಣಸಿನ ಕಾಯಿ ಮಾರಿ ಅರ್ಜಿ ಬರೆಯುವವನಿಗೆ ಪಣವನ್ನು ಕೊಟ್ಟು ದೂರು ಬರೆಸಿ ಅಧಿಕಾರಿಗೆ ಕೊಡುತ್ತಾಳೆ. ಅಧಿಕಾರಿ ತುಂಬಾ ಒಳ್ಳೆಯವನು ರಾಜಿಮಾಡಿಕೊಂಡು ಬಿಡಿ ಎಂದು ಹೇಳುತ್ತಾನೆ. ಆದರೆ ಕ್ವೀಜು ಮತ್ತೆ ಮೆಣಸಿನ ಕಾಯಿ ಗಂಟು ಕಟ್ಟಿಕೊಂಡು ಇನ್ನು ದೊಡ್ಡಪಟ್ಟಣಕ್ಕೆ ದೂರು ಕೊಡಲು ಹೋಗುತ್ತಾಳೆ. ಆದರೆ ಗ್ರಾಮೀಣ ಪ್ರದೇಶದಲ್ಲಿನ ವಾತಾವರಣದಲ್ಲಿ ಬೆಳೆದ ಕ್ವೀಜುವಿಗೆ ಪಟ್ಟಣದಲ್ಲಿನ ದೃಶ್ಯಗಳು ಬೇರೆ ತರವೇ ಇರುತ್ತವೆ. ಅವಳ ಬಳಿ ಇರುವ ದುಡ್ಡಿಗೆ ಹೋಟೆಲ್‌ನಲ್ಲಿ ಮಲಗುವ ಜಾಗ ಮಾತ್ರ ಸಿಗುತ್ತದೆ. ಹಳ್ಳಿಯ ಈ ಮುಗ್ಧ ಹೆಂಗಸಿಗೆ ಪೇಟೆಯ ರಿಕ್ಷಾದವರು ಮೋಸ ಮಾಡುತ್ತಾರೆ. ಬೇಕೆಂತಲೆ ಕ್ವೀಜು ಮತ್ತು ಮೈಜೀಯರನ್ನು ಪಟ್ಟಣದ ಸುತ್ತಾ ತಿರುಗಿಸುತ್ತಾರೆ. ಹೆಚ್ಚು ಹಣವನ್ನು ಕೀಳುತ್ತಾರೆ. ಇವರ ಈ ಗೋಳನ್ನು ನೋಡಲಾಗದ ಹೋಟೆಲ್‌ನ ಏಜೆಂಟ್ ಒಬ್ಬ ಅವರಿಗೆ ನೆರವಾಗುತ್ತಾನೆ. ನ್ಯಾಯಾಲಯಕ್ಕೆ ಹೋದರೆ ಮತ್ತೆ ಸೋಲುವಿರಿ. ಅದರಿಂದ ನಿವು ನ್ಯಾಯಮೂರ್ತಿಯನ್ನು ಅವರ ಮನೆಯಲ್ಲಿ ನೋಡಬೇಕೆಂದು ಹೇಳುತ್ತಾನೆ. ನ್ಯಾಯಮೂರ್ತಿಯವರಿಗೆ ಏನಾದರೂ ಉಡುಗೊರೆಕೊಂಡುಕೊಂಡು ಹೋಗಲು ಕ್ವೀಜುವಿಗೆ ಆಸೆ. ನ್ಯಾಯಮೂರ್ತಿ ನೋಡಿದೊಡನೆ ಅವರಿಗೆ ನನ್ನ ಕೇಸು ಗೋಳು ನನಪಾಗಬೇಕು ಎಂದುಕೊಂಡು ಒಂದು ನಿಸರ್ಗದ ವರ್ಣ ಚಿತ್ರ ಕೊಂಡುಕೊಳ್ಳುತ್ತಾರೆ. ನ್ಯಾಯಮೂರ್ತಿಯನ್ನು ನೋಡುತ್ತಾರೆ. ಆತ ಎಷ್ಟು ಒಳ್ಳೆಯ ವ್ಯಕ್ತಿ ಎಂದರೆ ಹಣ್ಣು, ಚಿತ್ರ ಯಾವುದನ್ನು ತೆಗೆದುಕೊಳ್ಳದೆ ಅವರನ್ನು ಪ್ರೀತಿಯಿಂದ

[illegible]

ಮಾತನಾಡಿಸಿ ಬೀಳ್ಕೊಡುತ್ತಾನೆ. ಆದರೆ ಕ್ವೀಜು ಮತ್ತೆ ಕೇಸ್‌ನಲ್ಲಿ ಸೋಲುತ್ತಾಳೆ. ಆದರೆ ಅವಳು ಮತ್ತೊಬ್ಬ ವಕೀಲನನ್ನು ನೋಡಿ ಫೀಸ್ ಕೊಟ್ಟು ಕೋರ್ಟ್‌ನಲ್ಲಿ ಕೇಸ್ ರಿಜಿಸ್ಟರ್ ಮಾಡಿ ಊರಿಗೆ ಬರುತ್ತಾರೆ. ವಕೀಲರು ಕ್ವೀಜುವಿನ ಗಂಡನ ಮೂಳೆ ಮುರಿದಿದ್ದರೆ ಕೇಸ್ ಕ್ವೀಜುವಿನ ಗಂಡನ ಕಡೆ ಆಗುತ್ತದೆ ಎಂದು ಹೇಳುತ್ತಾರೆ. ಅಷ್ಟರಲ್ಲಿ ಕ್ವೀಜುವಿನ ಗಂಡನಿಗೆ, ಗೌಡನಿಗೆ ಯಲ್ಲರಿಗೆ ಕ್ವೀಜುವಿನ ಹಠಮಾರಿತನದಿಂದ ಬೇಸರವಾಗುತ್ತದೆ. ಗೌಡ ಮತ್ತು ರಾಜಿ ಮಾಡಿಕೊಳ್ಳಲು ಸಿದ್ಧನಾಗುತ್ತಾನೆ. ಕ್ಷಮೆ ಕೇಳಲು ಸಾಧ್ಯವಿಲ್ಲ ಎಂದು ಹೇಳುತ್ತಾನೆ. ಆದರೆ ಕ್ವೀಜು ಕ್ಷಮೆ ಕೇಳದಿದ್ದರೆ ಕ್ವೀಜು ರಾಜಿ ಆಗುವುದಕ್ಕೆ ಒಪ್ಪುವುದಿಲ್ಲ. ಆದರೆ ಕೋರ್ಟಿನಲ್ಲಿ ಕೇಸ್ ಗೌಡನ ಪರವಾಗುತ್ತದೆ. ಇಲ್ಲಿ ಪಿ. ಲಂಕೇಶ್‌ರವರು ಹಣ, ಅಧಿಕಾರ, ದರ್ಪದ ಮುಂದೆ ನ್ಯಾಯವೂ ಕೂಡಾ ಬಡವರ ಪಾಲಿಗೆ ಇಲ್ಲದಂತಾಗುತ್ತದೆ ಎಂದು ಈ ಕಥೆಯಲ್ಲಿ ಒಬ್ಬ ಗ್ರಾಮೀಣ ಮಹಿಳೆ ತನ್ನ ಪ್ರಯತ್ನದಿಂದ ವಿಫಲವಾಗುವುದು ಕಂಡು ಬಂದರೂ ಕ್ರಮೇಣವಾಗಿ ತಡವಾಗಿಯಾದರೂ ಗೌಡನಲ್ಲಿ ಮತ್ತು ಕ್ವೀಜುವಿನಲ್ಲಿ ಆಗುವಂತಹ ಮಹತ್ತರವಾದ ಬದಲಾವಣೆಯನ್ನು ಚಿತ್ರಿಸಿದ್ದಾರೆ. ಕ್ವೀಜುವಿಗೆ ಹೆರಿಗೆಯ ನೋವು ಕಾಣಿಸಿಕೊಳ್ಳುತ್ತದೆ. ಊರ ಸೂಲಗಿತ್ತಿಯರು ಎಷ್ಟೇ ಪ್ರಯತ್ನಿಸಿದರೂ ಹೆರಿಗೆಯಾಗುವುದಿಲ್ಲ. ರಕ್ತ ಹೊಳೆಯಂತೆ ಹರಿಯುತ್ತದೆ. ಅವಳು ಸತ್ತೇ ಹೋಗುತ್ತಾಳೆ ಎಂದು ಹೆದರಿ ಗೌಡನ ಸಹಾಯ ಕೇಳುತ್ತಾಳೆ. ಕೋರ್ಟು ಸಹಾಯ ಮಾಡಲಿ ಎಂದು ದಿಮಾಕಿನ ಮಾತು ಹೇಳುತ್ತಾನೆ. ಗಂಡ ಹಾಗೂ ಊರ ಜನ ಸೂಲಗಿತ್ತಿ0ುರ ಕಷ್ಟವನ್ನು ನೋಡಲಾಗದೆ ಗೌಡ ಕ್ವೀಜುವನ್ನು ಆಸ್ಪತ್ರೆಗೆ ಸೇರಿಸಿ ನೆರವಾಗುತ್ತಾನೆ. ಕೊನೆಗೆ ಎಲ್ಲರೂ ಒಂದಾಗುತ್ತಾರೆ. ಆದರೆ ಒಂದು ದಿನ ಗೌಡನಿಗೆ ಕೋರ್ಟಿನಲ್ಲಿ ಆಳವಾದ ತನಿಕೆ ನಡೆದು ಕ್ವೀಜುವಿನ ಗಂಡನ ಮೂಳೆ ಮುರಿದು ಆಮೇಲೆ ಮಾಗಿರುವುದಾಗಿ ಗೊತ್ತಾಗಿ ಗೌಡನಿಗೆ 15 ದಿನ ಜೈಲು ಶಿಕ್ಷೆ ಆಗಿರುತ್ತದೆ. ಗೌಡ ಕ್ಷಮೆ ಕೇಳಬೇಕೆಂದು ಮಾತ್ರ ಕೋರ್ಟಿಗೆ ಹೋಗಿದ್ದ ಕ್ವೀಜು ಈ ಕ್ರೂರ ಶಿಕ್ಷೆ0ು ಬಗ್ಗೆ ಕೇಳಿ ಆಘಾತಕ್ಕೊಳಗಾಗುತ್ತಾಳೆ. ಆದರೆ ಇದನ್ನು

ತಡೆಯಲು ಕ್ವೀಜು ಪ್ರಯತ್ನಿಸುತ್ತಾಳೆ. ದಯೆ, ದಾಕ್ಷಿಣ್ಯ, ವಿಷಾದ ಯಾವುದನ್ನು ಅರಿಯದ ಕೋರ್ಟ್ ತನ್ನ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ''ಹಳ್ಳಿಯ ಮುಗ್ಧ ಬಡಜನರ ಸ್ವಾಭಿಮಾನ, ಹಠ, ನ್ಯಾಯಕ್ಕಾಗಿ ಪರದಾಟ, ನ್ಯಾಯ ಸಿಕ್ಕಾಗ ಅವರಲ್ಲಿ ಉಂಟಾಗುವ ವಿಷಾಧ ಎಲ್ಲವನ್ನೂ ಹೇಳುವ ಕ್ವೀಜುವಿನ ಕಥೆಯಾಗಿದೆ. ಹಳ್ಳಿಯ ಮುಗ್ಧ ಜನರು ತಮ್ಮ ವೈಯುಕ್ತಿಕ ದ್ವೇಷದಿಂದ ನಗರ ಪ್ರದೇಶಕ್ಕೆ ನ್ಯಾಯ ಹುಡುಕೊಂಡು ಬಂದು ಅನುಭವಿಸಿದ ನೋವು ಅದರಿಂದ ಆದಂತಹ ತಳಮಳಗಳು ಮೋಸ ಇದನ್ನು ಪಿ. ಲಂಕೇಶ್‌ರವರು ನಗರ ಜೀವನಕ್ಕೂ ಇರುವ ಅಂತರವನ್ನು ಈ ಕಥೆಯಲ್ಲಿ ಸ್ಥೂಲವಾಗಿ ಗ್ರಹಿಸಿದ್ದಾರೆ. ಈ ಕಥೆಯಲ್ಲಿ ಬಂದಂತಹ ಹೋಟೆಲ್‌ನ ಏಜೆಂಟರು, ರಿಕ್ಷಾ ವಾಲಗಳು, ವಕೀಲರು ಎಲ್ಲರೂ ಕ್ವೀಜುವಿನ ಹಠಮಾರಿತನಕ್ಕೆ ಅವಳ ಸ್ವಾಭಿಮಾನ ಬುನಾದಿ ಅವಳ ಗಂಡನ ಹೊಂದಾಣಿಕೆ ಸಮಾಜೀಕತೆ ಕಾರಣ. ಊರ ಯಜಮಾನ, ಸರ್ಕಾರಿ ಅಧಿಕಾರಿ, ರೈತರ, ಹೊಂದಾಣಿಕೆ ಮತ್ತು ಅಂತರಾಳದ ದೂರು ಈ ಕಥೆಯಲ್ಲಿ ಬದಲಾವಣೆಯ ಸಂಕೇತವಾಗಿ ಕಂಡು ಬಂದಿದೆ. ಪಿ. ಲಂಕೇಶರು ಗ್ರಾಮೀಣ ಪ್ರದೇಶದ ಸೊಬಗನ್ನು ಇಷ್ಟಪಡುವವರು ಇವರು ರಚಿಸುವ ಕಥೆಯಲ್ಲಿ ಹಳ್ಳಿಯ ಬದಲಾವಣೆಗಳ ಕುರಿತಾದ ದೃಷ್ಟಿಕೋನವು ಮುಖ್ಯವೆನಿಸಿದೆ. ಒಂದು ರೀತಿಯಲ್ಲಿ ಹೊಸದಾಗಿ ಪ್ರವೇಶ ಮಾಡಿರುವ ಬಗೆಗಿನ ತಿರಸ್ಕಾರ ಕುತೂಹಲವನ್ನು ಇಟ್ಟುಕೊಂಡವರು ಹಳ್ಳಿಯಲ್ಲಾದ ಇಂತಹ ಬದಲಾವಣೆಗಳನ್ನು ಬೆಗೆ ಸ್ವೀಕರಿಸುವುದಾಗಲೀ, ವಿರೋಧಿಸುವುದಾಗಲೀ ಸಾಧ್ಯವಿಲ್ಲವೆಂಬುದನ್ನು ''ಕ್ವೀಜುವಿನ ಹಠ, ದಯೆ, ದಾಕ್ಷಿಣ್ಯ'' ಎಂಬ ಕಥೆಯಲ್ಲಿ ಪಿ. ಲಂಕೇಶ್‌ರವರು ಹಳ್ಳಿಗಳನ್ನು ನೋಡುವ ಕ್ರಮವೇ ಈ ರೀತಿಯದು ಎಂಬಂತೆ ಕಂಡುಬಂದಿದೆ.

ಅವರ 'ಕೊನೆ' ಕಥೆಯಲ್ಲಿ ಉಜ್ಜು ತನ್ನ ತಂದೆಯಿಂದ ಅವಮಾನಿತನಾಗಿ, ತಾನು ಸಾಯಬೇಕೆಂದು ನಿರ್ಧರಿಸಿ ಪಾರ್ವತಿಯನ್ನು ಮೋಹಿಸಿ ಇಡೀ ಊರನ್ನು ಎದುರು ಹಾಕಿಕೊಂಡವನು. ಹುಲಿಯೊಂದು ತನ್ನ ಊರಿಗೆ ನುಗ್ಗಿ ಸಿಕ್ಕಿದವರನ್ನೆಲ್ಲಾ ಸಾಯಿಸುತ್ತಿದ್ದಾಗ ಹೆದರದೆ ತನ್ನ ಒಂಬ್ಬಂಟಿತನ, ಸಾವು ಅವನನ್ನು ಮುತ್ತಿದ್ದವು. ಹುಲಿ ಊರಿಗೆ ನುಗ್ಗಿ ತನ್ನ ತಂದೆ ಊರಿನ ಗೌಡ, ದನ ಕರುಗಳು ಎಲ್ಲಾ ಸಾಯಿಸುತ್ತಿದ್ದಾಗ ಉಜ್ಜನು ಕೂಡಾ ಅವನನ್ನು ಮುತ್ತಿದ್ದವು. ಹುಲಿ ಊರಿಗೆ ನುಗ್ಗಿ ತನ್ನ ತಂದೆ ಊರಿನ ಗೌಡ ಅವನ ನಿರಾಶೆ, ಕಾಮ, ಕಿಚ್ಚು, ಆವೇಶ, ಅವನನ್ನು ಕೊಂದಂತೆ ಭಾಸವಾಗುತ್ತಿದ್ದವು. ಕೊನೆಗೆ ಇವೆಲ್ಲವನ್ನು ತೀರಿಸಿಕೊಳ್ಳಲೆಂಬ ಬಯಕೆಯಿಂದ ತನ್ನ ಎದುರಿಗೆ ಬಂದ ಪಾರ್ವತಿಯನ್ನು ಗಂಗೆಯನ್ನು ಬಲವಂತವಾಗಿ ಹಿಡಿದುಕೊಂಡು ತನ್ನ ಆಸೆಯನ್ನು ಹತ್ತಿಕ್ಕಲು ತೀವ್ರ ಪ್ರಯತ್ನಪಟ್ಟವನು. ಹುಲಿಯನ್ನು ಎದುರಿಸಲು ಕೋವಿ ಹಿಡಿದು ನಿಂತನು. ಆದರೆ ಅದರಲ್ಲಿ ಗುಂಡಿರಲಿಲ್ಲ. ಕ್ಷಣ ಕಾಲ ಅವನು ಎಲ್ಲವನ್ನು ನೆನಪಿಗೆ ತಂದುಕೊಂಡ. "ನನ್ನ ಸಾವು ಎಲ್ಲದರ ನೆನಪಿಗೆ" ಎಂಬಂತೆ ಕೊನೆಯಲ್ಲಿ ಉಜ್ಜನಿಗೆ ಅನಿಸುವುದು ನನ್ನ ಸಾವು ಪಾರ್ವತಿ ನನ್ನ ಕನಸಿನಲ್ಲಿ ಸೂಡಿದ ಬಾಸಿಂಗದ ಸಕ್ಕರೆ ನೆನಪಿಗೆ ಶಾರದೆಯ ನೆನಪಿಗೆ ಪದ್ಮಿನಿಯ ಬಿಸಿ ಮುತ್ತು ನೆನಪಿಗೆ ಬಂತು. ಜೊತೆಗೆ ಕಣ್ಣಪ್ಪನ ಪ್ರೀತಿಯ ಹೆಸರಲ್ಲಿ ಗಂಗೆ ಅವಚಿದಾಗ ಬಿದ್ದ ಏಟು ನೆನಸಿಕೊಂಡು, ಅವಳ ಕೂಸಿನ ಒಳ್ಳೆಯದಕ್ಕೆ ಅಪ್ಪನ ಆತ್ಮ ತಣ್ಣಗಿರಲಿ ಅಂತ ಹೆತ್ತವ್ವನ ಒಡಲಿನ ಹೆಮ್ಮೆಗೆ ಪಾರ್ವತಿಯ ಸೌಖ್ಯಕ್ಕೆ ಸೂಳೆಯರ ಸ್ಮರಣೆಗೆ, ಸೋಮಾರಿಗಳ ನೆಮ್ಮದಿಗೆ ಒಳ್ಳೆಯವರು ಕೆಟ್ಟೋರು ಬಲ, ಹೊಲ, ಹಕ್ಕಿ, ದನ, ಎಲ್ಲಾ ಹತ್ತು ಕಾಲ ಇರಲಿ ಅಂತ. ದೊಣ್ಣೆ ಹಿಡಿದು ಕೊಟ್ಟಿಗೆಗೆ ನುಗ್ಗಿ ಹೋರಾಡಿದನು. ರಕ್ತ ಕಾರಿಸಿ ಸಾಯಿಸಿ ಸತ್ತ.

ಕಥೆ೦ಯ ಪ್ರಾರಂಭದಲ್ಲಿ ಎನ್ನುತ್ತಾ ಹುಲಿಹಾರಿ ನೆಗೆದು ತನ್ನ ಪ್ರಾಣವ ಬಿಟ್ಟಿತು ಎಂದು ಗೋವಿನ ಹಾಡನ್ನು ಹೇಳುತ್ತಾ ಕಥೆ ಮುಂದುವರೆದಿದೆ. ಹೀಗೆ ಎಲ್ಲಾ ತನ್ನೆಲ್ಲಾ ಒಳಗಿನ ವ್ಯಕ್ತಿತ್ವದ ತೀವ್ರ ಸಂಘರ್ಷಗಳನ್ನು, ತಳಮಳವನ್ನು ಪತ್ತಿಕ್ಕಿಕೊಂಡು ತನ್ನ ಊರಿನ ಉಳಿವಿಕೆಗಾಗಿ ಸತ್ತ ಸ್ಥಿತಿ೦ಯು ಒಂದು ರೀತಿ೦ಯ ಮರುಕದ ಭಾವನೆ೦ಯನ್ನು ಹೆಚ್ಚಿಸುತ್ತದೆ. ಇದನ್ನು ಅವನ ತ್ಯಾಗವೆಂದು ಹೇಳಬಹುದು.

ಗ್ರಾಮೀಣ ಮತು ನಗರ ಜೀವನದಲ್ಲಿ ಮುಖ್ಯವಾಗಿ ಕಂಡು ಬರುವ ಅಸ್ಪೃಶ್ಯತೆ ಊಳಿಗಮಾನ್ಯ ಪದ್ಧತಿ೦ಯ ವ್ಯವಸ್ಥೆ೦ಯನ್ನು ಮುಂದೆ ಚರ್ಚಿಸಲಾಗುವುದು. ಗ್ರಾಮಗಳ ಬಗ್ಗೆ ವಿಶಿಷ್ಟ ಕಲ್ಪನೆ೦ಯ ಜೊತೆಗೆ ವಾಸ್ತವದ ಪರಿಚ೦ಯವಿದ್ದ ಲಂಕೇಶರು ಹಳ್ಳಿಗಳ ಮುಖಾಂತರವೇ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು. ಇಂತಹ ಮನೋಭಾವವನ್ನಿಟ್ಟುಕೊಂಡು ಬರೆದ ಕಥೆಗಳನ್ನು ನಾವು ಗಮನಿಸಬಹುದು. ಒಟ್ಟು ಗ್ರಾಮಗಳ ಬಗ್ಗೆ ಈ ಕಥೆಗಳ ಮೂಲಕ ಒಂದು ರೀತಿಯ ಗಾಂಧಿವಾದದ ಆರ್ಥಿಕತೆಯನ್ನು, ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ಕಟ್ಟಿಕೊಟ್ಟಂತೆ ಭಾಸವಾಗುತ್ತದೆ. ಹಾಗೆಯೇ ಹಳ್ಳಿಯಲ್ಲಿನ ಸಹಜ ಸ್ವಭಾವದ ವ್ಯಕ್ತಿಗಳು, ಮೋಸ, ದಗ, ವಂಚನೆ, ಇವೆಲ್ಲವರ ನಡುವೆಯೂ ವಿಶಿಷ್ಟತೆಯನ್ನು ಉಳಿಸಿಕೊಂಡಿರುವ ಹಳ್ಳಿಗಳ ಚಿತ್ರಣವನ್ನು ಕಾಣಬಹುದು.

ಅಡಿ ಟಿಪ್ಪಣಿಗಳು:

1) ಬೋಧಿಲೇರನ ಸಖಿ – ರಾಘವೇಂದ್ರ ಪಾಟೀಲ, ಪುಟ – 76

2) ಪಿ. ಲಂಕೇಶರ ಸಮಗ್ರ ಕಥೆಗಳು ಪುಟ – 199.

3) ಪಿ. ಲಂಕೇಶರ ಸಮಗ್ರ ಕಥೆಗಳು ಪುಟ – 202

4) ಪಿ. ಲಂಕೇಶರ ಸಮಗ್ರ ಕಥೆಗಳು ಪುಟ – 210

5) ಪಿ. ಲಂಕೇಶರ ಸಮಗ್ರ ಕಥೆಗಳು ಪುಟ – 240

ಅಧ್ಯಾಯ – 4

ಪಿ. ಲಂಕೇಶರ ಕಥೆಗಳಲ್ಲಿ ಅಸ್ಪೃಶ್ಯತೆ ಮತ್ತು ಊಳಿಗಮಾನ್ಯ ವ್ಯವಸ್ಥೆ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ 80ರ ದಶಕವು ಹಲವು ಕಾರಣಗಳಿಗಾಗಿ ಮಹತ್ವವೆನಿಸುತ್ತದೆ. ರಾಜಕೀಯವಾಗಿ ಮೊದಲ ಬಾರಿಗೆ ಕಾಂಗ್ರೇಸ್ಸೇತರ ಸರ್ಕಾರ ರಚನೆಯಾಗಿ ಅದು ಕೂಡಾ ಸಮರ್ಥವಾಗಿ ಪರಿಸ್ಥಿತಿಗಳನ್ನು ಎದುರಿಸುವಲ್ಲಿ ವಿಫಲವಾಯಿತು. ಸಾಮಾಜಿಕ ಸಂದರ್ಭದಲ್ಲಿ ಅನೇಕ ಪ್ರಗತಿಪರ ಧೋರಣೆಗಳನ್ನಿಟ್ಟುಕೊಂಡ ಜಾತಿ ವಿನಾಶ ಸಮ್ಮೇಳನ, ರೈತ ಸಂಘಟನೆ, ದಲಿತ ಸಮಿತಿ, ಮುಂತಾದವು ಹುಟ್ಟಿಕೊಂಡ ನಂತರದ ಸಂದರ್ಭದಲ್ಲಿ ಅಸ್ಪೃಶ್ಯತೆಯ ಬಗೆಗೆ ಮತ್ತು ಅದುವರೆಗೂ ಇದ್ದ ಜಾತಿಯ ಕಲ್ಪನೆಯ ಬಗ್ಗೆ ಧೋರಣೆಗಳು ಬದಲಾದವು. ದೇವನೂರು ಮಹಾದೇವ ಅವರ 'ಕುಸುಮ ಬಾಲೆ' ಕಾದಂಬರಿ ಪೂರ್ಣಚಂದ್ರ ತೇಜಸ್ವಿಯವರ ಚಿದಂಬರ ರಹಸ್ಯ, ಪಿ. ಲಂಕೇಶರ ಮುಸ್ಸಂಜೆಯ ಕಥಾಪ್ರಸಂಗ ಮುಂತಾದ ಸಾಹಿತ್ಯ ಕೃತಿಗಳಲ್ಲಿ ಅಸ್ಪೃಶ್ಯತೆ ಮತ್ತು ಜಾತಿ ವಿನಾಶದ ಬಗೆಗಿನ ವಿಭಿನ್ನ ನೋಟಗಳು ಕಂಡು ಬಂದವು ಮತ್ತು ಜಾತಿಯ ವಿನಾಶದ ಬಗ್ಗೆ ಅಸ್ಪೃಶ್ಯತೆ ಬಗ್ಗೆ ಕನ್ನಡ ಸಾಹಿತ್ಯ ಪರಂಪರೆಯ ತೀವ್ರವಾಗಿ ಪ್ರತಿಕ್ರಿಯಿಸಿರುವುದನ್ನು ಇದರ ಮೂಲಕವೇ ಗ್ರಹಿಸಬಹುದು.

ಲಂಕೇಶರ ಬರವಣಿಗೆಯ ಕ್ರಮವೇ ಅಸ್ಪೃಶ್ಯರಂತಿದ್ದ ಮಹಿಳೆಯರು, ಹಿಂದುಳಿದ ವರ್ಗಗಳ ಬಗ್ಗೆ ತೀವ್ರವಾಗಿ ಸ್ಪಂದಿಸಿದೆ. ಅನೇಕ ರೀತಿಯ ಜಾತಿಯ ಬಗೆಗಿನ ತಲ್ಲಣಗಳನ್ನುಭವಿಸದಿದ್ದರೂ ಕೂಡಾ ಅದನ್ನು ಸೂಕ್ಷ್ಮವಾಗಿ ಗ್ರಹಿಸಿ, ಆಲೋಚಿಸುವ ಬರವಣಿಗೆಯನ್ನು ಕಾಣಬಹುದು. ವೈಯುಕ್ತಿಕವಾಗಿ ಲಂಕೇಶರು

ಅಂತಹ ಸಮುದಾಯದವ ರಲ್ಲದಿದ್ದರೂ ಕೂಡಾ ಸಮಾಜದಲ್ಲಿನ ಈ ಅನಿಷ್ಟ ಪಿಡುಗಿನ ಬಗ್ಗೆ ಉಗ್ರಗೊಂಡವರೇ ಅದನ್ನು ಮುಸ್ಸಂಜೆಯ ಕಥಾ ಪ್ರಸಂಗ ಕಾದಂಬರಿಯಲ್ಲಿ ಲಿಂಗಾಯಿತರ ಹೆಣ್ಣು ಮಗಳೊಬ್ಬಳನ್ನು ಬೇಡರ ಜಾತಿಯ ಹುಡುಗನೊಬ್ಬ ಮದುವೆಯಾಗುದರ ಮೂಲಕ ಜಾತಿಯ ಕಟ್ಟನ್ನು ಸಡಿಲಿಸಿದ್ದಾರೆ. ಹಾಗೆಯೇ ನಂತರದ ಇವರ ಕಲ್ಲು ಕರಗುವ ಸಮಯ ಕಥೆಗಳಲ್ಲಿ ಊಳಿಗಮಾನ್ಯ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯನ್ನು ಭಿನ್ನ ಭಿನ್ನ ದೃಷ್ಟಿಕೋನಗಳಿಂದ ಗ್ರಹಿಸಲು ಯತ್ನಿಸಿದ್ದಾರೆ. ಪ್ರಸ್ತುತ ಈ ಅಧ್ಯಾಯದಲ್ಲಿ **ಮುಟ್ಟಿಸಿಕೊಂಡವರು. ಸಹಪಾಠಿ, ಕಲ್ಲು ಕರಗುವ ಸಮಯ** ಈ ಮೂರು ಕತೆಗಳನ್ನಿಟ್ಟುಕೊಂಡು ಅಸ್ಪೃಶ್ಯತೆ, ಜಾತಿ, ಊಳಿಗಮಾನ್ಯ ವ್ಯವಸ್ಥೆಯನ್ನು ಹೇಗೆ ಗ್ರಹಿಸಿದ್ದಾರೆಂಬುದನ್ನು ಉಳಿದ ಕಥೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವಂತದ್ದಾಗಿದೆ.

"**ಮುಟ್ಟಿಸಿಕೊಂಡವರು**" ಕಥೆಯ ಶೀರ್ಷಿಕೆಯೇ ಜಾತಿಯ ಹಿನ್ನೆಲೆಯಿಂದ ಮಡಿ ಮೈಲಿಗೆ, ಶುದ್ಧ, ಅಶುದ್ಧ, ಮೇಲು-ಕೀಳು ಎಂಬ ಭಾವದಿಂದ ಬಂದದ್ದು. ಕಥೆಯ ತುಂಬಾ ಸರಳವಾಗಿ ಮನಮಿಡಿಯುವಂತಿದೆ. ಬಸಲಿಂಗನು ತನ್ನ ಹೊಲ, ಎತ್ತು, ಮನೆ, ತೋಟ, ಹೆಂಡತಿ, ಮಗು ಸಂಸ್ಕಾರದವನಾಗಿ ಇದ್ದವನು. ತನ್ನ ಎರಡು ಎತ್ತುಗಳಲ್ಲಿ ಒಂದು ಎತ್ತು ಉಳಲು ಅಸಾಧ್ಯವೆನಿಸುವ ಸ್ಥಿತಿಯನ್ನು ತಲುಪಿದೆ. ತನ್ನ ಮಗುವಿಗೆ ಹಷಾರಿಲ್ಲ ಇವೆಲ್ಲದರ ನಡುವೆ ಅವನ ಕಣ್ಣು ದಿನದಿಂದ ದಿನಕ್ಕೆ ನೋವು ಹೆಚ್ಚಾಗುತ್ತದೆ. ಯಾರಿಗೂ ಆ ನೋವು ಅರ್ಥವಾಗಲಾರದು.

ಸರ್ಕಾರಿ ಆಸ್ಪತ್ರೆಯ ಡಾ॥ ತಿಮ್ಮಪ್ಪನವರ ಬಳಿ ಹೋಗಿ ತನ್ನ ನೋವನ್ನು ಹೇಳಿಕೊಂಡು ಅದಕ್ಕೆ ಸೂಕ್ತವಾದ ಆಪರೇಶನ್ನು ಮಾಡಿಸಿಕೊಂಡ. ಅವನ ಜಾತಿ ನಿಕೃಷ್ಟವೆಂದು ತಿಳಿದು ಸ್ನಾನ ಮಾಡಿ ಮತ್ತೆ ನೋವು ಉಲ್ಬಣಗೊಂಡಾಗ ಅನೇಕ

ಬೇರೆ ವೈದ್ಯರನ್ನು ತೋರಿಸಿದ ತನ್ನ ಜಾತಿ ಮತದ ರಾಜಕಾರಣಿಯ ಪ್ರಭಾವದಿಂದ ಆದರೆ ನೋವು ಕಡಿಮೆಯಾಗಲಿಲ್ಲ. ಕೊನೆಗೆ ಡಾ. ತಿಮ್ಮಪ್ಪನವರ ಬಳಿ ಹೋಗಿ ಮತ್ತೆ ತನ್ನ ತಪ್ಪಿನ ಅರಿವು ಉಂಟಾಗಿ ಅತ್ತು ಸುರಿದು ತನ್ನ ಕಣ್ಣನ್ನು ಮತ್ತೆ ಪಡೆದುಕೊಂಡು ಮೊದಲಿನ ಮುಗ್ಧನಂತಾದ ಇದಿಷ್ಟು ಕಥೆಯು ಸರಳತೆಯ ನೋಟ.

ಅಸ್ಪೃಶ್ಯತೆಯೆಂಬುದರ ಮೂಲ ಜಾತಿಯ ಹುಟ್ಟುವಿಕೆಗೆ ಸಂಬಂಧಿಸಿದ್ದು. ಯಾವ ಜಾತಿಯಲ್ಲಿ ಯಾರು ಹುಟ್ಟಿದರು ಎಂಬುದು ಮುಖ್ಯವೇ ಹೊರತು ಎಂದು ನಂಬಿದ್ದ ಮೇಲು ಜಾತಿಯ ಬಸವಲಿಂಗನಲ್ಲಿ ಮೊದಲು ಈ ರೀತಿಯ ಕಲ್ಪನೆ ಇಲ್ಲದವನು. "ಸುಳ್ಳು ಹೇಳಲು ಬೇಕಾದ ಚಾಡಿ ಮಾತುಗಾರಿಕೆ ಅವನಲ್ಲಿರಲಿಲ್ಲ. ಬಸವಲಿಂಗನ ಕಣ್ಣಿಗೆ ಬಂದ ನೋವು ವಾಸಿಮಾಡಲು ಹೋದದ್ದು. ಡಾ॥ ತಿಮ್ಮಪ್ಪನ ಬಳಿಗೆ ಪ್ರಾರಂಭದಲ್ಲಿ ಅವನಿಗೆ ವಿಶೇಷ ಪ್ರೀತಿ. "ಬಸವಲಿಂಗನಿಗೆ" ಅವರಿಗೆ ವಿಶೇಷ ಆಸಕ್ತಿ, ಪ್ರೀತಿ ಮೂಡಿದ್ದವು. ಅವನ ಹೊಲ, ಎತ್ತು, ಮಗು, ಕೂಡಾ ಅದರಲ್ಲಿ ನಿಂತಿದ್ದವು".*(1) ಒಂದು ರೀತಿಯ ರೋಗಿ ಮತ್ತು ವೈದ್ಯರ ನಡುವಿನ ಸಂಬಂಧವಷ್ಟೇ ಅಲ್ಲದೆ ವಿಶೇಷ ಪ್ರೀತಿಯನ್ನು ಹೊಂದಿದ್ದರು. ಕಣ್ಣಿಗೆ ಅಪರೇಷನ್ ನಂತರವಲ್ಲಿ ಬಸವಲಿಂಗನಲ್ಲಿ ಒಂದು ರೀತಿಯ ಹೆದರಿಕೆ ಅಸಾಹಯಕತೆ ನೋವು ವಾಸಿ ಶುರುವಾದದ್ದು ಡಾ॥ ತಿಮ್ಮಪ್ಪ ಹೊಲೆಯರು ಎಂದು ಗೊತ್ತಾದಾಗ ಇದರಿಂದ ಅವನು ಮನೆಯಲ್ಲಿ ಸ್ನಾನ ಮಾಡಿದ ಕಣ್ಣಿನ ಮೇಲೆಯೇ ನೀರು ಬೀಳುವಂತೆ ಮುಖ್ಯವಾಗಿ ಜಾತಿಯ ಬಗ್ಗೆ ಇರುವ ಕಲ್ಪನೆಯೇ ಮೈಲಿಗೆಯದ್ದು. ಇಲ್ಲಿ ಸ್ಪೃಶ್ಯಾಸ್ಪೃಶ್ಯತೆಯ ಜೊತೆಗೆ ಧರ್ಮದ ಸಮಸ್ಯೆಯೂ ಇಲ್ಲಿ ಗೋಚರಿಸುತ್ತದೆ.

ಬಸವಲಿಂಗನ ನೋವು ಹೆಚ್ಚಾದಂತೆ, ತೀವ್ರವಾಗಿ ಮಾನಸಿಕ ಯಾತನೆಗೆ ಗುರಿಯಾಗುತ್ತಾನೆ. ತನ್ನ ಜಾತಿಯನ್ನು ಕೆಡಿಸಿದ ಡಾ|| ತಿಮ್ಮಪ್ಪನ ಬಗ್ಗೆ ತಿರುಚಿ ಹೇಳತೊಡಗಿದೆ. ಸುಳ್ಳನ್ನು, ನಿರ್ಲಕ್ಷ್ಯವನ್ನು, ಉಡಾಫೆಯ ಬದುಕನ್ನು ರೂಪಿಸಿಕೊಂಡ. ಪ್ರಾರಂಭದಲ್ಲಿದ್ದ ಒಳ್ಳೆಯತನ, ಮೋಸಗಾರಿಕೆಯ ಇಲ್ಲದ ಜೀವನ ಕ್ರಮವು ಹೇಗೆ ಜಾತಿಯ ಕಾರಣಕ್ಕಾಗಿ ಛಿದ್ರಗೊಂಡದ್ದನ್ನು ಹೇಳುವುದಾಗಿದೆ. ಇವನ ನೋವು, ನರಳಾಟವು ಹೆಚ್ಚಾದಂತೆಲ್ಲಾ ಬೇರೆ ಬೇರೆ ವೈದ್ಯರನ್ನು ತನ್ನ ಜಾತಿಯವರ ಹತ್ತಿರವೇ ತೋರಿಸ ತೊಡಗಿದ. ಇದರಿಂದ ಇವನ ನೋವು ಕಡಿಮೆಯಾಗಲಿಲ್ಲ. "ತನ್ನ ಉಡಾಫೆ, ಸುಳ್ಳು, ಜಾತಿ, ಮಠದ ಗುರು ಯಾರೂ ತನ್ನ ಕಣ್ಣನ್ನು ಉಳಿಸುವುದಿಲ್ಲ ಎಂಬುದು ಅವನಿಗೆ ತಿಳಿಯತೊಡಗಿತು. ನೋವು ದೈಹಿಕ ನೋವನ್ನು ಮೀರಿದ ನೋವು ಅವನನ್ನು ತುಂಬತೊಡಗಿತು"(2)*. ಹೇಗೆ ಮುಗ್ಧನೊಬ್ಬನಲ್ಲಿ ಯಾವುದೇ ರೀತಿಯ ಜಾತಿಯ ಬಗೆಗಿನ ಮುಟ್ಟುವಿಕೆಯ ಬಗ್ಗೆ ಕಲ್ಪನೆಯೇ ಇಲ್ಲದಿದ್ದಾಗ ಅನ್ಯ ರೀತಿಯ ಪ್ರಭಾವಗಳಿಗೆ ಒಳಗಾಗುತ್ತಾನೆ ಎಂಬುದನ್ನು ನೋಡಬಹುದು.

ಕೊನೆಗೆ ಅವನಲ್ಲಿ ಸಂಪೂರ್ಣವಾಗಿ ತಿಮ್ಮಪ್ಪನವರ ಬಗ್ಗೆ ಪ್ರೀತಿ ಹೆಚ್ಚಾಗತೊಡಗಿತು. "ನೋವು ಮತ್ತು ಪ್ರೀತಿಯ ಸ್ಥಿತಿಯನ್ನು ತಲುಪಿ ಮತ್ತೆ "ನೋವು ತುಂಬಿದ ಬಲಗಣ್ಣಿನಲ್ಲೂ ಕಂಬನಿ ಸುರಿಯುತ್ತಿತ್ತು. ಡಾ|| ತಿಮ್ಮಪ್ಪನವರ ಕೈಹಿಡಿದುಕೊಂಡ ಅವರನ್ನು ಅಪ್ಪಿಕೊಂಡು ಗಟ್ಟಿಯಾಗಿ ಅಳತೊಡಗಿದ".*(3)

ಮುಗ್ದನಂತಿದ್ದ ಬಸವಲಿಂಗನ ಕೆಣಕಲ್ಪಟ್ಟ ಜಾತಿ ಪ್ರಜ್ಞೆಯಿಂದಾಗಿ ತನ್ನ ಪ್ರೀತಿಯ ಬದುಕನ್ನು ವಿಕೃತ ಮಾಡಿಕೊಂಡವನು. ಈ ಕಥೆಯಲ್ಲಿ ಬಸವಲಿಂಗನನ್ನು ಮುಖ್ಯವಾಗಿ ಮೂರು ಹಿನ್ನೆಲೆಯಲ್ಲಿಟ್ಟು ನೋಡಬಹುದು. ಒಂದು ತನಗೆ ಯಾವುದೇ

ರೀತಿಯ ಜಾತಿಯ ಬಗ್ಗೆ ಪ್ರಜ್ಞೆ ಇಲ್ಲದೆ ತಿಮ್ಮಪ್ಪನನ್ನು ಮುಟ್ಟಿದಾಗ, ಎರಡನೆಯದಾಗಿ ತಿಮ್ಮಪ್ಪನ ಜಾತಿಯು ಅಸ್ಪೃಶ್ಯದ್ದು, ಮುಟ್ಟಬಾರದಿತ್ತು ಎಂಬಂತಹ ಸ್ಥಿತಿಯನ್ನು ತಲುಪಿತು ಎಂದು ತಿಳಿದು ಅದರಿಂದ ಪಡುವ ಯಾತನೆ, ನೋವು, ಸಿಟ್ಟುಗಳನ್ನು ತುಂಬಿಕೊಂಡು ಮತ್ತು ಮೂರನೆಯದಾಗಿ ಇದೆಲ್ಲವನ್ನು ತಿಳಿದು ಮತ್ತೆ ಮೊದಲಿನ ಸ್ಥಿತಿಯನ್ನು ಅಂದರೆ “ಸುಳ್ಳುಗಳಿಂದ ಮುಕ್ತವಾಗಿದ್ದ ಬಸವಲಿಂಗ ಮಗುವಿನಂತೆ ಚಲನವಲನ ಮಾಡುತ್ತಾ ಕೂತ”*(4) ಜಾತಿಯ ಪ್ರಜ್ಞೆಯಿರದ ಸ್ಥಿತಿಯನ್ನು ಮತ್ತೆ ತಲುಪುವ ಸ್ಥಿತಿಯು ಬಸವಲಿಂಗನದು.

ಡಾ॥ ತಿಮ್ಮಪ್ಪನವರು ಕೂಡಾ ಬಸಲಿಂಗನ ನೋವನ್ನು ಮನೆ, ಹೊಲ, ಮಗು, ಎಲ್ಲವನ್ನು ತುಂಬಾ ಔದಾರ್ಯ, ಪ್ರೀತಿಯಿಂದ ತೆರೆದ ಮನಸ್ಸಿನಿಂದ ನೋಡಿದವರು.

ಸುಳ್ಳು ಹೇಳಿದ ಬಸವಲಿಂಗನಿಗೆ ಮತ್ತು ಮೊದಲಿನ ಸ್ಥಿತಿಯನ್ನು ತಲುಪುವಂತೆ ಮಾಡಿದವರು ಯಾವುದೇ ರೀತಿಯ ವೈಯುಕ್ತಿಕ ಕಲಹ, ನಿಂದನೆಗಳನ್ನು ಸಹಿಸಬಾರದ ಸ್ಥಿತಿ ಯಲ್ಲಿಯೂ ಬಸಲಿಂಗ ತನ್ನನ್ನು ಮುಟ್ಟುವಿಕೆಯಿಂದಾಗಿ ಆದ ಅನಾಹುತದ ಬಗ್ಗೆ, ಅವನ ನೋವಿನ ಬಗ್ಗೆಯೇ। ತುಂಬಾ ವ್ಯಥೆ, ನೋವನ್ನುಂಡವರು. “ಬಸಲಿಂಗಪ್ಪ, ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ ಅವರೆ ನಿನ್ನಂತಹ ಮುಗ್ಧ ಮನುಷ್ಯನನ್ನು ಕೂಡಾ ಈ ಮುಟ್ಟುವಿಕೆಗೆ ನಾನು ಸಹಿಸದೆ ಇದ್ದದ್ದನ್ನು ಮಾಡಿದೆ, ನಿನ್ನ ತಪ್ಪಲ್ಲ”*(5) ಇಲ್ಲಿ ತಿಮ್ಮಪ್ಪನಂತಹವರು ಕೆಳವರ್ಗ ದಿಂದ ಬಂದ ಅತ್ಯಂತ ಪ್ರತಿಭಾವಂತರು, ಪ್ರಾಮಾಣಿಕರು, ಉನ್ನತ ಹುದ್ದೆಗಳಲ್ಲಿದ್ದರೂ ಕೂಡಾ ಇಂದಿಗೂ ಈ ರೀತಿಯ ಸ್ಥಿತಿಯೇ ಮುಂದುವರೆದಿದೆ.

ಆಧುನಿಕ ಶಿಕ್ಷಣ, ಪ್ರತಿಭೆ, ನಗರೀಕರಣ, ಸಾರಿಗೆ ವ್ಯವಸ್ಥೆ ಮುಂತಾದ ಆಧುನಿಕ ಸೌಲಭ್ಯಗಳ ನಡುವೆಯೇ ಈ ರೀತಿಯ ಜಾತಿ ಪ್ರಜ್ಞೆಯು ಸುಪ್ತ ಮನಸ್ಸಿನಲ್ಲಿ ಇನ್ನು ಹಾಗೆಯೇ ಮುಂದುವರೆದಿದೆ ಎಂಬುದನ್ನು ಸೂಚಿಸುವಂತಿದೆ ಮತ್ತು ತಿಮ್ಮಪ್ಪನಂತಹವರು ಕೂಡಾ ಮೇಲು ಜಾತಿಯಲ್ಲಿರಬಹುದಾದ ಈ ರೀತಿಯ ಕಲ್ಪನೆಯನ್ನಿಟ್ಟುಕೊಂಡವರಲ್ಲ. ಅವನನ್ನು ಕಂಡರೆ ಅವನ ಜಾತಿ ಯಾವುದಿರಬಹುದು ಎಂಬ ಪ್ರಶ್ನೆ ಕೂಡ ತಮ್ಮಲ್ಲಿ ಸುಳಿಯದಿದುದ್ದು ಇರಬಹುದು. ಮನುಷ್ಯನ ನೋವಿಗೆ ಮನುಷ್ಯನ ತೊಳಲಾಟಿಕೆ, ಮನುಷ್ಯನಿಗೆ ಸಾಧ್ಯವಾಗುವ ಸಣ್ಣತನ ಮತ್ತು ಒಳ್ಳೆಯುತನಕ್ಕೆ ಸಾಕ್ಷಿಯಾಗಿ ಕಾಣುತ್ತಿದ್ದುದ್ದು ಇರಬಹುದು.

ಲಂಕೇಶರು ಮುಖ್ಯವಾಗಿ ಈ ಕಥೆಯಲ್ಲಿ ಸ್ಪೃಶ್ಯಾಸ್ಪೃಶ್ಯತೆ, ದಲಿತರು, ಸವರ್ಣೀಯರು, ಧರ್ಮದ ಮಡಿ ಮೈಲಿಗೆ, ಮುಟ್ಟಬಾರದವರು ಮುಟ್ಟಿಸಿಕೊಂಡವನು. ಇವರ ಸಮಸ್ಯೆಗಳು, ತೊಳಲಾಟಗಳು, ನೋವುಗಳು, ಪ್ರೀತಿ, ಕಂಬನಿಗಳನ್ನು ಹೇಳುತ್ತಿದ್ದಾರೆ. ಜೊತೆಗೆ ಬಸವಲಿಂಗನ ಪಾತ್ರದ ಮೂಲಕ ಹೇಗೆ ಜಾತಿಯ ಬಗೆಗಿನ ಸಿದ್ಧ ಮಾದರಿಗಳನ್ನು ಮೀರುವ ಕ್ರಮ ಮತ್ತು ಇಡೀ ಮನುಷ್ಯರ ಮನಸ್ಸಿನ ಅನೇಕ ಜಾತಿಯ ಬಗೆಗಿನ ಸ್ಥಿತ್ಯಂತರಗಳನ್ನು ಹೇಳಿದ್ದಾರೆ.

ಮುಟ್ಟಿಸಿಕೊಂಡ ಬಸಲಿಂಗನಂತಹ ತಲ್ಲಣಗಳು, ಆತಂಕಗಳು ಸಿಟ್ಟು, ಪಶ್ಚಾತಾಪಗಳು, ಸಹಪಾಠಿ ಕತೆಯ ಬಸವೇಗೌಡನಲ್ಲಿ ಕಾಣಬಹುದು. ಸಾಹಿತ್ಯವು ಮನುಷ್ಯನಲ್ಲಿ ಉಂಟು ಮಾಡಬಹುದಾದ ಪರಿಣಮಾದ ಬಗ್ಗೆಯೂ ಕೂಡಾ ಈ ಕತೆಯು ಚಿಂತಿಸುವಂತಿದೆ. ಬಸವೇಗೌಡನ ರೋಗಕ್ಕೆ ಕಾರಣದ ಮೂಲಗಳಲ್ಲಿ ಜಾತಿಯ ಬರ್ಬರತೆ, ಊಳಿಗಮಾನ್ಯ, ಭ್ರಷ್ಟಸ್ಥಿತಿ, ಇವೆಲ್ಲವೂ ಮುಖ್ಯವಾಗಿರುವಂತೆ ಸಾಹಿತ್ಯವೂ ಕೂಡಾ ಅಷ್ಟೇ ಗಂಭೀರವಾದ ಪರಿಣಾಮವನ್ನುಂಟು ಮಾಡಿದೆ.

ನಾಲ್ಕೈದು ಊರುಗಳ ಗೌಡನಾದವನ ಮಾತನ್ನು ೦ಯಾರೂ ಮೀರುವವರಲ್ಲ. "ತನ್ನ ಕುರುಬರ ನಾನೂರು ಕುಟುಂಬಗಳ ಮೂಲಕ ಮತ್ತು ತಲಾತಲಾಂತರದ ೦ಯಜಮಾನಿಕೆ೦ಯ ಪ್ರ೦ಯೋಗದ ಮೂಲಕ ಗುಡ್ಡದ ನಡುವಿನ ನಾಲ್ಕು ಹಳ್ಳಿಗಳನ್ನು ತನ್ನ ಹೆಬ್ಬೆರಳಿನಡಿ೦ಯಲ್ಲಿ ನೆಮ್ಮದಿ೦ಯಾಗಿ ನಾಗರೀಕತೆ೦ಯ ತೊಳಲಾಟ ಮತ್ತು ಸ್ವಾತಂತ್ರ್ಯದಿಂದ ದೂರದಲ್ಲಿ ಇಟ್ಟಿದ್ದ"*(6) ಬಸವೇಗೌಡನ ಈ ಪ್ರಜ್ಞೆ೦ಯನ್ನು ಕೆಣಕಿದ್ದು ಭಗವಾನ್ ಸಾಹಿತಿ೦ಯ ಕೃತಿಗಳು. ಅಂದಿನಿಂದ ಬಸವೆಗೌಡ ಒಂದು ರೀತಿ೦ಯ ವಿಚಿತ್ರ ಮೌನವನ್ನು ವಹಿಸಿದ್ದ. ಸ್ಕೂಲಿನ ಪ್ರವೇಶದ ಜೊತೆಗೆ ಹೊಲೆ೦ಯರ ಶಿವಪ್ಪ ಕೂಡಾ ಮಾಸ್ತರಾದ.

ಲಂಕೇಶರು ಮತ್ತೇ ಮತ್ತೇ ಶೋಧಿಸತೊಡಗಿರುವುದು. ಕೆಳಜಾತಿಯ ಪ್ರತಿಭೆಗಳ ಪ್ರಾಮಾಣಿಕತೆಯನ್ನು, ಪ್ರೀತಿಯನ್ನು ಆದರೆ ಹೇಗೆ ಅದು ಮೇಲು ಜಾತಿಗಳ ಮುಷ್ಠಿಯಲ್ಲಿ ಸಿಕ್ಕಿ ಅನೇಕ ಬಗೆಯ ನೋವುಗಳನ್ನು ಅನುಭವಿಸುವ ಸ್ಥಿತಿಯನ್ನು ಕಾಣಬಹುದು. ಹೊಲೆಯ ಶಿವಪ್ಪ ಬಂದ ನಂತರವೇ ಈ ಊರಿನಲ್ಲಿ "ಹಾದರ ಕಳ್ಳತನ ಹೆಚ್ಚುತ್ತಿದೆ. ದೇವಸ್ಥಾನಕ್ಕೆ ಬೆಂಕಿ ಬಿದ್ದಿದೆ. ಲಿಂಗಾಯಿತರ ಹುಡುಗಿ ಬ್ಯಾಡರನವನನ್ನು ಕಟ್ಟಿಕೊಂಡು ಓಡಾಡಿದ್ದು"(7) ಗೌಡರ ಮತ್ತಷ್ಟು ಚಿಂತೆ, ಸಿಟ್ಟಿಗೆ ಕಾರಣವಾಗಿದೆ. ಆದರೆ ಇದ್ಯಾವುದಕ್ಕೂ ಸಂಬಂಧವಿರದ ಶಿವಪ್ಪನ ಮೇಲೆ ಹಲ್ಲೆಗಳು ನಿರಂತರವಾಗಿ ಗೌಡರ ಮೌನ ಸಮ್ಮತಿಯಿಂದ ನಡೆಯುತ್ತಿದೆ.

ಬಸವೇಗೌಡನ ರೋಗವು ತೀವ್ರ ಭಾದಿಸುತ್ತಿದ್ದ ಸುಳಿವು ಕೂಡಾ ಕಾಣದಂತೆ ಮಾಡಿದೆ. ತನ್ನ ಹೀನಾ೦ಯ ಕೃತ್ಯಗಳಿಂದ ಅವನ ಮನಸ್ಸು ಸದಾ ಭ೦ಯ, ಆತಂಕ ಮತ್ತು ದಿಗ್ಭ್ರಾಂತಿಗಳಿಂದ ತುಂಬಿಕೊಂಡಿವೆ. ಕನಸಿನ ತುಂಬಾ ತಾನು ಮಾಡಿದ ಪಾಪದ ಬಗೆಗಿನ ಭೀತಿ೦ಯು ಸುತ್ತಿಕೊಂಡಿದೆ. ೦ಯಾವುದನ್ನು ತಾನು

ಕೆಳವರ್ಗಗಳ ಮೇಲೆ ಮುಖ್ಯವಾಗಿ ಶಿವಪ್ಪನ ಮನೆ0ು ಮೇಲೆ ಅವನ ಹೆಂಡತಿ0ುನ್ನು ಬೆತ್ತಲೆ ಮೆರವಣಿಗೆ ಮಾಡಿದಂದಿನಿಂದ ಈ ರೀತಿ0ುಲ್ಲಿ ಮುಳುಗಿದ್ದಾನೆ. "ಕನಸ್ಸಿನಲ್ಲಿ 0ುಾರೋ ಕಪ್ಪನೆ0ು ಸಾವಿರಾರು ಜನ ಬಂದು ನನ್ನ ಬಟ್ಟೆ ಬಿಚ್ಚಿ, ಕಂಬಕ್ಕೆ ಕಟ್ಟಿ ತಿನ್ನಬಾರದ್ದನೆಲ್ಲಾ ತಿನ್ನಿಸಿ ಬಾರುಗೋಲಿನಿಂದ ಹೊಡಿತಾರೆ. ನನ್ನ ಅಪ್ಪನನ್ನು ಸಮಾಧಿಯಿಂದ ಕಿತ್ತು ತಂದು ಚಿತ್ರ ಹಿಂಸೆ ಮಾಡಿ ತೋರಿಸ್ತಾರೆ ಏನು ಮಾಡಲಿ" *(8). ಈ ರೀತಿ0ು ಅಸಾಹ0ುಕತೆಯ ಸ್ಥಿತಿ. ಇದು ಕೆಳವರ್ಗಗಳ ಬಗ್ಗೆ ಉಂಟಾದ ತನ್ನಲ್ಲಿನ ಭ0ುವು ರೋಗದ ಮೂಲಕ ದಿನೇ ದಿನೇ ಕುಗ್ಗಿಸುತ್ತಿರುವ ಬಸವೇಗೌಡನಲ್ಲಿ ಅವಿತಿದ್ದ ಮನಸ್ಸಿನ ಮುಂದೆ ನಡೆ0ುಬಹುದಾದ ಘಟನೆಗಳ ಕುರಿತು ನರಳುತ್ತಿದ್ದಾನೆ. ಇದೇ ಇವನ ರೋಗದ ಮೂಲ ನಿದ್ರೆ0ು ಬಾರದ ಸ್ಥಿತಿಗೆ ಕಾರಣವೆಂಬುದು ಭಗವಾನರಿಗೆ ತಿಳಿದು ಅದನ್ನು ಹೇಗೆ ಗುಣಮುಖ ಮಾಡಬೇಕೆಂಬುದರ ಬಗ್ಗೆ 0ೋಚಿಸ ತೊಡಗಿದರು.

ಜೋಸಿ0ು ಕಾಲನ್ನು ತನ್ನ ಮನೆ0ುಲ್ಲಿ ಬೆಳ್ಳಿ0ು ತಟ್ಟೆಗಳಲ್ಲಿ ತನ್ನ ಕೈಯಿಂದಲೇ ತೊಳೆದು, ವಿಭೂತಿ, ಗಂಧ, ಪೂಸಿ, ಹೂಮುಡಿಸಿ ಆರತಿ ಎತ್ತುವುದರ ಮೂಲಕ ಮನಸ್ಸು, ಕೂಡಾ ಇದೇ ರೀತಿ0ುಾಗಬೇಕು ಎಂಬಂತಹ ಬದಲಾವಣೆಗಳು ಬಸವೇಗೌಡನನ್ನು ಕಂಡು ಬಂದವು. ಅಂದೇ ಅವನಿಗೆ ನಿದ್ರೆ0ುೂ ಕೂಡಾ ಬಂದು ತನ್ನ ಮನಸ್ಸು ಪಾಪದ ಪಾಶ್ಚಾತಾಪಪಟ್ಟು ಅಸ್ಪೃಶ್ಯತೆನನ್ನು ಅವಮಾನಿಸಿದ ಘಟನೆಯಿಂದ ಭೀತಿ ಮುಕ್ತನಾಗಿದ್ದ. ಆದರೆ ಅವನಲ್ಲಿ ಮತ್ತೆ ಒಂದು ರೀತಿ0ುಲ್ಲಿ ನರಳಾಟ ಉಂಟಾಯಿತು. ಹೇಗೆ ಮೇಲು ಜಾತಿ0ು ಮನಸ್ಸುಗಳು ಬಾಹ್ಯವಾಗಿ ಜಾತ್ಯಾತೀತರಂತೆ ಮುಖವಾಡ ತೊಟ್ಟರೂ ಕೂಡಾ 0ುಾವುದೋ ಒಂದು ಸಣ್ಣ ಪಾತ್ರೆ0ುಲ್ಲಿ ಅದರ ಬಗ್ಗೆ ತೀವ್ರವಾದ ಜಿಗುಪ್ಸೆ, ಹೇಸಿಗೆ, ತೊ0ುಲಾಟಗಳನ್ನು ಹೊಂದಿರುವುದನ್ನು ಕಾಣಬಹುದು. ಹಾಗೆ0ುೇ ಅಷ್ಟೇ ದ್ವೇಷದಿಂದ ತನ್ನ ಮನಸ್ಸು

ಜೋಸಿ೦ಯ ಹೆಂಡತಿ೦ಯನ್ನು ಕೆಡಿಸುವುದಕ್ಕೆ ನಿರಾಕರಿಸಿದ ಕಾರಣವೂ ಕೂಡಾ ಅದೇ ಆಗಿದೆ. ಅಸ್ಪೃಶ್ಯತೆಯನ್ನು, ಜಾತೀಯತೆಯನ್ನು, ಸಂದರ್ಭದಲ್ಲಿ೦ಯೂ ಕೂಡಾ ಮತ್ತೆ ಮತ್ತೆ ಈ ರೀತಿ೦ಯ ಘಟನೆಗಳು ನಡೆ೦ಯುತ್ತಿರುತ್ತವೆಂಬುದಕ್ಕೆ ಗೌಡನೇ ಸಾಕ್ಷಿ.

ಬಸವೇಗೌಡನ ನಿದ್ರಾಹೀನತೆ೦ಯು ಮತ್ತೆ ಮರುಕಳಿಸಿದಾಗ "ಅದನ್ನು ಸಂಪೂರ್ಣವಾಗಿ ಇಲ್ಲವಾಗಿಸಬೇಕೆಂಬ ಹುಚ್ಚು ಹರಿದಂತೆ ಭಗವಾನ್ ಸಾರ್ವಜನಿಕರ ಎದುರಿನಲ್ಲಿ ವೇದಿಕೆ೦ಯೊಂದನ್ನು ಸಿದ್ಧ ಮಾಡುತ್ತಾನೆ. ಶಿವಪ್ಪನನ್ನು ವೇದಿಕೆ೦ಯ ಮೇಲೆ ಬರಮಾಡಿಕೊಂಡು ಜೋನಿಗೆ ಮಾಡಿದ್ದನ್ನು ಸಾರ್ವಜನಿಕವಾಗಿ ಮಾಡತೊಡಗುತ್ತಾನೆ. ಇದರಿಂದ ಇಡೀ ಊರಿನ ಜನರ ಕ್ರೋಧ ಸಿಟ್ಟಿನಿಂದ ತತ್ತರಿಸುವಂತಹ ಸ್ಥಿತಿ ತಲುಪುತ್ತಾರೆ. ನಾಲ್ಕು ಗೋಡೆಗಳ ನಡುವೆ ನಡೆದ ಅದನ್ನು ಒಪ್ಪಿಕೊಂಡು ನಂತರ ಅದನ್ನು ಸಾರ್ವಜನಿಕವಾಗಿ ಮಾಡುವ ಕ್ರಿ೦ಯೆಯಿಂದ ಬಸವೇಗೌಡನು ತನ್ನ ಭೀಕರವಾದ ಕನಸುಗಳಿಂದ ಮುಕ್ತವಾಗುವ ಹಂಬಲವುಳ್ಳವನು. ಕೊನೆಗೆ ಶಿವಪ್ಪ ಪಾದ ತೊಳೆ೦ಯುತ್ತಿದ್ದ ವೇದಿಕೆ೦ಯಲ್ಲಿ ಕೊನೆ೦ಯುಸಿರೆಳೆ೦ಯುವನು. ಇಂತಹ ಘಟನೆ೦ಯ ಬಗ್ಗೆ ಹಳ್ಳಿ೦ಯ ಜನರ ಸಿಟ್ಟು ಪಶ್ಚಾತಾಪಗಳು ಆವರಿಸಿದ್ದರೂ ಒಂದು ರೀತಿ೦ಯ ಮೂಕ ವೇದನೆ೦ಯನ್ನು ಅನುಭವಿಸುವ ಸ್ಥಿತಿ ಅವರದ್ದು.

ಜಾತಿ೦ಯನ್ನು ಮೀರುವ ಇಂತಹ ಸಂಕ್ರಮಣಾವಸ್ಥೆ೦ಯಲ್ಲಿ ಸವರ್ಣೀ೦ಯ ನೆಲೆ೦ಯಲ್ಲಿ ನಿಂತು ಅದರ ಪ್ರಭಾವವು ಭಿನ್ನವಾಗಿರುತ್ತದೆ. ಜಾಗೃತಗೊಂಡ ಸೂಕ್ಷ್ಮ ಸಂವೇದನೆ೦ಯುಳ್ಳ ಮನಸ್ಸು ಕೂಡಾ ಸವರ್ಣೀ೦ಯ ನೆಲೆ೦ಯಲ್ಲಿ೦ಯೇ ಸಿಕ್ಕಿಕೊಂಡು ಮಿಲಮಿಲನೆ ಒದ್ದಾಡುವ ಬಸವೇಗೌಡನಂತಹವರು ಹೇಗೆ ಹೊಸ ಕಾಲದ ಜೀವನ ಮೌಲ್ಯಗಳು ಸ್ಥಿತಿ೦ಯಲ್ಲಿದ್ದು ಕೂಡಾ ದ್ವಂದ್ವದಲ್ಲಿ ಸಿಕ್ಕಿ ತತ್ತರಿಸುತ್ತಾರೆಂಬುದನ್ನು ಹೇಳುತ್ತಾರೆ. ಪಾತ್ರಗಳ ಬಗೆಗಿನ ೦ಯಾವುದೇ ಆಕ್ರೋಶ, ಸಿಟ್ಟುಗಳನ್ನಿಟ್ಟುಕೊಳ್ಳದೆ

ಭವಿಷ್ಯದ ಬಗ್ಗೆ ಇರುವ ಸಾಧ್ಯತೆಯನ್ನು ವಿವಿಧ ಮುಖಗಳಲ್ಲಿ ನಿಂತು ಚರ್ಚಿಸಲಾಗಿದೆ.

ಹಿಂದಿನ ಎರಡು ಕಥೆಗಳಲ್ಲಿ ದ್ವಂದ್ವ ಸ್ಥಿತಿಗಳು, ತಿಕ್ಕಾಟಗಳು ಜಾತೀಯತೆಯನ್ನು ಮೀರುವ ಸಾಕಷ್ಟು ಸಂಯಮ, ಪ್ರಯತ್ನ, ಸಮಯವು ಬೇಕು ಎಂಬುದನ್ನು **'ಕಲ್ಲು ಕರಗುವ ಸಮಯ'** ಕಥೆಯಲ್ಲಿ ಕಾರಣಬಹುದಾಗಿದೆ. ಸಾಮಾಜಿಕವಾಗಿ ರಚನೆಗೊಂಡ ಜಾತಿ, ಊಳಿಗಮಾನ್ಯ ವ್ಯವಸ್ಥೆ, ವರ್ಗ ತಾರತಮ್ಯಗಳು, ಮೌಲ್ಯಗಳು, ಭಗ್ನಗೊಂಡ ಸ್ಥಿತಿಯು ಈ ಕಥೆಯ ಮೂಲಕ ಪ್ರಕಟಗೊಳ್ಳುತ್ತದೆ. 'ಶುದ್ಧ' ಪ್ರೀತಿಯ ಹಂಬಲಕ್ಕಾಗಿ ಇವೆಲ್ಲವನ್ನೂ ಮೀರಿದರೆ ಮಾತ್ರ ಆ ಕ್ಷಣದ ಅಥವಾ ನಂತರದ ಬದುಕು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ವೀರಾವೇಶದ ಮಾರಾಮಾರಿಯ ಊರನ್ನು ಕೂಡಾ ಶುದ್ಧ ಪ್ರೀತಿಯ ಎದರು ಸೋಲುವ ರೀತಿಯನ್ನು ಕಟ್ಟಿಕೊಡುತ್ತದೆ.

ಅಮೃತಾಂಬುಧಿ ಹೆಸರಿನ ಊರಿನಲ್ಲಿ ಅಸಂಖ್ಯಾತ ಕೊಲೆಗಳು, ಗಲಭೆಗಳು, ಜಾತಿಯ ಕಾರಣಕ್ಕಾಗಿಯೇ, ಪ್ರೀತಿಯ ಕಾರಣಕ್ಕಾಗಿ ತನ್ನಲ್ಲಿ ಬಚ್ಚಿಟ್ಟುಕೊಂಡಿರುವಂತಹದ್ದು. ಇಂತಹ ಕತೆಗಳನ್ನು ಕೇಳಿದ ಶ್ಯಾಮಲ "ತನ್ನ ಊರಿನ ಬಗ್ಗೆ ಇರುವ ಕಥೆಗಳನ್ನು ಕೇಳಿ ನಂಬಿಕೆ ಬಂದಿರಲಿಲ್ಲ. ತನ್ನ ಚಿಕ್ಕಮ್ಮ ರಕ್ತಕಾರಿ ಸತ್ತಾಗ ಆ ಕೊಲೆಯ ವಿಚಾರ ಕೋರ್ಟಿಗೆ ಕೂಡಾ ಹೋಗದಿದ್ದಾಗ ತನ್ನ ಊರ ಭೀಕರ ಅನ್ನಿಸಿತ್ತು. ಬೇರೆಯವರ ಕೊಲೆ ಶಿಕ್ಷೆ ಸೇಡಿನ ಬಗ್ಗೆ ಕೇಳಿದ್ದು ಕಥೆಯಂತೆ ಪುರಾಣದಂತೆ ಅನ್ನಿಸಿ ಸಂತೋಷವೇ ಆಗಿತ್ತು"*(9) ಶ್ಯಾಮಲಳ ಮನಸ್ಸು ಕೂಡಾ ಇಂತಹದನ್ನೆಲ್ಲವನ್ನು ಪುರಾಣದಂತೆ ಚಾರಿತ್ರಿಕವಾಗಿರುವುದೆನಿಸಿತು. ತನ್ನ ಊರಿನಲ್ಲಿ ನಡೆದ ಸಿನಿಮಾ ಕಮ್ಮಟವೊಂದು

[illegible]

[illegible]

[illegible]

[illegible]

ತನ್ನ ವ್ಯಕ್ತಿತ್ವದ ಬದಲಾವಣೆ ಆದಕ್ಕಾಗಿ ಅಷ್ಟೇ ನೇರ ನಡೆಯು ಮಾರಾಮಾರಿಯು ಊರಾದ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಂಡ ಶ್ಯಾಮಲಳು ತಿಪ್ಪಣ್ಣನನ್ನು ಮದುವೆಯಾಗಲು ನಿರ್ಧರಿಸಿದಳು. "ಇದು ಬದುಕಿನ (ಹೊಲ) ಬಗ್ಗೆ ಇಲ್ಲ ಎಲ್ಲವೂ ಹುಟ್ಟುತ್ತವೆ. ಕಾಲಗರ್ಭದಲ್ಲಿ ಮನುಷ್ಯರ ಆಳದಲ್ಲಿ ಕುಡಿಯೊಡೆಯುವ ಆಸಿಕೆಗಳು*(10) ಎಲ್ಲಾ ಕಾಲ ಸಂದರ್ಭಗಳ ಪರಿಸ್ಥಿತಿಯು ಒಂದೇ ರೀತಿಯದ್ದಲ್ಲ. ನಿರಂತರ ಚಲನಶೀಲಗೊಳ್ಳ ಬದುಕಿನಲ್ಲಿ ಎಲ್ಲಾ ಸಂಭವಿಸುವುದು. ಮಾರಾಮಾರಿಯು ಊರು ಕೂಡಾ ಪ್ರೀತಿಯು ಊರಾಗುವುದು ಕೂಡಾ.

"ಕಮ್ಮಟದಲ್ಲಿ ದೊಡ್ಡ ಪುಕಾರು ಎದ್ದಿತು. ಜಂಗಮರ ಹೆಣ್ಣು ಮಗಳೊಬ್ಬಳು ಬೇಡರ ಹುಡುಗನೊಬ್ಬನನ್ನು ಪ್ರೇಮಿಸುತ್ತಿರುವುದಾಗಿಯೂ ಹುಡುಗ ಮದುವೆ ಮಾಡಿಕೊಳ್ಳಬೇಕೆಂದು ಪ್ರತಿಭಟಿಸಿದ. ಅದೆಲ್ಲವೂ ಅಮೃತಾಂಬುಧಿಯು ಧರ್ಮಕ್ಕೆ ತಕ್ಕಂತೆ ಕೊಲೆಯಲ್ಲಿ ಮುಗಿಯಲ್ಲಿದೆ ಎಂದು ಕೊಂಡರು"(11) ಆದರೆ ದಿಟ್ಟ ನಿರ್ಧಾರದ ಶ್ಯಾಮಲಾಳು ತಿಪ್ಪಣ್ಣನನ್ನು ಮದುವೆಯಾದುದರ ಕುರಿತಾದದ್ದು ಊರಿನಲ್ಲಿ ಕೋಲಾಹಲ ಎಬ್ಬಿಸಿ ಮಲ್ಲಯ್ಯನು ರಕ್ಕಸನಂತಾದ. ಇದು ಜಾತಿಯ ಪ್ರಶ್ನೆಯಲ್ಲ. ಬೇಡರ ಹುಡುಗನೊಬ್ಬ ಇಲ್ಲಿ ಉಣ್ಣುವ, ಮಲಗುವ ಪ್ರಶ್ನೆ. ಊರಿನ ಗೈರತ್ತು, ಸ್ವಾಭಿಮಾನದ ಪ್ರಶ್ನೆ, ಊರಿನ ಸಮಸ್ಯೆಗಳನ್ನು ಬಗೆಹರಿಸುವ ಶೈಲಿಯ ಪ್ರಶ್ನೆ *(11) ಎಂಬಂತೆ ಬಂದೂಕನ್ನು ಹಿಡಿದು ತಿಪ್ಪಣ್ಣನ ಮನೆಯತ್ತ ಹೊರಟ. ತಿಪ್ಪಣ್ಣನ ಮುಗ್ಧತೆ, ನೋವು, ಪ್ರೀತಿಯು ಮಾತುಗಳಿಂದಾಗಿ ಮಲ್ಲಯ್ಯನ ಮನಸ್ಸು ವಿಚಿತ್ರ ದ್ವಂದ್ವದಲ್ಲಿ, ತಿಪ್ಪಣ್ಣನ ಮನೆಯು ವಾತಾವರಣವನ್ನು ನೋಡಿಯೇ ಎದ್ದು ಹೊರಟ.

ಜಾತಿಯ ಪ್ರಶ್ನೆಯು ಬೃಹದಾಕಾರವಾಗಿ ಬೆಳೆದು ಧರ್ಮದ ನೆಲೆಯಲ್ಲಿ ಸಿಕ್ಕಿ ಬೀಳುತ್ತದೆ. ಜಗದ್ಗುರುಗಳ ತನಕ ಹೋಗಿ ಶ್ಯಾಮಲಳ ಮನಸ್ಸನ್ನು ಬದಲಾಯಿಸುವ

ಸಲುವಾಗಿಯೇ ಮನೆಗೆ ಬರುತ್ತಾರೆ. ಶ್ಯಾಮಲ ಯಾವುದೇ ರೀತಿಯ ದುಗುಡಗಳು ಮತ್ತು ತನಗೆ ಸಂಬಂಧವಿಲ್ಲದ ಪ್ರಶ್ನೆಗಳಿಗೆ ಎದುರಾಗುತ್ತಾಳೆ. ಸ್ವಾಮೀಜಿಯ ಮಾತಿನಿಂದ ವಿಚಲಿತಳಾದ ಶ್ಯಾಮಲಳ ಎದುರು ಸೋಲುತ್ತಾರೆ. ಇದು ಸ್ವಾಮೀಜಿಯನ್ನು ವಿಚಿತ್ರ ನೊವು, ಏನನ್ನೋ ಕಳೆದುಕೊಂಡ ಭಾವನೆ, ಇನ್ನೂ ಸಣ್ಣವರಾಗಿ ಕುಗ್ಗಿದಂತೆ ಅನಿಸುತ್ತದೆ. ಮಲ್ಲಯ್ಯ ಕೂಡಾ ತಿಪ್ಪಣ್ಣನ ಮುಗ್ಧ ವ್ಯಕ್ತಿತ್ವಕ್ಕೆ ಮಾರುಹೋದರೂ ಕೂಡಾ ಊರಿನ ವ್ಯವಸ್ಥೆಯ ಸಮಾಜದ ಅಂಜಿಕೆಯಿಂದಾಗಿ ಏನನ್ನೂ ಒಪ್ಪಿಕೊಳ್ಳದ ಸ್ಥಿತಿಯಲ್ಲಿದ್ದವನು.

"ಬಂಡೆಯ ಸಂಧಿಯಲ್ಲಿ ಮರ ಬೇರು ಬಿಟ್ಟಂತೆ ಬೇರು ಬಿಟ್ಟು ಬಂಡೆಯನ್ನು ಒಡೆದಂತೆ ಎಳೆಯ ಹೆಣ್ಣಿನಲ್ಲಿ ಹೊಸ ಜೀವ ಮೊಳೆತಂತೆ ಮೊಳೆತು ಅವಳನ್ನು ಅಲ್ಲಾಡಿಸಿದಂತೆ ಅಥವಾ ಪರಂಪರಾಗತ ಬದುಕಿನಲ್ಲಿ ಮುಳುಗಿದ್ದವು. ಎಲ್ಲಾ ಜಟಿಲವಾದ ಆಚಾರಗಳಲ್ಲಿ ಬಂಧಿಸಲ್ಪಟ್ಟ ಒಂದು ದಿನ ಸಂಪೂರ್ಣ ನೀಲಿ ಅಕಾಶ, ಬೆಳ್ಳಕ್ಕಿಗಳ ಹಿಂಡು, ಅದರೊಂದಿಗೆ ಅನಂತತೆಯ ಕಾಣ್ಕೆ ಕಂಡಂತೆ. 1) ಮಲ್ಲಯ್ಯನಂತಹ ಕಠೋರ ಮನುಷ್ಯನನ್ನು, ವೀರಾವೇಶದ ಮಾರಾಮಾರಿಯ ಊರನ್ನು ಬದಲಾಯಿಸಲಾಗದ, ಕದಲಿಸಲಾಗದ ಜಾತಿ ವ್ಯವಸ್ಥೆಯನ್ನು ಛಿದ್ರಗೊಳಿಸುವ ಶಕ್ತಿಯು ಶ್ಯಾಮಲಳ ಮತ್ತು ತಿಪ್ಪಣ್ಣರ ಪ್ರೀತಿಯಿಂದ ಸಾಧ್ಯ. ಬದುಕುವ ಎಲ್ಲಾ ಕ್ಷಣಗಳು ಕೂಡಾ ಇಂತಹ ಕಟ್ಟುನಿಟ್ಟಿನ ಆಚರಣೆಗಳು, ವ್ಯವಸ್ಥೆಗಳಿಗೆ ಬಲಿಯಾಗಿ ಯಾವುದೇ ರೀತಿಯ ಅಡೆತಡೆಗಳಿಲ್ಲದ ಮುಗ್ಧ, ಸ್ವಚ್ಛಂದ ಹಕ್ಕಿಗಳ ಹಾಗೆ ಇಡೀ ವ್ಯವಸ್ಥೆಯಲ್ಲಿನ ಪ್ರತಿಯೊಬ್ಬರೂ ಬದಲಾಗುವ ಹಂಬಲ ಕಾಣಬಹುದು.

ಅಷ್ಟು ಸುಲಭ ಸಾಧ್ಯವಲ್ಲದ ಸಮಯ, ಸಾಕಷ್ಟು ಧೈರ್ಯವನ್ನು ಆತ್ಮ ಪ್ರತ್ಯಯವನ್ನು ಕೊಂಚ ತ್ಯಾಗವನ್ನು, ಕೊಂಚ ತ್ಯಾಗವನ್ನು ಮತ್ತು ಮುಖ್ಯವಾಗಿ ಪ್ರೀತಿಯನ್ನೊಳಗೊಂಡ ಆಳಬಹುದಾದ ಸಮಯ ಎಂದು ಕರೆಯಬಹುದು. ಈ ಕ್ರಿಯೆಯ ಮೂಲಕವೇ ಏನನ್ನೂ ಸಾಧಿಸಲಾಗದಂತೆ ಕಾಣುವ ಪಾತ್ರಗಳು ಕೂಡಾ

ಎಲ್ಲಾ ಮಡುಗಟ್ಟಿದ ಸ್ಥಿತಿಯಿಂದ ಹೊರಬಂದು ಹೊಸಗಾಳಿ ಪಡೆ೦ಯಲು ಪಂಬಲಿಸುವುದು. ಹೊಸ ಚೇತನಕ್ಕಾಗಿ ಕಾತರಿಸುವುದು ಜಡತ್ವವನ್ನು ಕೊಡವಿ ನಿಲ್ಲುವುದನ್ನು ತಿಪ್ಪಣ್ಣನ ಮೂಲಕ ಗ್ರಹಿಸಬಭುದು. ಜಾತಿ ಮೀರಿದರೆ, ಧರ್ಮ ಮೀರಿದರೆ ನೀತಿ ಪ್ರತಿಷ್ಠೆಗಳನ್ನು ಮಿರಿದಾಗ ಜೀವ, ಪ್ರೀತಿಯು ಉಳಿಯಬಹುದೆಂಬ ಸತ್ಯವನ್ನು ಕಾಣಿಸುವ ಶ್ಯಾಮಲ ತಿಪ್ಪಣ್ಣರು ಮಲ್ಲಯ್ಯನಿಗೆ ಅಮೃತಾಂಬುಧಿಯಂತಹ ಆವೇಶದ ಮಾರಾಮಾರಿಯ ಊರಿಗೆ, ಒಟ್ಟು ಇಡೀ ನೀತಿಗೆಟ್ಟ ಜಾತಿ ವ್ಯವಸ್ಥೆಯ ಸಮಾಜಕ್ಕೆ ಚಿಕಿತ್ಸೆ ನೀಡಬಲ್ಲವರಾಗಿದ್ದಾರೆ.

ಲಂಕೇಶರು ಜಾತಿ೦ಯ ಬಗೆಗಿನ ಅಸ್ಪೃಶ್ಯತೆ, ಧರ್ಮ, ಊಳಿಗಮಾನ್ಯ ವ್ಯವಸ್ಥೆ೦ಯ ಬಗ್ಗೆ ತೀವ್ರ ಆವೇಶಕ್ಕೆ ಒಳಗಾಗಿ ಸಾಮಾಜಿಕವೆನಿಸುವ ಸಂಗತಿಗಳ ಬಗ್ಗೆ ಜನಪ್ರಿ೦ಯ ಗ್ರಹಿಕೆ೦ಯಾಗಿ ಬರೆ೦ಯುವುದಿಲ್ಲ. ಅನುಭವದಲ್ಲಿ೦ಯೇ ಪ್ರಮಾಣವಾಗಿ, ೦ಯಾತನಾಮ೦ಯ ಸಂಕಟವಾಗಿ ಪರಿಪಕ್ವಗೊಳ್ಳುವ ದಾದಿ೦ಯಾಗಿ, ಅನೇಕ ಮಜಲುಗಳಲ್ಲಿ ಪರಿಕ್ಷಿಸಲ್ಪಡುತ್ತವೆ. ಈ ಬಗೆ೦ಯ ಬರವಣಿಗೆ೦ಯು ಸಾಧ್ಯವಾದದ್ದು ಅನೇಕ ರೀತಿ೦ಯ ತಲ್ಲಣಗಳನ್ನು ಭವಿಸಿ ಕಂಡುಕೊಂಡವು. ಪತ್ರಿಕೋದ್ಯಮಿ೦ಯಾಗಿ, ಸಿನಿಮಾರಂಗದಿಂದ, ಪ್ರಗತಿರಂಗ, ಸಾಹಿತ್ಯ ಸೃಷ್ಟಿ ಭಿನ್ನ ಕ್ಷೇತ್ರಗಳ ನಡುವೆ ತೊಡಾಗಿಸಿಕೊಂಡು ನೋಡುವಂತಹ ಕ್ರಮ ಮುಖ್ಯವೆನಿಸುತ್ತದೆ. ಹಳ್ಳಿ೦ಯಷ್ಟೆ ಗಂಭೀರವಾದ ಸಮಸ್ಯೆಗಳು ನಗರದಲ್ಲಿರುವುದನ್ನು ಇವರ ಕಥೆಗಳಲ್ಲಿ ಗುರುತಿಸಬಹುದು. ಅಂತಹ ಒಂದು ಪ್ರ೦ಯತ್ನ ಮುಂದಿನ ಅಧ್ಯ೦ಯನದಲ್ಲಿದೆ.

ಅಡಿ ಟಿಪ್ಪಣಿಗಳು:

1) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 329.

2) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 332

3) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 333

4) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 331

5) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 332

6) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 339

7) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 334

8) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 377

9) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 381

10) ಪಿ. ಲಂಕೇಶ್‌ರ ಸಮಗ್ರ ಕಥೆಗಳು, ಪುಟ – 392

ಅಧ್ಯಾಯ – 5

ಲಂಕೇಶರ ಕಥೆಗಳಲ್ಲಿ ಪರಕೀಯ ಪ್ರಜ್ಞೆ

ನವ್ಯ ಸಾಹಿತ್ಯವು ಅಂದಿನ ಸಮಾಜದ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ನಂಬಿಕೆ ಮತ್ತು ಮೌಲ್ಯಗಳು ಶೋಧನೆಗೆ ಗುರಿಯಾದವು. ಅದೇ ಸಂದರ್ಭದಲ್ಲಿ ವರ್ತಮಾನದ ಬದುಕಿನ ಸಂಘರ್ಷ, ತಾತ್ವಿಕ ಅಂತರ್ಮುಖತೆ, ವ್ಯಂಗ್ಯ ಜೀವನದ ವೈಶಾಲ್ಯವನ್ನು ಹೇಳುವಂತಹ ಕಥೆಗಳು ಬಂದವು. ಜೀವನದಲ್ಲಿನ ಸತ್ಯಾಸತ್ಯತೆ, ನಿಗೂಢತೆ, ದ್ವಂದ್ವ ಘರ್ಷಣೆ ಹಾಗೂ ವಿರೊಧಾಭಾಸಗಳನ್ನು ಮಂಡಿಸುತ್ತದೆ. ಮುಖ್ಯವಾಗಿ ಇದು ಲಂಕೇಶರರಲ್ಲಿ ಮನುಷ್ಯನ ಸಣ್ಣತನ, ಅವಮಾನ, ಹಿಂಸೆ, ವ್ಯಂಗ್ಯದ ಮೂಲಕವೇ ತಮ್ಮ ಕಥೆಗಳಲ್ಲಿ ನವ್ಯ ಸಾಹಿತ್ಯದ ವಿಶಿಷ್ಟ ಲಕ್ಷಣವಾದ ಪರಕೀಯ ಪ್ರಜ್ಞೆಯ ಬಗ್ಗೆ ಹೇಳತೊಡಗಿದವರು. ಲಂಕೇಶರ ಬಿರುಕು ಕಾದಂಬರಿಯ ನಾಯಕ 'ಬಸವರಾಜು'ವಿನಿಂದ ಆರಂಭಗೊಂಡ ಈ ರೀತಿಯಾದ ಸಮಾಜಕ್ಕೂ ಮತ್ತು ವ್ಯಕ್ತಿಯ ನಡುವಣ ಯಾವುದೇ ರೀತಿಯ ಸಂಬಂಧಗಳು ಏರ್ಪಡುವಂತಹವು. ಮುಂದೆ ಇವರ ಕಥೆಗಳಲ್ಲಿ ಪಡೆದಿರುವ ಪರಕೀಯ ಪ್ರಜ್ಞೆಯ ಸ್ವರೂಪವನ್ನು ಗ್ರಹಿಸುವುದಾಗಿದೆ.

ಇವರ ಮೊದಲನೆಯ ಕಥಾ ಸಂಕಲನವಾದ **'ಕೆರೆಯ ನೀರನ್ನು ಕೆರೆಗೆ ಚೆಲ್ಲಿ'** ಮುನ್ನುಡಿಯಲ್ಲಿ ಇವರೇ ಹೇಳುವಂತೆ "ನನ್ನ ಕಥೆಗಳಲ್ಲಿ ಬರುವ 'ನಾನು ಯಾರು? ಅದು ಅಂತಹ ಕಥೆಯಲ್ಲಿನ ಭಾವನೆಗಳನ್ನು ವೈಯುಕ್ತಿಕವಾಗಿ ಅನುಭವಿಸಿ ಕತೆಯ ರೂಪದಲ್ಲಿ ದಾಖಲೆಗೊಳಿಸುವ ಕೇಂದ್ರ ವ್ಯಕ್ತಿಯ ಪ್ರಜ್ಞೆ. ಈ ಮೂಲಕ ಲಂಕೇಶರು ಆತ್ಮ ವಿಮರ್ಶೆಯ ಸ್ವಕೇಂದ್ರೀತವಾದ ಚಿಂತನೆಯ ಮೂಲಕವೇ ಸಮಾಜವನ್ನು ಗ್ರಹಿಸಲೆತ್ನಿಸುವ ಪ್ರಯತ್ನ ಮಾಡಿದಂತಿದೆ. **'ವಾಮನ'** ಕಥೆಯಲ್ಲಿ

ಬರುವ ನಾಯಕ ತಾನು ಬರೆದಿರುವ ಕಥೆಯ ಬಗ್ಗೆಯೇ ಅತೃಪ್ತಿ, ಆತಂಕಗಳನ್ನು ಹೊಂದಿದವನು. ತಾನು ಮಾತನಾಡುತ್ತಿದ್ದ ಹಾಗೆಯೇ ತನ್ನ ಬಗ್ಗೆಯೇ ಅತೃಪ್ತಿಯುಳ್ಳವನು. ಕಥೆಯ ತುಂಬಾ ಒಂದು ರೀತಿಯ ಅಸ್ವಾಗತ ಧಾಟಿಯ ನಿರೂಪಣೆಯಲ್ಲೇ ನಾಯಕನು ಮಾತನಾಡುತ್ತಾ ಹೋಗುತ್ತಾನೆ. ತನ್ನ ಸ್ನೇಹಿತನೊಬ್ಬನು ಕಥೆಗಾರರನ್ನು ಭೇಟಿ ಮಾಡಲು ಬರುತ್ತಾರೆ. ಅವರಿಬ್ಬರ ನಡುವಿನ ಅಂದರೆ ಸಂಜೀವಯ್ಯ ಮತ್ತು ನಾಯಕನ ನಡುವೆ ನಡೆಯುವ ಸಂಭಾಷಣೆಯೇ ಕಥೆಯಾಗಿದೆ. ಆದರೆ ನಾಯಕನು ತನ್ನ ಕತೆಗಳ ಬಗ್ಗೆ ಹೇಳುತ್ತಾ ಹೋದಂತೆಲ್ಲಾ ಅದು ತನ್ನ ವೈಯುಕ್ತಿಕವೆಂದು ಎದುರಿಗಿರುವ ವ್ಯಕ್ತಿಯು ಭಾವಿಸದಂತೆ ಅವನ ಬಗ್ಗೆ ಸಿಟ್ಟು, ಕೋಪ, ಗೇಲಿ, ವ್ಯಂಗ್ಯ ಮಾಡಲಾರಂಭಿಸುತ್ತಾನೆ. ಆದರೆ ತಾನು ಮಾತನಾಡುತ್ತಿದ್ದ ಹಾಗೆಯೇ ಎದುರಿಗಿರುವ ಸಂಜೀವಯ್ಯನು ಬೆಳೆಯುತ್ತಾ ಬೆಳೆಯುತ್ತಾ ನಾಯಕನ ವ್ಯಕ್ತಿತ್ವವನ್ನೇ ಆವರಿಸಿ ಬಿಡುತ್ತಾನೆ. ನಾಯಕನ ವ್ಯಕ್ತಿತ್ವ ಎದುರಿಗಿರುವ ವ್ಯಕ್ತಿತ್ವದಿಂದಾಗಿ ಸಂಪೂರ್ಣವಾಗಿ ಇಲ್ಲವಾಗುತ್ತಾ ಹೋಗುತ್ತದೆ. ಸಂಜೀವಯ್ಯನ ಎದುರು 'ನನಗೆ ನಾನೇ' ಎಂಬ ಕಲ್ಪನೆಯನ್ನಿಟ್ಟುಕೊಂಡೇ ಸಂಪೂರ್ಣವಾಗಿ ಇಲ್ಲವಾಗುತ್ತಾನೆ.

ನವ್ಯ ಸಾಹಿತ್ಯದ ನಾಯಕ ಮುಖ್ಯವಾಗಿ ನಗರದಲ್ಲಿನ ಪರಕೀಯ ಪರಿಸ್ಥಿತಿಯನ್ನು ಅನುಭವಿಸುವಂತಹವನು. ಆದರೆ 'ಕೊನೆ' ಕಥೆಯಲ್ಲಿ ಬರುವ ಉಜ್ಜು ಕೂಡಾ ಇಂತಹುದೇ ಸ್ಥಿತಿಯನು ತಲುಪಿದವನು. ಇದರ ಮೂಲಕ ಲಂಕೇಶರು ಹಳ್ಳಿಯಲ್ಲಿನ ವ್ಯಕ್ತಿತ್ವಗಳು ಕೂಡಾ ಹೇಗೆ ಸಮಾಜದಿಂದ ತಪ್ಪಿಸಿಕೊಳ್ಳುವ ಅಥವಾ ಅದರ ಬಗ್ಗೆ ಒಂದು ರೀತಿಯ ಹಳಾಹಳಿಕೆಯನ್ನಿಟ್ಟುಕೊಂಡು ಬದುಕುವುದನ್ನು ಕಾಣಬಹುದಾಗಿದೆ. ಉಜ್ಜ ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದು ಹಳ್ಳಿಯಲ್ಲಿ ತನ್ನ ತಂದೆಯಿಂದ

ಅವಮಾನಿತವಾದಂತೆ ಭಾಸಗೊಂಡು ಸಾಯಲು ನಿರ್ಧಾರ ಮಾಡುತ್ತಾನೆ. ಈ ನಿರ್ಧಾರದ ಸಮಯದಲ್ಲಿಯೂ ಹೆಣ್ಣಿನ ಬಗ್ಗೆ ಆಕರ್ಷಣೆಯನ್ನು ಹೊಂದಿ ಪಾರ್ವತಿಯನ್ನು ಗಂಗೆಯನ್ನು ಬಲವಂತವಾಗಿ ಒಡಿದಿಕೊಳ್ಳಲು ಯತ್ನಿಸುತ್ತಾನೆ. ಕೊನೆಗೆ ಎಲ್ಲವೂ ನಿರರ್ಥಕವೆನಿಸಿ ಹುಲಿಯನ್ನು ಕೊಂದು ತಾನು ಸಾಯುತ್ತಾನೆ.

ನಮ್ಮ ಸಾಹಿತ್ಯವು ಮನುಷ್ಯನ ಖಾಸಗಿ ಕ್ರಿಯೆಗಳ ಮೂಲಕ ಸಾಮಾಜಿಕತೆಯನ್ನು ಶೋಧಿಸುತ್ತದೆ. ಈ ಸಾಮಾಜಿಕ ಅನುಭವಗಳಲ್ಲಿರುವ ಮೌಲ್ಯಗಳು ಸಂಬಂಧಗಳನ್ನು **'ನಾನಲ್ಲ'** ಕಥೆಯ ಮೂಲಕ ನೋಡಬಹುದು. ಕಥೆಯ ಶೀರ್ಷಿಕೆಯೇ 'ನಾನು ಅಲ್ಲ' ಹಾಗಾದರೆ ಯಾರು ಎಂಬ ಪ್ರಶ್ನೆ ಹೇಳುತ್ತದೆ. ನಿರಂತರವಾದ ಹೇರಿಕೆಗಳು, ಮೌಲ್ಯಗಳು, ಒತ್ತಡಗಳು, ನಡಾವಳಿಗಳು ನಮ್ಮನ್ನೆಲ್ಲಾ ನಾನು ಅಲ್ಲದಂತೆ ಮಾಡಿವೆಯೇನು ಎಂದೆನಿಸುತ್ತದೆ. ಅಡಿಗರು ಈ ಕಥಾ ಸಂಕಲನಕ್ಕೆ ಮುನ್ನುಡಿಯನ್ನು ಬರೆಯುತ್ತಾ "ಈ ಕಥೆಗಳಲ್ಲಿ ನಮಗೆ ಪರಿಚಯವಾಗುವುದು, ನಮಗೆ ಚಿರಪರಿಚಿತವಾದ ಪ್ರಜ್ಞಾರೂಢವಾದ 'ನಾನಲ್ಲ' ಆ ಅಪರಿಚತವಾದ, ಪ್ರಜ್ಞೆಯ ಒಳಪದರಗಳಲ್ಲಿ ಅಡಗಿರುವ ತೀರಾ ಹೊಸಬ ಎನಿಸುವಂಥ ನಾನು ಈ ಹೊಸಬ ನಾನಲ್ಲ ಅಂತಲೂ ಧೈರ್ಯವಾಗಿ ಹೇಳಬಹುದಾದಷ್ಟು ಆಳವಾಗಿ, ಗುಪ್ತವಾಗಿ ಅದು ನಮ್ಮೊಳಗೆ ಇರುತ್ತದೆ. ಅದರೆ ನಿಜವಾದ ನಮ್ಮ ಕೃತಿಗಳೆಲ್ಲಾ ವ್ಯಕ್ತವಾಗುವ 'ನಾನು' ಅದೇ ಲಂಕೇಶರು ಈ ಕಥೆಗಳಲ್ಲಿ ಚಿತ್ರೀಕರಿಸುವುದು ಪ್ರತಿಯೊಬ್ಬ ವ್ಯಕ್ತಿಯ ಅಹಂಕಾರ ಜನಿತವಾದ, ಅವನೂ ಉಳಿದವರೂ ಸುಲಭವಾಗಿ ಗುರುತಿಸಬಲ್ಲ ವ್ಯಕ್ತಿತ್ವದ ಹೊಸ ರೂಪದವನಲ್ಲ. ಅವನಿಗೆ ಅರ್ಥಬರ್ಥ ಹೊಳೆಯುತ್ತಿರುವ, ಉಳಿದವರಿಗೆ ಸಾಮಾನ್ಯವಾಗಿ ಕಾಣದೆ ಇರುವ ಆ ಒಳ ರೂಪವನ್ನು ನಾನನ್ಲ ಕಥೆಯ ನಾಯಕ ಕೂಡ ಹೀಗೆ ಇರುವವನು". ನನ್ನ ತಲೆ ಮೇಲೆ ಜಗತ್ತು ಬಿದ್ದಿರುವುದು ಅಷ್ಟರಲ್ಲೇ

ಇದೆ" ಎಂದು ಭಾವಿಸಿರುವನು. ಇವನಲ್ಲಿ ಅಡಗಿರುವ ಸುಪ್ತ ಪ್ರಜ್ಞೆಗೆ ಹೆಚ್ಚಾಗಿ ಚಿತ್ರಿಸುತ್ತಾ ಹೋದಂತೆಲ್ಲಾ ಕೊನೆಗೆ ಹೋದ ಬಗ್ಗೆ ಏನೂ ಆಗದವನಂತೆ ಹಾಗೆಯೇ ಉರುಳಿ ಕಣ್ಣು ಮುಚ್ಚಿದವನಾಗುತ್ತಾನೆ.

ನಾನಲ್ಲ ಕಥೆಯಲ್ಲಿ ಬರುವ ಈತನಿಗೆ ಹೆಸರೇ ಇಲ್ಲದಿರುವುದು ಮತ್ತೊಂದು ವೈಶಿಷ್ಟ್ಯ. ರಸ್ತೆಯಲ್ಲಿ ಬಿದ್ದಿರುವ ಹೆಣದ ಬಗ್ಗೆ ದಾರಿಯಲ್ಲಿ ಹೋಗುವವರಾಗಲೀ, ಯಾರೂ ಅದರ ಬಗ್ಗೆ ಗಮನಹರಿಸುತ್ತಿಲ್ಲವೆಂದು ಭಾವಿಸುವ ಈತ ಹಣದ ಮೂಲಕವೇ ನಾನು ಕೂಡಾ ಯಾರು ಯಾವುದರ ಸೆಳೆತಕ್ಕೆ ಒಳಗಾಗಿ ಈ ರೀತಿಯ ಬಂಧಿಯಾಗಿದ್ದೇನೆಂದು ಅನಿಸುತ್ತದೆ.

ನಾನಲ್ಲ ಕಥೆಯ ಪ್ರಜ್ಞೆಯ (ನಾನು) **ಅಸ್ವಸ್ಥರು** ಕಥೆಯಲ್ಲಿನ ಶಂಕರನ ಮೂಲಕ ಮುಂದುವರೆದಿದೆ ಎಂದೆನಿಸುತ್ತದೆ. ತನಗೆ ಉಂಟಾಗುವ ಬೇಸರ, ಸಿಟ್ಟು, ಆತಂಕ, ಭ್ರಾಂತಿ, ದಿಗ್ಭ್ರಮೆಗಳ ಮೂಲ ಯಾವುದಿರಬಹುದೆಂದು ಊಹೆಯನ್ನು ಮಾಡುತ್ತಾ ಹೋಗುತ್ತಾನೆ. ತನ್ನ ಹೆಂಡತಿಯನ್ನು ಮದುವೆಯಾಗದ್ದಿರಬಹುದೇ ಅಥವಾ ಬಾಗಿಲಲ್ಲಿ ನಿಂತು ಪಕ್ಕದ ಮನೆಯ ಹುಡುಗ ಶಿಳ್ಳೆಯನ್ನು ಹಾಕುವುದು, ಪತ್ರಿಕೆಯಲ್ಲಿ ಬಂದ ವರದಿ, ಇವುಗಳ ಮೂಲಕ ತನ್ನನು ಗುರುತಿಸಿಕೊಳ್ಳುತ್ತಾ ಹೋದ ಹಾಗೆಲ್ಲಾ ದಿಗ್ಭ್ರಮೆಯೆನಿಸುತ್ತದೆ. ತನ್ನ ಹೆಂಡತಿಯು ವಿಷ ಕುಡಿಯುವ ಹಂತದವರೆವಿಗೂ ಹೋಗಿ ಆಸ್ಪತ್ರೆಯಲ್ಲಿ ಅವಮಾನಗೊಳ್ಳುತ್ತಾನೆ.

ಸೆಪ್ಟೆಂಬರ್‌ನಲ್ಲಿ ಪ್ರಥಮ ರಾತ್ರಿಯಲ್ಲಿನ ನಾಯಕ ಹಳ್ಳಿಯಿಂದ ನಗರಕ್ಕೆ ಬಂದು ಇಲ್ಲಿನ ಯಾಂತ್ರಿಕ ಬದುಕಿಗೆ ದಿಗ್ಭ್ರಮೆಗೊಳ್ಳುತ್ತಾನೆ. ಇಲ್ಲಿನ ತಲ್ಲಣಗಳು, ಹಳ್ಳಿಯವನೊಬ್ಬನು ಹೇಗೆ ಸಂಕೀರ್ಣ ಸ್ಥಿತಿಗೆ ತಲುಪುತ್ತಾನೆಂಬುದನ್ನು ಕಾಣಬಹುದು. ಬಿರುಕು ಕಾದಂಬರಿಯಲ್ಲಿನ ಬಸವರಾಜ ಕೊನೆಯಲ್ಲಿ ಅರೆ

ಬೆತ್ತಲೆ0ಯಾಗಿ ಬೀದಿ0ಯಲ್ಲಿ ಸುತ್ತುವ ಸ್ಥಿತಿ0ಯು ಇಲ್ಲಿನ ನಾ0ಯುಕನಲ್ಲೂ ಕೂಡಾ "ಊರಿನ, ಕಾಡಿಗೆ, ಗಲ್ಲಿಗಳ ಇಕ್ಕಟ್ಟುಗಳಿಗೆ, ಎಲ್ಲಾದರೂ ಓಡಿ ಹೋಗಬೇಕೆಂದು ಕಾತರ ಬೆಳಿಗ್ಗೆ, ಆದರೆ ಆತಂಕ"*(1) ದಿಂದ ಆತ ಅಸಾಹ0ಯುಕತೆ0ಯನ್ನು ತಲುಪುತ್ತಾನೆ. ತನಗೆ ಪರಿಚಿತಳಾದ ಶಾಂತಾಳ ಬಾಳನ್ನು ಹತ್ತಿರದಿಂದ ಕಾಣುತ್ತಾನೆ. ಜೀವನದಲ್ಲಿ ನೊಂದ ಒಬ್ಬಂಟಿ ಹೆಣ್ಣಿನ ಜೊತೆ ಮಲಗುತ್ತಾನೆ. ಅಲ್ಲಿ ಆದ ಅವಮಾನದಿಂದ ಓಡಿ ಹೋಗಿ ರೂಮಿನಲ್ಲಿ ಬಿಕ್ಕಳಿಸಿ ನಿರ್ಲಿಪ್ತತೆ0ಯಲ್ಲಿ ಬಿದ್ದುಕೊಳ್ಳುತ್ತಾನೆ. **'ತಂದೆ'** ಕತೆ0ಯಲ್ಲಿ ಬರುವ ಶಂಕರನೂ ಕೂಡಾ ಹೊರಗಿನ ವ್ಯಕ್ತಿತ್ವಗಳ ಮೂಲಕವೇ ತನ್ನನ್ನು ತಾನು ಅಸಾಹ0ಯುಕತೆ0ಯಲ್ಲಿ ಸಿಲುಕಿಕೊಳ್ಳುತ್ತಾನೆ. ಹಳ್ಳಿ0ಯಲ್ಲಿನ ತಂದೆ0ಯನ್ನು ಆಸ್ಪತ್ರೆ0ಯಲ್ಲಿ ಸೇರಿಸಿದಾಗ ಅವನನ್ನು ಉಳಿಸಿಕೊಳ್ಳುವ ಪ್ರ0ಯತ್ನ ಮಾಡುವಂತೆ ಇಂಗ್ಲೀಷ್‌ನಲ್ಲಿ ಡಾಕ್ಟರನ್ನು ಕೇಳಿಕೊಳ್ಳಬೇಕೆಂಬ ನಿರೀಕ್ಷೆ0ಯು ಅವನನ್ನು ಅವನಲ್ಲಿ ಸಂಕೋಚ ಮುಜುಗರವನ್ನುಂಟು ಮಾಡುತ್ತವೆ. ಲಂಕೇಶರ ಧಾಳಿ ಕತೆಯು ಮನುಷ್ಯ ಸ್ವಭಾವದ ನಿಗೂಢತೆಯ ಹುಡುಕಾಟಕ್ಕೆ ಮಾನವನ ಅಂತರಂಗದ ಆಳ, ಅಗಲಗಳು ತೆರೆದು ತೋರಿಸುತ್ತದೆ. ರಾಜಕಾರಣಿ ಊರಿಗೆ ದಾಳಿಯನ್ನು ಮಾಡುತ್ತಾರೆಂಬ ಭೀತಿಯು ಅದಕ್ಕೆ ಮಾಡಿಕೊಳ್ಳುವ ಸಿದ್ಧತೆಗಳನ್ನು ಕುರಿತು ಹೇಳುವಂತಾಗಿದೆ. ಧಾಳಿ0ಯನ್ನು ಕುರಿತು ನಿರೀಕ್ಷೆ0ಯಲ್ಲಿದ್ದ ಇಡೀ ಊರು ತಮ್ಮ ಸಂಪತ್ತು. ಐಶ್ವ0ರ್ಯಗಳನ್ನು ಸುರಕ್ಷಿತ ಕೋಟೆ0ಯಲ್ಲಿಡುತ್ತಾರೆ. ಹಾಗೆ0ಯೇ ಊರಿನ ಹೆಣ್ಣುಗಳನ್ನು ಕೂಡಾ. ಆದರೆ ತಮ್ಮ ಊರಿನಲ್ಲಿ0ಯೇ ದರೋಡೆಗಳು ಪ್ರಾರಂಭವಾಗುತ್ತವೆ. ಕೊನೆಗೂ ನಿರೀಕ್ಷೆ0ಯಂತೆ ರಜಕಾರರು ಧಾಳಿ0ಯನ್ನು ಮಾಡುತ್ತಾರೆ. ಧಾಳಿ ಮಾಡಿದ ನಂತರ 'ಸಲೀಂ' ಎಂಬ ಮುಸ್ಲಿಂ ಹುಡುಗ ಮಲ್ಲಿ0ಯ ಮನೆಗೆ ರಕ್ತ ಸುರಿಸುತ್ತಾ ಬರುತ್ತಾನೆ. ಮಲ್ಲಿ ಮತ್ತು ಸಲೀಂ ಪರಸ್ಪರ ಆಕರ್ಷಿತರಾಗುತ್ತಾರೆ.

"ಮಲ್ಲಿಯು ಭಯದ ಜಾಗವನ್ನು ಕಾಮ ಆವರಿಸುತ್ತಾ" ಕೊನೆಗೆ ಸೆರೆಸಿಕ್ಕ ಇವನನ್ನು ಬೆಂಕಿಗೆ ದೂಡುತ್ತಾರೆ.*(2) ಮಲ್ಲಿಯು ಕಣ್ಣಲ್ಲಿ ನೀರು, ಎದೆ ಗೊಂದಲ, ವಿಚಿತ್ರ ಸಂತೋಷ"ವೆನಿಸುತ್ತದೆ. ಆದರೆ ಆಳದ ದುಃಖ ನೋವುಗಳನ್ನು "ಕಂಬನಿಯ ಮೂಲಕ ಮಲ್ಲಿ ನೋಡುತ್ತಲೇ ಇದ್ದಳು".*(3) ಈ ರೀತಿಯ ಭಯ, ಆತಂಕ, ಸಿಟ್ಟು ನೋವುಗಳ ಹಿನ್ನೆಲೆಯಲ್ಲಿ ಮಲ್ಲಿಯು ತನ್ನ ಊರವರಿಂದ ಬೇರೆ ಎನಿಸುವಂತಾಗುತ್ತದೆ.

ಲಂಕೇಶರು ಜೀವನವನ್ನು ಪ್ರಾಮಾಣಿಕವಾಗಿ ನಿಷ್ಠುರವಾಗಿ, ತೀಕ್ಷ್ಣವಾಗಿ ಕಟುವಾಗಿ ನೋಡುವರು. ಮನುಷ್ಯ ತನ್ನ ನಡಾವಳಿಯ ಬಗ್ಗೆ ಇಟ್ಟುಕೊಳ್ಳುವ ಅಪೇಕ್ಷೆ ಮತ್ತು ಅವನ ನಿಜವಾದ ಆಗು-ಹೋಗುಗಳ ಮಧ್ಯೆ ಇರುವ ಬಿರುಕುಗಳನ್ನು ತೆರೆದು ತೋರಿಸುತ್ತದೆ. ಪರಕೀಯ ಪ್ರಜ್ಞೆ ಎಂಬುದು ಪಶ್ಚಿಮದ ನವ್ಯ ಸಾಹಿತ್ಯದ ಮುಖ್ಯ ಲಕ್ಷಣವೆಂಬಂತಿದ್ದರೂ ಲಂಕೇಶರಲ್ಲಿ ಅದು ಭಿನ್ನ ಭಿನ್ನ ಸ್ತರಗಳಲ್ಲಿ ಅದು ಮನುಷ್ಯನ ಮೂಲದಲ್ಲಿಯೇ ಅಡಗಿದೆ ಎಂಬುದನ್ನು ತೆರೆದು ತೋರಿಸುತ್ತದೆ. ಮನುಷ್ಯನ ಇಡೀ ಮಾನಸಿಕ ಜೀವನವನ್ನು ಮನುಷ್ಯನ ಮೂಲಭೂತ ಪ್ರವೃತ್ತಿಗಳ ಅನುಭವ, ಆಕ್ರಮಣ, ಪೀಡನೆ, ಹಿಂಸೆ ಮತ್ತು ಸಾಧ್ಯವಾಗದಿದ್ದಾಗ ಅದು ಶೋಧಿಸುವ ಅಪಮಾನ ವ್ಯವಸ್ಥೆ ಮುಖ್ಯವೆನಿಸುತ್ತದೆ. "ಲಂಕೇಶರ ಗುರಿಗಳು ಪ್ರಮುಖವಾಗಿ ಎರಡು. ಮಾನವನನ್ನು ಮತ್ತು ಮಾನವ ವರ್ತನೆಯನ್ನು ಕಪ್ಪು-ಬಿಳುಪು ಚೌಕಟ್ಟಿನಿಂದಾಚೆ. ಅದರ ಎಲ್ಲಾ ವೈರುಧ್ಯಗಳೊಂದಿಗೆ ದಾಖಲಿಸಿರುವುದು.

ಇಂತಹ ನಿಲುವಿನ ಗ್ರಹೀತವೆಂದರೆ ಮಾನವ ವರ್ತನೆಯನ್ನು ತಾರ್ಕಿಕ ನೆಲೆಯಲ್ಲಿ ಅರ್ಥೈಸಲು ಸಾಧ್ಯವಿಲ್ಲ. ಎರಡನೆಯದಾಗಿ ಯಾವ ಸಂದರ್ಭದಲ್ಲಿಯೂ

ಮತ್ತು ೦ಯಾವ ಕಾರಣಕ್ಕೂ ಭಾವೋದ್ವೇಗಕ್ಕೂ ಎಡೆಕೊಡದಿರುವುದು. ಲಂಕೇಶಕರು ಹೀಗೆ ಮಾನವನನ್ನು ಗ್ರಹಿಸಲು ಅವನು ಇರುವ ಸ್ಥಿತಿ೦ಯೊಂದಿಗೆ ವಿವರಿಸಿದ್ದಾರೆ.

ಲಂಕೇಶರ ವಾಮನ ಕಥೆ೦ಯಾಗಲೀ, ನಮ್ಮ ನಡುವಿನ ಹುಡುಗ ಕೊನೆ ಗೊಮ್ಮಟೇಶ್ವರ ಕಥೆಗಳಲ್ಲೆಲ್ಲಾ ಮುಖ್ಯ ಅನಿಸುವುದು ಪರಿಸ್ಥಿತಿ, ಸಂದರ್ಭಗಳಿಗೆ ಸಿಕ್ಕಿ, ಮನುಷ್ಯ ಸಣ್ಣತನಗಳು, ಸಿಟ್ಟು, ನಿರುತ್ಸಾಹ ಇವುಗಳನ್ನು ಎದುರಿಸುವ ಕಥೆಗಳಾಗಿ ಕಂಡು ಬರುತ್ತವೆ. ಅವಮಾನ ಮತ್ತು ದಿಗ್ಭ್ರಮೆಗಳ ಮೂಲಕ ಮನುಷ್ಯ ತಲುಪುವ ಆಳವನ್ನು ಸೂಚಿಸುತ್ತವೆ.

ಅಡಿ ಟಿಪ್ಪಣಿಗಳು:

1) ಪಿ. ಲಂಕೇಶರ ಸಮಗ್ರ ಕಥೆಗಳು, ಪುಟ – 172

2) ಪಿ. ಲಂಕೇಶ ಸಮಗ್ರ ಕಥೆಗಳು, ಪುಟ – 450

3) ಪಿ. ಲಂಕೇಶರ ಸಮಗ್ರ ಕಥೆಗಳು, ಪುಟ – 451

ಅಧ್ಯಾಯ – 6

ಪಿ. ಲಂಕೇಶರ ಕಥೆಗಳಲ್ಲಿ ನಗರ ಜೀವನದ ಚಿತ್ರಣ

ಲಂಕೇಶರು ಆಧುನಿಕ ಮಧ್ಯಮ ವರ್ಗದ ಬುರ್ಜ್ವಾ ಬದುಕನ್ನು ತಿರಸ್ಕರಿಸಿದವರು. ನಗರದಲ್ಲಿನ ಒಬ್ಬಂಟಿತನಗಳು, ಕ್ರೌರ್ಯ, ಬೂಟಾಟಿಕೆ, ಯಾಂತ್ರಿಕತೆ, ನಗರದ ನಿರ್ಲಿಪ್ತತೆಯನ್ನು ಶೋಧಿಸುವ ಕಥೆಗಳನ್ನು ಕಾಣಬಹುದು. ಪ್ರತಿಯೊಬ್ಬ ವ್ಯಕ್ತಿಯಲ್ಲಿನ ಡೊಂಗಿತನ, ನಂಬಿಕೆ, ವಿಶ್ವಾಸ, ಪ್ರೀತಿ ಇವುಗಳೂ ಕೂಡಾ ಮತ್ತೆ ಮತ್ತೆ ಪರೀಕ್ಷೆಗೆ ಒಳಗಾಗಿದೆ. ಹೊಸದಾಗಿ ಹಳ್ಳಿಯೊಂದರಿಂದ ಬಂದ ತಲ್ಲಣ, ತಾಕಲಾಟಗಳು ಹೇಗೆ ನಗರದಲ್ಲಿ ಪ್ರತಿಧ್ವನಿತಗೊಳ್ಳುತ್ತವೆಂಬುದನ್ನು ಕಾಣಬಹುದು. ನಗರದ ಬಗೆಗಿನ ಮೌಲ್ಯಗಳ ಬಗ್ಗೆ ತಿಳಿಯುವ ಭಾವನಾತ್ಮಕವಾದ ನಿಲುವುಗಳು ಅನ್ಯರ ಬದುಕಿನ ಬಗೆಗಿನ ಕುತೂಹಲವೂ ಕೂಡಾ ಈ ಕಥೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಅವರ ಕಥೆಗಳಲ್ಲಿ ವ್ಯಕ್ತವಾಗುವ ನಗರ ಜೀವನ, ಮಧ್ಯಮ ವರ್ಗದ ಬದುಕನ್ನು ಕುರಿತು ವಿವೇಚಿಸುವುದು, ಮುಖ್ಯವಾಗಿ ಹೇಗೆ ಆಧುನಿಕತೆಯ ಮೌಲ್ಯಗಳೆಂದು ಭಾವಿಸಲಾಗುವ ಹಣ ಅಧಿಕಾರ, ಅಂತಸ್ತುಗಳು, ತೀವ್ರ ಶೋಧನೆಗೆ ಗುರಿಯಾಗುವುದನ್ನು ಚಿಂತಿಸುವುದಾಗಿದೆ.

ಮೊದಲ ಕಥಾ ಸಂಕಲನದಲ್ಲಿ ಕಥೆಗಳಾದ **ಕುರುಡು ಕಾಂಚಾಣ, ಗೊಮ್ಮಟೇಶ, ನಿವೃತ್ತ, ವಾಮನ, ನಮ್ಮ ನಡುವಿನ ಹುಡುಗ** ಇಲ್ಲೆಲ್ಲಾ ಕಾಣುವುದು ಗ್ರಾಮೀಣ ವ್ಯಕ್ತಿಯೊಬ್ಬನು ನಗರದಲ್ಲಿನ ಪರಿಸ್ಥಿತಿಯ ತಾಕಲಾಟಗಳಿಗೆ ಒಳಗಾಗಿರುವುದನ್ನು ಕಾಣಬಹುದು. 'ಕುರುಡು ಕಾಂಚಾಣ' ಕಥೆಯ ನಾಯಕನು ತೀವ್ರವಾದ ಹಣದ ವ್ಯಾಮೋಹಕ್ಕೆ ಒಳಗಾಗಿ ಹೇಗೆ ಮನುಷ್ಯ ಸಣ್ಣತನವನ್ನು ಪ್ರಕಟಿಸುತ್ತಾನೆಂಬುದಾಗಿದೆ. ತಾನು ಕ್ಷೌರ ಮಾಡಿಸಿಕೊಳ್ಳುವ ಹಜಾಮನ ಜೊತೆಯ

[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಸಂಬಂಧವು "ಇವರಿಬ್ಬರೂ ಕೂಡಾ 0ಯಂತ್ರ. ನನ್ನ ಪಾಲಿಗೆ ಅವನು 0ಯಂತ್ರವಾಗಿದ್ದ. ನಾನು ಅವನ 0ಯಂತ್ರವಾಗಿದೆ."*(1) ಎಂದು ಹೇಳುವುದು. ನಗರವಲ್ಲಿನ 0ಯಾಂತ್ರಿಕತೆ0ಯನ್ನು ಜೀವಂತಿಕೆಯಿಲ್ಲದಿರುವುದನ್ನು ಹೇಳುತ್ತದೆ. ಕಥೆ0ಯ ನಾ0ಯಕ ಮನುಷ್ಯ ಹುಟ್ಟಿರುವುದು ಮತಾಡುವುದಕ್ಕಲ್ಲ ಎಂದು ನಂಬಿದ್ದವನು. ಅವನ ಹೆಂಡತಿ, ಮಗು, ಮನೆ0ಯ ಸಂಸಾರ ನೋಡಿಕೊಳ್ಳಲು ತನಗೆ ಬರುವ ಸಂಬಳವು ಸಾಕಾಗುತ್ತಿರಲಿಲ್ಲ. ಇಂತಹ ಪರಿಸ್ಥಿತಿ0ಯಲ್ಲಿ ಕ್ಷೌರಿಕನು ಬಂದು ತನ್ನ ತಾಯಿ0ಯು ತೀರಿ ಹೋದುದರ ಸಲುವಾಗಿ ಹಣವನ್ನು ಕೇಳುತ್ತಾನೆ. ಕೊಡುವ ಮನಸ್ಸಿದ್ದರೂ ಕೂಡಾ, 0ಯಾವುದೋ ನೆಪ ಒಡ್ಡಿ ಅದರಿಂದ ತಪ್ಪಿಸಿಕೊಳ್ಳುತ್ತಾನೆ. ತನ್ನ ಈ ರೀತಿ0ಯ ಸ್ಥಿತಿ0ಯ ಬಗ್ಗೆ0ಯೇ ಅವನಿಗೆ ಜಿಗುಪ್ಸೆ ಹುಟ್ಟುತ್ತದೆ. "ಅಳುವವರು ನನಗೆ ಶತ್ರುಗಳ ಹಾಗೆ"*(2) ಎಂದು ಅನಿಸುವ, ನಾ0ಯಕನಿಗೆ, ಭಾವುಕತೆ0ಯನ್ನು ಮಿರುತ್ತಾನೆ. ಅದರೆ ಹಣದ ಬಗ್ಗೆ, ಸಂಸ್ಕಾರದ ವ್ಯಾಮೋಹದಿಂದಾಗಿ ಎಂತಹ ಪ್ರಾಮಾಣಿಕನಾಗಿದ್ದ ಸಂದರ್ಭದಲ್ಲೂ ಕೂಡಾ ಸುಳ್ಳು, ಮೋಸ, ಸಣ್ಣತನಕ್ಕೆ ಒಳಗಾಗಬೇಕಾಗುತ್ತದೆಂಬುದನ್ನು ನೋಡಬಹುದು.

ನಗರದ ಬದುಕಿನ ಸೋಗಲಾಡಿತನಗಳು, ಅಸಹ್ಯಗಳು, ಗೋಸುಂಬಿತನಗಳು ಅತ್ಯಂತ ಸ್ಪಷ್ಟವಾಗಿ ಗೋಚರಿಸುವುದು, **ನಿವೃತ್ತರು'** ಕಥೆ0ಯಲ್ಲಿ ಈ ಕಥೆ0ಯಲ್ಲಿ ಉದ್ಯೋಗದಿಂದ ನಿವೃತ್ತರಾದ ನರಂಸಿಗರಾಯ ಮತ್ತು ಪ್ರಹ್ಲಾದರಾ0ಯರು ಒಬ್ಬರಿಗೊಬ್ಬರು ತಾವು ಹೇಳಿಕೊಳ್ಳಬೇಕೆಂದಿರುವ ತಮ್ಮ ಅನುಭವಗಳನ್ನು ಹೇಳಲಾಗದೆ ತೊಳಲಾಟ, ಪರಸ್ಪರ ನಿಂದನೆಗಳು, ಆರೋಪಗಳನ್ನು ಮಾಡಿ ಕೊನೆಗೆ ಅತ್ಯಂತ ಕ್ಷುದ್ರ ಜಂತುಗಳಂತೆ ಕಾಣಿಸುತ್ತಾರೆ. ಇಬರಿಬ್ಬರಲ್ಲಿ0ಯೂ ಕೂಡಾ ಈಗ ಅಧಿಕಾರಪಿಲ್ಲ. ಆದರೆ ಅದನ್ನು ಪ್ರಕಟಿಸುವ ಧೈರ್ಯವನ್ನು ಉಳಿಸಿಕೊಂಡಂತೆ ವರ್ತಿಸುತ್ತಾರೆ. ಒಬ್ಬನಲ್ಲಿ ಅಧಿಕಾರವಿಲ್ಲ. ಇನ್ನೊಬ್ಬನಲ್ಲಿ ವಿಧೇಯತೆ ಇಲ್ಲ.

ಸ್ನೇಹಿತರಾಗಲು ಯತ್ನಿಸುತ್ತಿದ್ದಾರೆ, ಸೋಲುತ್ತಿದ್ದಾರೆ. ಸ್ಥಿತಿಯು ವಿಷಾದದ ಸ್ಥಿತಿಯೆನಿಸುತ್ತದೆ. ಇವರಿಬ್ಬರೂ ಕೂಡಾ 'ಸಪ್ತ ಸಮುದ್ರಗಳ ಆಚೆ-ಈಚೆ ರೂಪ ತಾಳಿ ಮಬ್ಬು ಅಲೆಯುವ ಜೀವಗಳು ಗೆಳೆತನ ಬೆಳೆಸಿಕೊಳ್ಳುವ ಭೂತ ಚಿಗುರು ಕೊಂಬೆಗಳನ್ನು ಕತ್ತರಿಸುತ್ತಿತ್ತು. ಮೊಗ್ಗಗಳನ್ನು ಕಮರಿಸುತ್ತಿತ್ತು.*(3) ನಿವೃತ್ತರು ಕಥೆಯು ಮನುಷ್ಯನ ಮಾಗಿದ ಅನುಭವದಲ್ಲಿಯೇ ಹೇಗೆ ನಿಕೃಷ್ಟಕ್ಕೆ ಒಳಗಾಗುತ್ತಾನೆಂಬುದನ್ನು ತಮ್ಮ ತಮ್ಮ ನಡವಳಿಯ ಮೇಲೆ, ವ್ಯಕ್ತಿತ್ವಗಳ ಮೇಲೆ ಇಟ್ಟುಕೊಳ್ಳುವ ಅಪೇಕ್ಷೆಗಳು, ನಂಬಿಕೆಗಳು ಮತ್ತು ಅವು ನಿಜವಾಗಿ ವಾಸ್ತವದಲ್ಲಿ ವ್ಯಕ್ತಗೊಂಡಾಗ ಉಂಟಾಗುವ ಬಿರುಕನ್ನು ಇವರಲ್ಲಿ ಕಾಣಬಹುದು. "ಎಲ್ಲಾ ಸಂಬಂಧಗಳಿಗೂ ಆರೋಗ್ಯನಾಗಿ ಬೆಳೆದು ಎಂದೋ ರಕ್ಕಸನಿಗೆ ಪ್ರಾಣವನ್ನು ಮಾರಿಕೊಂಡಿದ್ದ. ಬರೀ ರಕ್ತ ಮಾಂಸವಾಗಿ ಅಡ್ಡಾಡುತ್ತಿದ್ದ" ಎಂದು ಕೊನೆಯಲ್ಲಿ ಹೇಳುವ ಮಾತು ನರಸಿಂಗರಾಯನಿಗಷ್ಟೇ ಅಲ್ಲದೆ ಇಂತಹ ಸೋಗಲಾಡಿತನವುಳ್ಳವರೆಲ್ಲರಿಗೂ ಅನ್ವಯಿಸುತ್ತದೆ. ಕಥೆಯ ಕೊನೆಯು ಕೂಡಾ ಆಶಾದಾಯಕವಾಗಿ ಮುಗಿಯಬೇಕೆಂಬ ಕನಸ್ಸನ್ನು ಹೊತ್ತು ಮುಕ್ತಾಯಗೊಳ್ಳುತ್ತದೆ. ನಾನಲ್ಲ ಕಥೆಯಲ್ಲಿನ ರಸ್ತೆಯಲ್ಲಿ ಸತ್ತು ಬಿದ್ದಿರುವ ಹೆಣದ ಬಗ್ಗೆ ಯಾರೂ ಕೂಡ ಕಾಣದ ಸ್ಥಿತಿಯಿಂದ ನಾಯಕ ದಿಗ್ಭ್ರಮೆಗೊಳ್ಳುತ್ತಾನೆ. ಅದು ತನ್ನೊಬ್ಬನಿಗೆ ಕಾಣಿಸುವಂತೆ ಭಾಸವಾಗುತ್ತದೆ. ಕೊನೆಗೆ ಅದು ಅಲ್ಲಿಂದ ಕಾರಣದಿರಲಾಗಿ ಅದಕ್ಕೂ ತನಗೂ ಸಂಬಂಧವಿದೆ ಎಂದು, ಅದರ ಬಗ್ಗೆ ತನಿಖೆ ಮಾಡಲು ಶುರು ಮಾಡುತ್ತಾನೆ. ಕೊನೆಗೆ ಅದಕ್ಕೂ ತನ್ನ ವ್ಯಕ್ತಿತ್ವದ ಬಗ್ಗೆ ತಳುಕು ಹಾಕಿಕೊಂಡ ಅದನ್ನು ಮರೆಯಲು ಯತ್ನಿಸುತ್ತಾನೆ.

ಲಂಕೇಶರ ಮತ್ತೊಂದು ಕತೆಯಾದ **ಮಂಜು ಕವಿದ ಸಂಜೆ** ಮತ್ತು ಇತರೆ ಕಥೆಗಳು ಎಂಬ ಕಥಾಸಂಕಲನದಲ್ಲಿ ಬರುವ ಡೀಸೋಜಾನ "ಊವಿನ' ವೃತ್ತಿ ಎಂಬ ಕಥೆಯಲ್ಲಿ ಬರುವ ಪಾತ್ರವಾದ ಡಿಸೋಜಾನು ನಗರದ ಯಾಂತ್ರಿಕ ಬದುಕಿಗೆ ತನ್ನ

[illegible]

ಜೀವನವನ್ನು ಅಳವಡಿಸಿಕೊಳ್ಳಲು ಹೋಗಿ ತಾನು ಪಡುವ ೦ಯಾತನೆ, ನೋವು ದುಃಖಗಳನ್ನು ಪಿ. ಲಂಕೇಶರು ನಗರದಲ್ಲಿ ಬಳಸುವ ಭಾಷೆ, ವೇಷಗಳಿಗೆ ಮರುಳಾಗಿರುವ ಡಿಸೊಜಾ ಎಂಬ ಪಾತ್ರದ ಮುಖಾಂತರ ಸಾಮಾನ್ಯ ವ್ಯಕ್ತಿ೦ಯು ಇಂಗ್ಲೀಷ್ ವ್ಯಾಮೋಹ ಮತ್ತು ನಗರದ ಆಡಂಬರವನ್ನು ಈ ಡಿಸೋಜಾನ ಪಾತ್ರದ ಮುಖಾಂತರ ಚಿತ್ರಿಸಿದ್ದಾರೆ.

ಡಿಸೋಜಾ ಆಗಾಗ ಇಂಗ್ಲೀಷ್ ಬಳಸಿದರು. ಅಪ್ಪಟ ಕನ್ನಡಿಗ ನಿರುದ್ಯೋಗಿ೦ಯಾಗಿದ್ದ. ಆತ ಚುನಾವಣೆಗಳಲ್ಲಿ ಬಿಜೆಪಿ೦ಯ ಕಾ೦ರ್ಯಕರ್ತನಾಗಿ ಕೆಲಸ ಮಾಡಿದ. ಹೀಗಾಗಿ ಅವನಿಗೆ ನೂರಾರು ಜನ ಅರ್‌ಎಸ್‌ಎಸ್ ವ್ಯಕ್ತಿಗಳ ಪರಿಚ೦ಯವಿತ್ತು. ಆರ್‌ಎಸ್‌ಎಸ್ ಬಗ್ಗೆ ೦ಯಾರೆ ಏನೇ ಹೇಳಿದರೂ ಡಿಸೋಜಾನ ಪಾಲಿಗೆ ಅವರು ಒಂದು ರೀತಿ೦ಯ ಮುಗ್ಧ ದೇಶಪ್ರೇಮಿ ಆಗಿದ್ದರು. ಡಿಸೋಜಾ ಬೆಂಬಲಿಸಿದ್ದ ವ್ಯಕ್ತಿ ಲೊಕಸಭಾ ಚುನಾವಣೆ೦ಯಲ್ಲಿ ಗೆದ್ದಿದ್ದ. ಆದರೆ ಆ ಅಭ್ಯರ್ಥಿ೦ಯ ಗೆಲುವಾಗಲಿ, ಆತನ ವಿಜ೦ಯೋತ್ಸವವಾಗಲೀ ಡಿಸೊಜಾನ ಆರ್ಥಿಕ ಪರಿಸ್ಥಿತಿ೦ಯನ್ನು ಬದಲಾಯಿಸಿರಲಿಲ್ಲ. ಅನಗತ್ಯವಾಗಿ ರಾಜಕಾರಣಿಗಳೊಂದಿಗೆ ಇದ್ದು ಅರ್ಥಹೀನವಾಗಿ ಮಾತನಾಡುವುದು, ವರ್ತಿಸುವುದು ನಾಚಿಕೆಗೇಡು ಎಂದು ಅವನಿಗೆ ಅನ್ನಿಸಿತು. ಆದರೆ ಕಿತ್ತು ತಿನ್ನುವ ಬಡತನ ಅದನ್ನು ಹೇಗೋ ಮುಚ್ಚಿಕೊಳ್ಳಲು ಮುಗುಳ್ನಗೆ ತನ್ನ ಮಾತು ಕತೆ ೦ಯಾವುದಾದರಲ್ಲೂ ಡಿಸೋಜಾ ತನ್ನ ಅಸಹಾ೦ಯಕತೆ೦ಯನ್ನು ತೋರಿಸುತ್ತಿರಲಿಲ್ಲ. ಆದರೆ ಇವನ ಪರಿಸ್ಥಿತಿ ಆರೆಎಸ್‌ಎಸ್ ಮುಖ್ಯ ಸಂಚಾಲಕ ಶೇಷಗಿರಿ ಅವರಿಗೆ ತಿಳಿದಿತ್ತು. ಇದರಿಂದ ಶೇಷಗಿರಿ ಅವರು ಡಿಸೋಜಾನಿಗೆ ಆರ್‌ಎಸ್‌ಎಸ್ ತಂಡದ ಹಾಡು, ವ್ಯಾ೦ಯಾಮ ಕಲಿಸುವುದರಲ್ಲಿ ನೆರವಾಗುವುದಾದರೆ ನಿನಗೆ ಐನೂರು ರೂಪಾಯಿ ಸಂಬಳ ಗೊತ್ತು ಮಾಡುತ್ತೇನೆ. ನೀನು ವ೦ಯಸ್ಸಿಟ್ಟು ಆಗುವುದಿಲ್ಲ ಅನ್ನಬೇಡ ಎಂದು ಕಂಬನಿ ತುಂಬಿದ ಕಣ್ಣುಗಳಿಂದ ನೋಡುತ್ತಾ ಕೇಳಿದರು. ಈ ಘಟನೆ ಆದ ನಂತರ ಒಂದು ದಿನ ಡಿಸೋಜಾನ

ರೂಮಿನೆದುರು ಮುದಿ ವ್ಯಕ್ತಿ೦ಯೊಬ್ಬ ಎರಡು ಬುಟ್ಟಿ೦ಯಲ್ಲಿ ಹೂ ಓಡಿದು ಕೂಗುತ್ತಾ ಹೋಗುತ್ತಿದ್ದ. ಗುಲಾಭಿ ಸ್ಯಾವಂತ್ಗೆ, ಚಂಪಿಗೆ ಹೂವು ಎಂದು ಕೂಗುತಾ ಹೋಗುತ್ತಿದ್ದ. ಆ ವ್ಯಕ್ತಿ೦ಯನ್ನು ಮಾತಾಡಿಸಬೇಕೆಂದು ಆಸೆ೦ಯಾಗಿತ್ತು. ಡಿಸೋಜ ರೂಮಿನಿಂದ ಹೊರಗೆ ಬರುವಷ್ಟರಲ್ಲಿ ಆ ಮುದುಕನಿದ್ದಲ್ಲಿಗೆ ನಾಲ್ಕಾರು ಜನ ಹೆಂಗಸರು, ಹುಡುಗಿ೦ಯರು ಮುತ್ತಿಕೊಂಡು ಹೂವು ಕೊಳ್ಳುತ್ತಿದ್ದರು. ಆದರೆ ಆ ಮುದುಕನಿಗೆ ಕನ್ನಡವು ಮಾತನಾಡಲು ಬರುತ್ತಿರಲಿಲ್ಲ. ಡಿಸೋಜಾ ಅಣ್ಣ ನನಗೆ ಒಂದು ಡಜನ್ ಹೂವು ಕೊಡು ಎಂದು ಎರಡು ರೂಪಾಯಿಯನ್ನು ಕೊಟ್ಟು ಗುಲಾಬಿ೦ಯನ್ನು ತೋರಿಸಿದ. ಇಲ್ಲಿ ಡಿಸೋಜ ಮುದುಕನು ಆ ಇಳಿ ವ೦ಯಸ್ಸಿನಲ್ಲಿ ಮಾಡುತ್ತಿದ್ದ ವ್ಯಾಪಾರವನ್ನು ಕಂಡು ಅವನು ಆ ವ್ಯಾಪಾರವನ್ನು ಪ್ರಾರಂಭಿಸಲು ಅವನ ಬಳಿ ಅಣ್ಣ ನಿನಗೆ ದಿನಕ್ಕೆ ಎಷ್ಟು ಹಣ ಉಳಿತದೆ ಎಂದು ಕೇಳಿದ. ಮುದುಕನು ಡಿಸೊಜಾನಿಗೆ ನನ್ನ ಮಗ ಅರವತ್ತು ರೂಪಾಯಿ ತರ್ತಾನೆ. ನಾನು ನಲವತ್ತು ರೂಪಾಯಿ ಮಾಡುತ್ತೇನೆ ಎಂದು ಹೇಳಿ ಕೂಗುತ್ತಾ ಹೊರಟು ಹೋದ. ಡಿಸೋಜಾ ಮರುದಿನ ಬೆಳಿಗ್ಗೆ ಇಸ್ತ್ರೀ ಮಾದಿದ ಶರ್ಟು, ಶರಾಯಿ ಹಾಕಿಕೊಂಡು ಚೆನ್ನಾಗಿ ಕ್ರಾಪ್ ಬಾಚಿಕೊಂಡು ಸೈಕಲ್ ಮೇಲೆ ಎರಡು ಮಿಲಿಟರಿ ಬ್ಯಾಗ್‌ಗಳಲ್ಲಿ ಹೂವುಗಳನ್ನು ಇಟ್ಟುಕೊಂಡು ಜಾಸ್ಮಿನ್, ರೋಸ್, ಕ್ರಿಸಾಂತಿಮಮ್, ಎಕ್ಸ್‌ಲೆಂಟ್ ರೋಸಸ್, ಮಲ್ಲಿಗೆ ಕಾಕಡ ಎಂದು ಕೂಗುತ್ತಾ ಸೈಕಲ್ ನೂಕುತ್ತಿದ್ದ. ಇವನನ್ನು ಶೇಷಗಿರಿ೦ಯವರು ನೋಡಿದರು. ಆಚ್ಚರಿ೦ಯಾದರು. ಮಾತನಾಡಿಸಲು ಹೋಗಲಿಲ್ಲ. ಇವನು ಇಂಗ್ಲಿಷ್‌ನಲ್ಲಿ ಕೂಗುವ ರೀತಿ೦ಯನ್ನು ನೋಡಿ ಮತ್ತು ಇವನ ಡ್ರೆಸ್ಸನ್ನು ನೋಡಿ ಹೆಂಗಸರು ೦ಯಾರು ಹೂವನ್ನು ತೆಗೆದುಕೊಳ್ಳಲು ಬಾರದೆ ಕುತೂಹಲದಿಂದ ನೋಡುತ್ತಿದ್ದರೂ ಇಲ್ಲಿ ಇವನ ಇಂಗ್ಲೀಷ್ ಭಾಷೆಗೂ ಮುದುಕನ ತಪ್ಪು ಮಾತನಾಡುತ್ತಿದ್ದ ಕನ್ನಡಕಕ್ಕೂ ಬಹಳ ರೀತಿ೦ಯ ವ್ಯಂಗ್ಯ ಎದ್ದು ಕಾಣುತ್ತಿತ್ತು. ನಗರ ಜೀವನದಲ್ಲಿ ವೃತ್ತಿ ಎಂಬುದು ಅವರು ಆಡುವ ಭಾಷೆ, ಧರಿಸುವ ಬಟ್ಟೆಗಳು ಎಷ್ಟು ಮುಖ್ಯವೆಂಬುದು ಈ ಕಥೆ೦ಯಲ್ಲಿ ಲಂಕೇಶರವರು ಬಹಳ ಭಿನ್ನವಾಗಿ ಗ್ರಹಿಸಿದ್ದಾರೆ.

ಇಲ್ಲಿ ಇವನ ಇಂಗ್ಲೀಷ್ ವ್ಯಾಮೋಹ ಇವನ ಹೊಸ ಕೆಲಸದ ಮೇಲೆ ಬೀರುವ ಪರಿಣಾಮಗಳು ಬಹಳ ಭಿನ್ನವಾಗಿ ಕಂಡುಬರುತ್ತದೆ. ತುಂಬಾ ನಿಧಾನಸ್ಥ ೦ುುವಕನಾದ ಡಿಸೋಜಾಗೆ ಅಷ್ಟು ಬೇಗ ಕಾರಣ ಹೊಳೆ೦ುುವುದು ಕಷ್ಟವಿತ್ತು. ನಾಲ್ಕಾರು ಮೈಲಿ ನಡೆದು ಬೇಸರಗೊಂಡು ಡಿಸೋಜಾ ನಡು ವ೦ುಸ್ಸಿನ ಗೃಹಿಣಿ೦ುೊಬ್ಬಳನ್ನು ಮೇಡಂ ರೋಸಸ್ ತುಂಬಾ ಮಾರ್ವಲೆಸ್ ಆಗಿದೆ ಎಂದ. ಇವನ ಇಂಗ್ಲೀಷ್ ಭಾಷೆ೦ುನ್ನು ಕಂಡ ಆಕೆ ಬೇಡ ಕ್ಷಮಿಸಿ ಎಂದು ಮನೆ ಪ್ರವೇಶಿಸಲು ತಿರುಗಿದಳೂ. ಆಗ ಮೇಡಂ ನಿಮ್ಮ ಮಕ್ಕಳಿಗೆ ತುಂಬಾ ಇಷ್ಟವಾಗುತ್ತದೆ ಎಂದಾಗ ಆ ಗೃಹಿಣಿ೦ು ಮನಸ್ಸು ಕರಗಿದಂತೆ ಕಾಣೀತ್ತು. ಆಗ ಆವಳ ಮಗಳನ್ನು ಕರೆದಳು ಜೊತೆ೦ುಲ್ಲಿ ಅವಳ ಮಗಳ ಗಂಡನು ಬಂದನು. ಬೇಬಿ ಮತು ಅವಳ ಪತ್ತಿ ಹೂಗಳನ್ನು ನೋಡುವುದಕ್ಕೆ ಬದಲು ಡಿಸೊಜನಾ ಡ್ರೆಸ್ ಸ್ಟೈಲ್ ಇಂಗ್ಲೀಷ್ ನುಡಿಗಟ್ಟುಗಳನ್ನು ಗಮನಿಸಿದರು. ಬೇಬಿ ಸ್ವಲ್ಪ ಹೆಚ್ಚು ಕುತೂಹಲದಿಂದ ನೋಡುತ್ತಿದ್ದ ಅವಳನ್ನು ಗಮನಿಸಿದ ಅವಳ ಗಂಡಾ "ನೋ ಗುಡ್ ಲೈಟ್ ಹಿಮ್ ಗೇಟ್ ಲೋಸ್ಟ್" ಎಂದು ಬೇಬಿ೦ು ಕೈಹಿಡಿದುಕೊಂಡು ಒಳಗೆ ಕರೆದುಕೊಂಡು ಹೋದ. ಅವಳ ತಾಯಿ೦ುು ಕೂಡಾ ಇಂಗ್ಲೀಷ್ ಮಾತಿನಿಂದ ಕಳೆದುಕೊಂಡ ನಂತರ ಸೈಕಲ್ ಗಿರಾಕಿಗಳನ್ನು ತನ್ನ ಇಂಗ್ಲೀಷ್ ಮಾತಿನಿಂದ ಕಳೆದುಕೊಂಡ. ನಂತರ ಸೈಕಲ್ ನೂಕಿ ಕೊಂಡು ಮುಂದೆ ಹೋದ. ಹತ್ತಾರು ಜನ ಹೆಂಗಸರು, ಗಂಡಸರನ್ನು ಬೇಡಿಕೊಂಡು ಮೇಡಂ, ಸರ್, ಮಿಸ್ಟರ್ ಎಲ್ಲಾ ಬಳಸಿದರೂ ೦ುಾರೂ ವ್ಯಾಪಾರ ಮಾಡುವಂತೆ ಕಾಣಲಿಲ್ಲ. ಇವನು ವ್ಯಾಪಾರಕ್ಕೆಂದು ನೂರಾರು ರೂಪಾಯಿ ಖರ್ಚಾಗಿತ್ತು. ಈ ನಿರುದ್ಯೋಗ, ಬಡತನ, ಅಸಹಾ೦ುಕತೆ, ರಾಜಕೀ೦ು ಭಂಡತನ ಮುಂತಾದವುಗಳಿಂದ ತನೆಗೆ ಮುಕ್ತಿ೦ುೇ ಇಲ್ಲವೆಂದು ಚಡಪಡಿಸಿದ. ಇದನ್ನೆಲ್ಲಾ ನೋಡಿದ ಶೇಷಗಿರಿರಾ೦ುರು ಡಿಸೋಜಾನಿಗೆ ನೀನು ನಿಜಕ್ಕೂ ಹೂ ಮಾರುವವನ್ನು ಆಗಬೇಕು ಅಂತ ಇದ್ದೀ೦ುಾ ಎಂದು

ಕೇಳಿದರು. ಡಿಸೋಜಾ ಹೌದೆಂದು ತಲೆ ಆಡಿಸಿದ. ಆಗ ಶೇಷಗಿರಿರಾಯರು ನಾನು ಹೇಳಿದಂತೆ ಕೇಳು ವ್ಯಾಪಾರವಾಗುತ್ತೆ ಎಂದರು. ಡಿಸೋಜಾನಿಗೆ ಪಂಚೆ, ಟವಲ್, ಅಂಗಿ ಹಾಕಿಕೋ ಎಂದು ಹೇಳಿದರು. ನಂತರ ಇವನಿಗೆ ತನ್ನ ಭಾಷೆಯಲ್ಲಿ ಇಂಗ್ಲೀಷ್ ಬಳಸದಂತೆ ಹೇಳಿ ಹಳ್ಳಿಯ ಮುಗ್ಧನಂತೆ ಹಳ್ಳಿಯ ಭಾಷೆಯಲ್ಲಿ ಮಲ್ಲೇಹೂವು, ಮಲ್ಲಿಗೆ ಹೂವು, ಕಾಕಡಾ, ಮೊಲ್ಲೆ ಎಂದು ಗುಲಾಬೀ, ಗುಲ್ ಗುಲ್ ಗುಲಾಬೀ ಅಂತ ಕೂಗು ತಳವಾರ ತಿಮ್ಮಣ್ಣನ ತೋಟದ ಕೆಂಡ್ಸಂಪಿಗೆ ತಿಮ್ಮಣ್ಣನ ಮೊಮ್ಮಗನಂತೆ ಕೂಗು ಎಂದು ಎಂದರು. ಶೇಷಗಿರಿರಾಯರು. "ವರ್ಣಕ್ಕೆ ತಕ್ಕಂತೆ ಭಾಷೆ, ಆಕಾರ, ನಡತೆ ಇರಬೇಕು" ನಿನ್ನ ಇಂಗ್ಲೀಷೆಲ್ಲಾ ತಲೆ ಹರಟೆ. ನಾಳೆ ಎಷ್ಟು ವ್ಯಾಪಾರ ಆಯ್ತು ಅಂತ ನನಗೆ ಬಂದು ಹೇಳು ನೂರು ರೂಪಾಯಿಗಿಂತ ಹೆಚ್ಚು ಲಾಭ ಬಂದಿದ್ದರೆ ಒಂದು ಹತ್ತು ಗ್ರಾಂ ನಶ್ಯ ತೆಗೆದುಕೊಂಡು ಬಾ ಎಂದರು. ಶೇಷಗಿರಿರಾಯರು ಬಡಾ ಬೋರೇಗೌಡನಂತೆ ತಪ್ಪು ತಪ್ಪಾಗಿ ಕೂಗಬೇಕು. ಜಾತಿ ಪದ್ಧತಿಗೆ ತಕ್ಕ ಹಾಗಿದ್ದರೆ ನಮ್ಮ ಜನಕ್ಕೆ ವಿಶ್ವಾಸ ಬರುವುದು ಎಂದು ಹೇಳಿದರು. ಈ ಕಥೆಯಲ್ಲಿ ಡಿಸೋಜಾನ ಮುಖಾಂತರ ಜಾತಿಯಿಂದ ವೃತ್ತಿಯನ್ನು ಅಳೆಯುವ ಕೆಲಸವನ್ನು ಮಾಡಿದ್ದಾರೆ. ಒಬ್ಬ ಇಂಗ್ಲೀಷ್‌ನ ವ್ಯಾಮೋಹಿ ತನ್ನ ಭಾಷೆಗೂ, ತನ್ನ ವೃತ್ತಿಗೂ ಸಂಬಂಧ ಇಲ್ಲದಿದ್ದಾಗ ಅವನು ಅನುಭವಿಸುವ ಕಷ್ಟ, ಅವಮಾನ, ಯಾತನೆಯನ್ನು ಸೂಕ್ಷ್ಮವಾಗಿ ಪಿ. ಲಂಕೇಶ್‌ರವರು ಡಿಸೋಜನಾ ವ್ಯಕ್ತಿತ್ವವನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ.

ಲಂಕೇಶರ **'ವಾಸನೆ'** ಕಥೆಯು ವಿಶಿಷ್ಟ ರಾಜಕೀಯವನ್ನು ಕುರಿತು ಮಾಡಿರುವ ವ್ಯಂಗ್ಯ, ಗೇಲಿ, ತಮಾಷೆ, ಅದರ ಆಳದಲ್ಲಿನ ಕೆಟ್ಟ ಧೋರಣೆಗಳನ್ನು ಕುರಿತು ಹೇಳುವಂತದ್ದಾಗಿದೆ. ಬಸವರಾಜಯ್ಯನು ಹಳ್ಳಿಯಿಂದ ಬಂದವನು. ರಾಜಕೀಯದಲ್ಲಿ ಒಳ್ಳೆಯ ಹೆಸರನ್ನು ಮಾಡಿದಂತೆಲ್ಲಾ ಅವನ ದೇಹದಿಂದ ಒಂದು

ರೀತಿಯ ವಿಚಿತ್ರ ವಾಸನೆಯು ಬರಲಾರಂಭಿಸುತ್ತದೆ. ತನಗೆ ಈ ರೀತಿಯ ವಾಸನೆಯ ಮೂಲದ ಬಗ್ಗೆ ತುಂಬಾ ಆಂತಕಕ್ಕೀಡಾಗುತ್ತಾನೆ. ಗುಪ್ತವಾಗಿಯೇ ತನ್ನ ಜಾತಿಯ ಡಾಕ್ಟರನ್ನು ಕರೆಸಿ ಔಷಧಿ ಪಡೆಯುತ್ತಾನೆ. ಆದರೆ ಬಸವರಾಜಯ್ಯ ದಿನೇದಿನೇ ಶ್ರೀಮಂತಿಕೆ, ಧೋರಣೆಗಳಿಂದಾಗಿ, ಜನಪ್ರಿಯತೆ ಹೆಚ್ಚಾದಂತೆ ಅವನ ದೇಹದಿಂದ ಬರುವ ದುರ್ವಾಸನೆಯು ಹೆಚ್ಚಾಗತೊಡಗುತ್ತದೆ. ಜನರ ಹಿತಕ್ಕೆಂದು ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡುವ, ನೈರ್ಮಲ್ಯಕ್ಕಾಗಿ, ಯಾರ ವಿರುದ್ಧ ಅಲ್ಲದ ಸಮಾಜವು ನೈರ್ಮಲ್ಯ ಪಡೆಯದಿದ್ದರೆ, ಜಲಸಮಾಧಿ ಹೊಂದುವ ನಿರ್ಧಾರ ತೆಗೆದುಕೊಳ್ಳುತ್ತಾರೆ. ಕೊನೆಗೆ ಕೆರೆಗೆ ಬಿದ್ದು ಸತ್ತದ್ದು ನಿಜವಾಗುತ್ತದೆ.

ಈ ಕಥೆಯು ರಾಜಕೀಯದಲ್ಲಿನ ಕೊಳಕು ಸ್ಥಿತಿಯನ್ನು ಅದರ ದುರ್ಗಂಧವು ವ್ಯಕ್ತಿಯ ಮೂಲದಲ್ಲಿಯೇ ಇದೆಯೆಂದು ಅನಿಸುತ್ತದೆ.

ಸೆಪ್ಟೆಂಬರ್‌ನಲ್ಲಿ ಪ್ರಥಮ ರಾತ್ರಿ ಕಥೆಯಲ್ಲೂ ಕೂಡಾ ನಗರದಲ್ಲಿನ ವಾತಾವರಣವು ಆಘಾತವನ್ನುಂಟುಮಾಡುತ್ತದೆ. ನಾಯಕನು ಅಪರಿಚಿತವಾಗಿ ಬಂದ ಶಾಂತಳು ಪರಿಚಿತತೆ, ಅವಳ ಸ್ನೇಹ, ಸಲಿಗೆಯಿಂದ ದೊರೆತ ಪ್ರೀತಿ, ವಿಶ್ವಾಸಗಳು ಎಷ್ಟು ಬೇಗ ಹುಸಿ ಅಥವಾ ಹೆದರಿಕೆಯನ್ನು ಹುಟ್ಟಿಸುವಂತದ್ದು ನಗರದಲ್ಲಿದ್ದರೂ ಕೂಡಾ ಹಳ್ಳಿಯ ಬಗೆಗೆ ಧ್ಯಾನಿಸುವನು. ಶಾಂತಾಳ ಮನೆಗೆ ಹೋದ ನಾಯಕನು ಅವಳನ್ನು ಮೊದಲ ಬಾರಿಯಲ್ಲಿಯೇ ಇಷ್ಟು ಸಲಿಗೆಯಿಂದ ಸಾಧ್ಯವಾದುದರ ಬಗ್ಗೆ ಮೊದಲು ಖುಷಿಗೊಳ್ಳುತ್ತಾನೆ. ಆದರೆ ನಂತರ ಅಲ್ಲಿ ಬರುವ ಪೋಲೀಸರು, ಶಾಂತಾಳ ಬಗೆಗೆ ಆಡುವ ಮಾತುಗಳಿಂದ ತಾನೊಂದು ದೊಡ್ಡ ಸುಳಿಯಲ್ಲಿ ಸಿಕ್ಕುವನೆಂಬ ಭ್ರಾಂತಿ ಉಂಟಾಗುತ್ತದೆ. ಪೋಲೀಸರು ಇವನನ್ನು ಹೊಡೆದು ಮನೆಯಿಂದ ಹೊರಗೆ ಹಾಕಿದಾಗ ಶಾಂತಾಳ ಬಗ್ಗೆ ದ್ವೇಷ, ಕೋಪ ಉಂಟಾಗುತ್ತದೆ. ಬೆಂಗಳೂರೆಂಬ ನಗರದಲ್ಲಿ ಹೆಗೆ ಮುಗ್ಧನೊಬ್ಬ ತಿಳಿಯದೇ ಅನೇಕ ರೀತಿಯ

ತೊಂದರೆಗಳಿಗೆ ಸಿಕ್ಕಿ ಬೆಂಗಳೂರೆಂಬ ದಿಗಿಲು, ನಿರ್ಲಿಪ್ತತೆಯಲ್ಲಿನ ಕರ್ಯದಲ್ಲಿ ಕರಗಿ ಹೋದನೆಂಬ ಭಯ ಉಂಟಾಗುತ್ತದೆ.

ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆಯಲ್ಲಿನ ಉಮಾಪತಿಯು ಹೇಗೆ ನಿರಂತರ ಪಟ್ಟಣಕ್ಕೆ ತಿರುಗಾಟದಿಂದ ತನ್ನ ಮುಗ್ಧತೆಯನ್ನು ಕಳೆದುಕೊಂಡ ಸ್ಥಿತಿಯನ್ನು ಕಾಣಬಹುದು. ನಗರದ ಬಗೆಗಿರುವ ಅನುಮಾನ ಮತ್ತು ದಿಗ್ಭ್ರಮೆಗಳು ಇಲ್ಲ. ಉಮಾಪತಿಯಲ್ಲಿ ಕಂಡು ಬಂದಿದೆ. ತಾನೂ ಇಡೀ ಶಿವಮೊಗ್ಗ ಹೈಸ್ಕೂಲ್‌ಗೆ ಫಸ್ಟ್ ಕ್ಲಾಸ್ ಬಂದಿದ್ದ ಕೀರ್ತಿಯು ಇಡೀ ನಗರಕ್ಕೆ ಹಬ್ಬಿದೆ. ಇದರಿಂದ ಊರಿನ ಸಿಂಗೇಗೌಡನು, ತನಗೆ ಗೊತ್ತಿರುವ ಪ್ರಭಾವಿ ರಾಜಕಾರಣಿಯಾದ ಶೇಖರಪ್ಪನಿಂದ ಹೇಳಿಸಿ ಸ್ಕಾಲರ್‌ಶಿಪ್ ಕೊಡಿಸುವುದಾಗಿ ತಾಯಿ, ನಿಂಗಿ ಎಲ್ಲರನ್ನೂ ಕರೆದುಕೊಂಡು ಹೋಗುತ್ತಾನೆ. ಮುಖ್ಯವಾಗಿ ಉಮಾಪತಿಯಲ್ಲಿನ ದಿಗ್ಭ್ರಮೆ, ಅವಮಾನಕ್ಕೆ ಕಾರಣವಾಗುವುದು. ತನ್ನ ಮುಗ್ಧತೆಯನ್ನು ಕಳೆದುಕೊಂಡಾಗ, ತನ್ನ ತಾಯಿಯ ಬಗ್ಗೆ, ನಿಂಗಿಯ ಬಗ್ಗೆಯೂ ತಾತ್ಸಾರ ಉಂಟಾಗುತ್ತದೆ. ಏಕೆಂದರೆ ನಗರದಲ್ಲಿನ ಅವನ ಆತಂಕಗಳು ಮತ್ತಷ್ಟು ಹೆಚ್ಚಾಗಲೂ ಕಾರಣ ಭಾಷೆಯದು. ನೀನೆಷ್ಟು ಜಾಣ ಅನ್ನೋದನ್ನು ಶೇಖರಪ್ಪನವರ ಮುಖಕ್ಕೆ ಹೊಡೆದಂಗೆ ತೋರಿಸಬೇಕು. ಅವರೇನಾದ್ರೂ ಕೇಳಿದ್ರೆ ಇಂಗ್ಲೀಷ್‌ನಾಗೆ ಉತ್ತರ ಕೊಡಬೇಕು.*(5) 1) ಎನ್ನುವರ ಸಿಂಗೇಗೌಡನ ಮಾತಿನಿಂದ ಉಮಾಪತಿಯಲ್ಲಿ ಮತ್ತಷ್ಟು ಆತಂಕಗಳು ಹೆಚ್ಚಾಗುತ್ತವೆ. ಹೇಗೆ ಒಂದು ಹಳ್ಳಿಯ ಹುಡುಗನೊಬ್ಬ ನಗರಕ್ಕೆ ಬಂದಾಗ ಅವನಲ್ಲಿರುವ ಅನೇಕ ರೀತಿಯ ತಳಮಳಗಳು, ಗೊಂದಲಗಳು, ದ್ವಂದ್ವಗಳು ಹೆಚ್ಚಾಗುತ್ತಾ ಹೋಗುವುದನ್ನು ಕಾಣಬಹುದು. ಮುಖ್ಯವಾಗಿ ಭಾಷೆಯ ಬಗೆಗಿನ ಆತಂಕ. ಲಂಕೇಶರ ಬದುಕನ್ನು ಆತಂಕದಿಂದ ಮತ್ತು ತೀವ್ರವಾಗಿ ಬದುಕುವ ಕ್ರಿಯೆಯಲ್ಲಿನ ಸಾಕ್ಷಿ, ಪ್ರಜ್ಞೆಯಿಂದ ನೋಡುವ ದೃಷ್ಟಿ ಅವರಲ್ಲಿದೆ. ಸಾಮಾಜಿಕ ಹೊಣೆಗಾರಿಕೆ, ಜವಾಬ್ದಾರಿ ಲೇಖಕನಿಗೆ ಅನಿವಾರ್ಯ ಎಂದು ಕೊಂಡವರು. ಕುವೆಂಪು, ಕಾರಂತರ

ಪ್ರಯೋಗ ಶೀಲತೆಯನ್ನು ಒಪ್ಪಿಕೊಂಡವರು. ಪಾಶ್ಚಾತ್ಯರ ಒಂದು ಸಂಸ್ಕೃತಿ ಪ್ರಭಾವಿತರಾದವರು. ಆದರೆ ಇವರ ಮೇಲಿನ ಗಾಂಧಿವಾದವ್ಪೊ, ಸಮಾಜವಾದವ್ಪೋ, ಅವರ ಕಥೆಯಲ್ಲಿನ ಗ್ರಹಿಕೆಗಳನ್ನು ಹೆಚ್ಚಿಸಬಹುದು. ಆದರೆ ಅವರು ಸೂಚಿಸುವ ಸಾಮಾಜಿಕ ಸಿದ್ಧಾಂತಗಳ ಪರಿಹಾರಗಳ ಸರಿ ತಪ್ಪುಗಳನ್ನು ಈ ರೀತಿಯ ಯಾವುದಕ್ಕೂ ಅಧೀನವಾಗದೆ ಅವರ ಕಥೆಗಳನ್ನು ಗ್ರಹಿಸಬಹುದು. ಈ ಹಿನ್ನೆಲೆಯಲ್ಲಿ ಅತ್ಯಂತ ಮುಖ್ಯ ಮತ್ತು ಕನ್ನಡ ಸಾಹಿತ್ಯದಲ್ಲೇ ಶ್ರೇಷ್ಟ ಕಥೆಯಾದ 'ರೊಟ್ಟಿ' ಕತೆಯನ್ನು ಚರ್ಚಿಸಬಹುದು.

ರೊಟ್ಟಿ ಕಥೆಯು ಆಕೆ ಮತ್ತು ಆತನ ಸರಳ ಸುಂದರ ವರದಿಯಂತೆ ಕಂಡುಬಂದರೂ ಅದು ಧ್ವನಿಸುವುದು ಭಿನ್ನ ನೆಲೆಗಳನ್ನು ಆಕೆಯು ಮಧ್ಯಾಹ್ನದ ಉರಿಬಿಸಿಲಿನಲ್ಲಿ ಹಳ್ಳಿಯಿಂದ, ನಗರಕ್ಕೆ ಬಂದು ತನ್ನ ಮಗಳ ಬಾಣಂತನವನ್ನು ಮುಗಿಸಿ ಮತ್ತೆ ತನ್ನ ಊರಿಗೆ ಹೊರಡಲು ಟ್ರಂಕು, ಬ್ಯಾಗು, ತಿಂಡಿ ಗಂಟುಗಳೊಂದಿಗೆ ರೈಲ್ವೆ ಸ್ಟೇಷನ್ನಿಗೆ ಬರುತ್ತಾಳೆ. ಅವಳಿಗೆ ಅಲ್ಲಿ ಯಾರ ಜೊತೆಯಲ್ಲಿಯೂ ಮಾತನಾಡಲಾಗದ ಸ್ಥಿತಿ. ಗೋಡೆಯ ಮೇಲೆ ಅನೇಕ ರೀತಿಯ ಬರಹಗಳು, ಮೆರವಣಿಗೆಯ ಬ್ಯಾನರ್‌ಗಳು ರೈಲು ಬರುವುದು ಒಂದು ಗಂಟೆ ತಡವಾಗುತ್ತದೆ ಎಂಬ ಬೋರ್ಡು. ತಾನು ತಂದಿರುವ ಗಂಟಿನಿಂದ ರೊಟ್ಟಿಯನ್ನು ತೆಗೆದು ತಿನ್ನುವಷ್ಟು ಹಸಿವು ಆದರೆ ಸುತ್ತಮುತ್ತ ನೊಣಗಳು ಎದುರಿಗೆ ವ್ಯಕ್ತಿಯೊಬ್ಬ ದಿಟ್ಟಿಸುತ್ತಿದ್ದ. ಅದು ಆತನ ತೀವ್ರವಾದಂತಹ ಹಸಿವಿನ ದೃಷ್ಟಿಯಾಗಿತ್ತು.

ಎಲ್ಲಿ ಹೋದರೂ ಧಾಳಿ ತಪ್ಪದೆಂದು ನಿಂತಳು. ಹಸಿವು ಹೆಚ್ಚಾದಾಗ ಗಂಟಿನಿಂದ 'ರೊಟ್ಟಿಯನ್ನು ತೆಗೆದು ಪಕ್ಕದಲ್ಲಿಟ್ಟುಕೊಂಡು" ಅವನ ಕಣ್ಣಲ್ಲಿದ್ದುದು ಜ್ವರವಲ್ಲ, ಬೇಸರವಲ್ಲ. ಹಸಿವೆಯೆಂದು ತಿಳಿದು ಇನ್ನೇನು ಕೊಡಬೇಕು

ಎನ್ನುವಷ್ಟರಲ್ಲಿ ಓಡಿ ಬಂದು ರೊಟ್ಟಿಯನ್ನು ಕಸಿದುಕೊಂಡು ತಿನ್ನುತ್ತಿದ್ದ. ನಂತರ ಗುಂಪು ಸೇರ ತೊಡಗಿ ಪೋಲೀಸ್‌ಬಂದು ಲಾಠಿ ಪ್ರಹಾರ ಮಾಡಿದ್ದು, ಎಲ್ಲವೂ ಮುಗಿದ ಮೇಲೆ ಆಕೆಗೆ ಕನಿಕರ ಪಶ್ಚಾತಾಪ ಉಂಟಾಗುತ್ತದೆ.

ಈ ಕಥೆಯಲ್ಲಿ ಹಸಿವಿನಿಂದ ಭೀಕರತೆಯನ್ನು ಹೇಳುತ್ತಿದ್ದರೂ ಕೂಡಾ ಅದರ ಮೂಲಕ ಸಾಮಾಜಿಕ ಸಂದರ್ಭಕ್ಕೆ ಸಿಲುಕಿದ ಆಕೆಯ ಪರಿಸ್ಥಿತಿಯನು ಸೂಕ್ಷ್ಮವಾಗಿ ವಿವೇಚಿಸಲಾಗಿದೆ. ಇಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷದಂತೆ ಕಂಡರೂ ಕೂಡಾ ಅದೆಲ್ಲವನ್ನು ಮೀರುವ ಅಸಾಹಯಕತೆಯ ಸಂದರ್ಭ ಸೃಷ್ಟಿಯಾಗುವುದನ್ನು ಕಾಣಬಹುದು. ಆತನು ಕಸಿದುಕೊಂಡ ರೊಟ್ಟಿಯಿಂದಲೇ ಇಷ್ಟೆಲ್ಲಾ ಆಗಿದ್ದು, ಆಕೆಯ ಒಂದು ವರ್ತನೆಯಿಂದಲೇ ಎಂಬಂತೆ ಕಂಡರೂ ಅದರ ಹಿಂದಿರುವ ಭೀಕರ ಹಸಿವಿನ ಸ್ವರೂಪ ಎಂತಹದು ಎಂಬುದನ್ನು ತಿಳಿಯಪಡಿಸುತ್ತದೆ. ಆಕೆಗೂ ಕೂಡಾ ಆ ವ್ಯಕ್ತಿಯ ಬಗೆಗಿನ ಪ್ರೀತಿ, ಅನುಕಂಪ ಉಂಟಾಗುತ್ತದೆ. ತಾನು ಮಾಡಿದ್ದು ತಪ್ಪು ಎಂಬುದು ಅರಿವಾಗುವ ಹೊತ್ತಿಗೆ ಪೋಲಿಸರು ಆತನನ್ನು ರಕ್ತ ಬರುವಂತೆ ಹೊಡೆದು ದೊಡ್ಡ ದೊಂಬಿ ಎಬ್ಬಿಸಿರುತ್ತಾರೆ.

ಇಲ್ಲಿ ಹಸಿವಿನ ಭೀಕರತೆಯನ್ನು ಹತ್ತಿಕ್ಕಲು ವ್ಯವಸ್ಥೆಯ ಅಧಿಕಾರವು ಕೂಡಾ ಬಳಕೆಯಾಗಿರುವುದನ್ನು ಕಾಣಬಹುದು. ಆದರೆ ಆಕೆಗೂ ಕೂಡಾ ಇದರ ಬಗ್ಗೆ ತೀವ್ರ ವಿರೋಧವಿದೆ. ಪೋಲೀಸರು ಅವಳನ್ನು ಸುತ್ತುವರೆದಿದ್ದಾಗ "ಜನ ದೂರಕ್ಕೆ ಹೋಗಿ ನಿಂತು ನೋಡುತ್ತಿದ್ದರು. ಅತಿ ಕ್ರೂರವಾಗಿ ಸೇಡು ತುಂಬಿದ ಕಣ್ಣುಗಳಿಂದ. ಆದರೆ ರೊಟ್ಟಿಯ ಕಳ್ಳ ಅದೇ ಕಂಬದ ಹತ್ತಿರ ರಕ್ತ ಸುರಿಸುತ್ತಾ ನಿಂತು ಅವಳನ್ನೇ ನೋಡುತ್ತಿದ್ದ. ಪೋಲೀಸ್ ಅವಳನ್ನು ದರದರ ಎಳೆಲಾರ್ದು ಸರ್ವ ಮಂದಿಯನ್ನು ಹತ್ತಿ ಬಿಟ್ಟ. ಆಕೆ ರಾಜಕುಮಾರಿಯೇ ಎಂಬಂತೆ ಪೋಲೀಸರು ಅವಳ ಸುತ್ತ ನಿಂತರು ಅಲ್ಲಿಂದ ಓಡಿ ಹೋಗಿ ಗುಂಪಾಗಿ ದೂರದಲ್ಲಿದ್ದ ಜನರಲ್ಲಿ

ಸೇರಿಕೊಳ್ಳಬೇಕೆಂದು ಆಕೆಗೆ ಆಸೆ0ಯಾಯಿತು. ಅವರಿಂದ ಹೊಡೆತ ತಿನ್ನಬೇಕು ಅನ್ನಿಸಿತು. *(6) ವ್ಯವಸ್ಥೆ0ಯ ಅಧಿಕಾರದ ಎದುರು ಅವಳಲ್ಲಾದ ಪರಿವರ್ತನೆ, ನೋವುಗಳನ್ನು ಹೇಳುವ ಕಥೆಗಾರರು ಆಕೆ0ಯಲ್ಲೂ ಕೂಡಾ ತನ್ನ ತಪ್ಪಿನ ಅರಿವುಂಟಾಗಿ ಅದಕ್ಕೆ ತಾನೇ ಕಾರಣ ಎಂಬ ಪಾಪದ ಭೀತಿ0ಯು ಸುತ್ತುತ್ತದೆ.

ಒಟ್ಟಾರೆ ಲಂಕೇಶರು ಈ ಕಥೆ0ಯ ಮೂಲಕ ಸಮಾಜಿಕ ಸಂದರ್ಭದಲ್ಲಿ 0ಯಾವುದೇ ರೀತಿ0ಯ ಸಿದ್ಧಾಂತಗಳು, ತತ್ವಗಳು ಕೂಡಾ ಮೀರುತ್ತವೆಂದು ಹೇಳಿದ್ದಾರೆ. ನವ್ಯ ಸಾಹಿತ್ಯದ ಪ್ರಧಾನ ಧೋರಣೆ0ಯಾದ ವ್ಯಂಗ್ಯವನ್ನು ಇಲ್ಲಿ ವಿಶಿಷ್ಟವಾಗಿ ಬಳಸಲಾಗಿದೆ.

ಅಡಿ ಟಿಪ್ಪಣಿಗಳು:

1) ಲಂಕೇಶರ ಸಮಗ್ರ ಕಥೆಗಳು ಪುಟ – 5

2) ಲಂಕೇಶರ ಸಮಗ್ರ ಕಥೆಗಳು ಪುಟ – 9

3) ಲಂಕೇಶರ ಸಮಗ್ರ ಕಥೆಗಳು ಪುಟ – 55

4) ಲಂಕೇಶರ ಸಮಗ್ರ ಕಥೆಗಳು ಪುಟ – 58

5) ಲಂಕೇಶರ ಸಮಗ್ರ ಕಥೆಗಳು ಪುಟ – 179

6) ಲಂಕೇಶರ ಸಮಗ್ರ ಕಥೆಗಳು ಪುಟ – 130

ಅಧ್ಯಾಯ – 7

ಲಂಕೇಶರ ಕಥೆಗಳಲ್ಲಿ ಸ್ತ್ರೀ ಪಾತ್ರಗಳ ವಿಶ್ಲೇಷಣೆ

ಲಂಕೇಶರು ತಮ್ಮ ಕಥೆಗಳಲ್ಲಿ ಬಹು ಮುಖ್ಯವಾಗಿ ಎಲ್ಲಾ ಪಾತ್ರಗಳ ತುಮುಲ – ತಳಮಳಗಳನ್ನು ತೀವ್ರವಾಗಿ ಶೋಧಿಸುವವರು ಈ ರೀತಿ0ಯಾದ ತೀವ್ರ ಪ್ರಜ್ಞೆಯಿಂದಲೇ ಪಾತ್ರದಲ್ಲಿ 0ಯಾವುದೇ ರೀತಿ0ಯ ಅನಾವಶ್ಯಕವೆನಿಸುವ ಸಂಭಾಷಣೆ, ಸನ್ನಿವೇಶಗಳನ್ನು ಸೃಷ್ಟಿಸಲಾರರೆಂದು ಅನಿಸುತ್ತದೆ. ಸೂಕ್ಷ್ಮ ಮನಸ್ಸಿನವರಾದ ಲಂಕೇಶರು ಹೆಣ್ಣಿನ ಪಾತ್ರವನ್ನು ಸೃಷ್ಟಿಸುವಾಗ ಹೇಗೆ ಗಂಡನ ಮನಸ್ಸಿನಲ್ಲಿ ಚಿತ್ರಿತವಾಗುತ್ತಳೆಂಬುದನ್ನು ಅವರ ಕಥೆಗಳಲ್ಲಿ ಕಾಣಬಹುದ ಮತ್ತು ಹೆಣ್ಣಿನ ವಿವಿಧ ರೀತಿ0ಯ ತುಮುಲಗಳನ್ನು ಕಥೆಗಾರ ಲಂಕೇಶರು ಹೆಣ್ಣಿನ ಪಾತ್ರವನ್ನು ಸೃಷ್ಟಿಸುವಾಗ ಹೇಗೆ ಗಂಡನ ಮನಸ್ಸಿನಲ್ಲಿ ಚಿತ್ರಿತವಾಗುತ್ತಾಳೆಂಬುದನ್ನು ಅವರ ಕಥೆಗಳಲ್ಲಿ ಕಾಣಬಹುದು ಮತ್ತು ಹೆಣ್ಣಿನ ವಿವಿಧ ರೀತಿ0ಯ ತುಮಲಗಳನ್ನು ಕಥೆಗಾರ ಲಂಕೇಶರು ಹೇಗೆ ಅರ್ಥೈಸಿ ಅದಕ್ಕೆ ವಿಶಿಷ್ಟ ರೂಪ ನೀಡಿರುವರು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಲಂಕೇಶರ ಮೊದಲ ಕಥಾ ಸಂಕಲನ **ಕೆರೆಯ ನೀರನ್ನು ಕೆರೆಗೆ ಚೆಲ್ಲಿ** ಬರುವ ಸ್ತ್ರೀ ಪಾತ್ರ, ಗೊಮ್ಮಟೇಶ ಕಥೆ0ಯಲ್ಲಿನ ಶಾಂತ ಪಾತ್ರವನ್ನು ಇವರ ಸ್ತ್ರೀ ದೃಷ್ಟಿಕೋನದ ಮೊದಲ ಪ್ರಾತಿನಿಧಿಕ ಪಾತ್ರವಾಗಿ ಕಾಣಬಹುದು. ಪ್ರವಾಸದ ಸಂದರ್ಭದಲ್ಲಿನ ತನ್ನ ವೈ0ಯುಕ್ತಿಕ ಕಾ0ರ್ಯಗಳನ್ನು ಬೇರೊಬ್ಬರ ಹತ್ತಿರ ಹೇಳಲಾರದೆ, ಚಡಪಡಿಸುವಂತಹ ಸಂಧಿಗ್ಧತೆಯ ಸ್ಥಿತಿ ಅಕೆಯದು. ಇಲ್ಲಿ ತನ್ನ ಜೊತೆಯ ವಿದ್ಯಾರ್ಥಿಗಳ ಜೊತೆಗೆ ಬಂದರೂ ಸಹಜವಾದ ಸಂಕೋಚ, ನಾಚಿಕೆ, ಲಜ್ಜೆಯಿಂದ ತುಂಬಿರುವ ಪಾತ್ರವಾಗಿ ಕಂಡು ಬರುತ್ತಾಳೆ. **'ಕೆರೆಯ ನಿರನ್ನು ಕೆರೆಗೆ**

ಚೆಲ್ಲಿ ಕಥೆಯ **'ಗೌರಿ'** ಒಂದು ದೃಷ್ಟಿಯಿಂದ ತನ್ನ ಆಸೆ, ಆಕಾಂಕ್ಷೆಗಳನ್ನು ಹದುಮಿಡಲಾಗಿದೆ. ಅದನ್ನು ಶಿವರುದ್ರಪ್ಪನ ಜೊತೆಯಲ್ಲಿ ಹಂಚಿಕೊಳ್ಳುವಳು. ತನ್ನ ಮದುವೆಯು ತನ್ನ ಮಾವನಾದ ಪರಮೇಶನ ಜೊತೆ ನಡೆಯುತ್ತದೆಂದು ತಿಳಿದಾಗ ಅವಳಿಗೆ ಒಂದೇ ಬಾರಿಗೆ ನಾಚಿಕೆ, ಭಯ, ದುಗುಡ, ಸಂತೋಷ ವ್ಯಕ್ತವಾಗುತ್ತದೆ. ಮದುವೆಯೆಂಬ ಮಾತಿನ ಸಂಪೂರ್ಣವಾದ ಅರ್ಥ ಗೌರಿಗೆ ಆಗ ತೊಡಗಿತು. ಅದನ್ನು ನಿಂತು ಯೋಚಿಸಿದಾಗ ಉಸಿರುಕಟ್ಟಿದ ಹಾಗಾಗುತ್ತಿತ್ತು.*(1) ಗೌರಿಯು ಮದುವೆಯ ಬೆಳಗಿನ ಆಳದಲ್ಲಿನ ಆತಂಕಗಳು, ದಿಗಿಲುಗೊಂಡಿರುವುದನ್ನು ಕಾಣಬಹುದು. ಈ ಕನಸ್ಸಿನಲ್ಲಿ ಬರುವ ಕುದುರೆ, ಮಗು, ಮನುಷ್ಯರಿಲ್ಲದ ಜಾಗ ಇವೆಲ್ಲವೂ ತನ್ನ ಮದುವೆಯ ದಿನ ಸಮೀಪಿಸುತ್ತಿರುವಾಗ ಆಗುವಂತಹವುಗಳು. ಆದರೆ ಕೊನೆಗೆ ಮದುವೆಯು ತನ್ನ ಮಾವನಾದ ಪರಮೇಶನೊಡನೆ ಆಗುವುದಿಲ್ಲ. ಆದರೆ ತನ್ನ ಬಾಲ್ಯ ಕಾಲದಿಂದಲೂ ಗೆಳೆಯನಾದ ಶಿವರುದ್ರನ ಜೊತೆ ಕೊಡುವುದರ ಮೂಲಕ ಪಡೆಯುತ್ತಾಳೆ. ಗೌರಿಯು ಅನೇಕ ಬಾರಿ ಶಿವರುದ್ರನ ಮೇಲೆ ಗುಪ್ತವಾಗಿ ವ್ಯಾಮೋಹಿಸಿ ಕೊನೆಗೆ ಅವನಲ್ಲಿ ಜೊತೆಯಾದದ್ದು ಜೊತೆಯಿಂದಿದ್ದು ಅರ್ಥಪೂರ್ಣವೆನಿಸುತ್ತದೆ.

ಲಂಕೇಶರ ಮೊದಲ ಕಥಾ ಸಂಕಲನ ಘಟ್ಟದಿಂದ ತಮ್ಮ ಮೂರನೆಯ ಕಥಾ ಸಂಕಲನವಾದ **"ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ"** ಈ ಕಥೆಗೂ ತುಂಬಾ ದೊಡ್ಡ ಜಗಿತವನ್ನು ಕಂಡರಿಸಿದ್ದಾರೆ. ವ್ಯಕ್ತಿಯು ಹೇಗೆ ಸಮಾಜ ವ್ಯವಸ್ಥೆಯ ಕ್ರೌರ್ಯಗಳಿಗೆ ಸಂಚುಗಳಿಗೆ ಧ್ವಂಸಕ್ಕೆ ಬಳಕೆಯಾಗುತ್ತಾರೆ ಎಂಬುದನ್ನು ಈ ಕಥಾ ಸಂಕಲನವಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ತನ್ನ ಸುತ್ತಲೂ ಇರುವ ಸಮಾಜವೊಂದು ಮುಗ್ಧವೆನಿಸುವ, ಹಳ್ಳಿಯ ಹುಡುಗಿಯನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುವ ವ್ಯವಸ್ಥಿತ ಸಂಚನ್ನು ರೂಪಿಸಿರುತ್ತದೆ. ಹಾಗೆಯೇ ಗುತ್ತಿ ಗೀತಾ ಆದದ್ದು

ಕತೆಯಲ್ಲಿ ಕಾಣಬಹುದು. ಆಗ ತಾನೆ ಹಳ್ಳಿ ಮತ್ತು ನಗರಗಳ ನಡುವೆ ಸಂಪರ್ಕ ಏರ್ಪಡಿಸುತ್ತಿದ್ದ ಕಾಲದಲ್ಲಿ ನಗರದ ಕ್ರೌರ್ಯವನ್ನು, ಮೋಸವನ್ನು ಸಂಚಿಗೆ ಬಲಿಯಾಗುವ ಗುತ್ತಿಗೆಯನ್ನು ಕಾಣಬಹುದು. ಈ ಕಥೆಯಲ್ಲಿ ಬರುವ ಪೋಲೀಸ್ ವ್ಯವಸ್ಥೆಯಿಂದ ಹಿಡಿದು ರಾಜಕಾರಣಿ, ಪತ್ರಕರ್ತ, ಅಧ್ಯಾಪಕರು ಎಲ್ಲರೂ ಕೂಡಾ ಗುತ್ತಿಗೆಯನ್ನು -- ಗೀತಾ ಆಗುವಂತೆ ಮಾಡಲು ಸಂಚು ನಡೆಸಿದವರು. ಗುತ್ತಿಯೂ ಕೂಡಾ ಪ್ರಾರಂಭದಲ್ಲಿ ಇದ್ದ ಸಂಕೋಚ, ಭಯ ಆತಂಕಗಳನ್ನು ತೊರೆದು ಕ್ರಮೇಣ ಹೇಗೆ ಇಡೀ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗಿ ತನ್ನ ವ್ಯಕ್ತಿತ್ವವೇ ಇಲ್ಲವಾಗಿಸುವ ಪ್ರಕ್ರಿಯೆ ಎಂದು ಕಂಡು ಬಂದರೂ, ಕೊನೆಯಲ್ಲಿ ಮುಖ್ಯಾಯವಾಗುವ "ಗುತ್ತಿ ಕೂಡಾ ಸಿಕ್ಕಂತೆ ಕಾಣುತ್ತಿತ್ತು" ಎಂದಿದ್ದಾರೆ ಲಂಕೇಶರು.

ಗುತ್ತಿಯು ಒಂದು ರೀತಿಯ ತೃಪ್ತ ಮನಸ್ಸಿನವಳಾದರೆ ನಂತರದ ನಿರ್ಮಲಳ ಪಾತ್ರವು ತನ್ನ ಅಂತರಾಳದ ಬಯಕೆಗಳನ್ನು ಹಾಗೆಯೇ ಉಳಿಸಿಕೊಂಡು ಚಡಪಡಿಸುವಳಾಗುತ್ತಾಳೆ. ವ್ಯಂಗ್ಯವೂ ಅಸಾಹಯಕತೆಯ ನಗುವು ತನ್ನ ಪ್ರತಿಭಟನೆಯನ್ನು ಸೂಚಿಸುತ್ತದೆ.

ನಿಂಗಮ್ಮ ಪೇಟೆಗೆ ಸೇರಿ ಒಂದು ಪುಸ್ತಕದಂಗಡಿಯನ್ನು ನಡೆಸುತ್ತಿದ್ದು ಮುಖ್ಯವೆನಿಸುತ್ತದೆ. ಲಂಕೇಶರು ಈ ಕಥೆಯ ಮೂಲಕ ಹೆಣ್ಣಿನ ಎರಡು ಸಾಧ್ಯತೆಳನ್ನು ಚಿತ್ರಿಸಿದ್ದಾರೆಂದು ಅನಿಸುತ್ತದೆ. ನಗರದ ಕ್ರೌರ್ಯಕ್ಕೆ ಬಲಿಯಾದ ಗುತ್ತಿಯೂ ಅದೇ ರೀತಿ ಅದನ್ನು ಮೀರಿ ಸ್ವತಃ ಉದ್ಯೋಗ ಸೃಷ್ಟಿಸಿಕೊಂಡ ಪಾತ್ರವಾದ ನಿರ್ಮಲಳನ್ನು ಕಾಣಬಹುದು. ಕ್ರೌರ್ಯಕ್ಕೆ ತುತ್ತಾದವಳು ಒಬ್ಬಳಾದರೆ ಅದನ್ನು ದಾಟಿದ ಸ್ಥಿತಿ ನಿರ್ಮಲಳದ್ದು. ಆದರೆ ಇಲ್ಲಿ ನಿರ್ಮಲಾ ಕೂಡಾ ಅಷ್ಟೇ ರೀತಿಯ ಅತೃಪ್ತಳು. ಹೇಗೆ ಎರಡು ಭಿನ್ನ ಮನಃಸ್ಥಿತಿಯ ಪಾತ್ರಗಳು ಕೂಡಾ

ವ್ಯವಸ್ಥೆಯ ಸಂಚಿಗೆ ಬಲಿಯಾಗಿರುವುದನ್ನು ಕೂಡಾ ಕಾಣಬಹುದಾದರೂ ಅದನ್ನು ಮೀರಿ ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡಿರುವುದನ್ನು ಗುರುತಿಸಬಹುದು.

"ಲಂಕೇಶರ ಕಥೆಗಳಲ್ಲಿ ಸಾಮಾನ್ಯವಾಗಿ ಬದುಕಿನ ಕ್ಷುದ್ರತೆ, ಸ್ವಾರ್ಥ, ಕ್ರೌರ್ಯಗಳು ಗಂಡಿನ ಮೂಲಕ ವ್ಯಕ್ತವಾದರೆ, ಅಸಹಾಯಕತೆ, ಪ್ರೀತಿ, ತ್ಯಾಗ, ಸತ್ಯಗಳು ಸ್ತ್ರೀಯರ ಪಾತ್ರದ ಮೂಲಕ ವ್ಯಕ್ತವಾಗುತ್ತದೆ".*(2) ಏಕೆಂದರೆ ಲಂಕೇಶರು 'ಕಲ್ಲು ಕರಗುವ ಸಮಯ' ಕತೆಯ ಶ್ಯಾಮಲ, 'ಉರಿದ ಊರಿನವರು' ಕಥೆಯಲ್ಲಿನ ಚೆಲುವಮ್ಮನ ಪಾತ್ರಗಳು ಭಿನ್ನ ರೀತಿಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಚೆಲುವಮ್ಮನನ್ನು ಹೇಗೆ ಒಬ್ಬ ಗಂಡಸು ಕಾನೂನು ಮೂಲಕ ಹೋರಾಟ ಮಾಡಿ ಪಡೆಯಲು ಯತ್ನಿಸುವ ರೀತಿಯಲ್ಲಿ ಮುಂದುವರೆಯುತ್ತಾಳೆ. ಒಂದು ಚಿಕ್ಕ ಘಟನೆಯಿಂದ ಆರಂಭವಾದ ಕಥೆಯು ಇಡೀ ಊರನ್ನು, ಅಲ್ಲಿನ ಸ್ಥಳೀಯ ಮುಖಂಡರನ್ನು, ಪೋಲೀಸ್ ವ್ಯವಸ್ಥೆಯನ್ನು, ಎಲ್ಲವನ್ನೂ ಕಂಗೆಡಿಸಿ ಕೊನೆಗೆ ಚೆಲುವಮ್ಮನ ಮನೆಗೆ ಬಿದ್ಧ ನಿಗೂಢವಾದ ಬೆಂಕಿಯಿಂದ ಇವೆಲ್ಲವೂ ಕೊನೆಗಾಣುತ್ತದೆ. ಚೆಲುವಮ್ಮನ ಈ ರೀತಿಯ ಸಣ್ಣತನ, ಕಿತಾಪತಿಗಳನ್ನು ತಮ್ಮ ರಾಜಕೀಯ ಬಂಡವಾಳವನ್ನಾಗಿ ಮಾಡಿಕೊಂಡ ಕರೀಗೌಡ, ಮುನಿಯಪ್ಪ ಇವರ ವರ್ತನೆಗಳನ್ನು ಇಡೀ ಪತ್ರಿಕೆಯ ತುಂಬಾ ವಿಷಯವು ಬರುವಂತೆ ಆಯಿತು. ಇದು ಊರಿನಲ್ಲಾದ ಕ್ಷುದ್ರ ಘಟನೆಯೆನಿಸಬಹುದಾದರೂ ಅದರ ನಡುವೆ ಕಥೆಯು ಪಡೆದುಕೊಳ್ಳುವ ವಿವಿಧ ಆಯಾಮಗಳಿಂದ ಚೆಲುವಮ್ಮನ ವ್ಯಕ್ತಿತ್ವದಲ್ಲಿ ಒಂದು ರೀತಿಯ

ಬಿರುಕನ್ನು ಕಾಣಬಹುದು. ಹೇಗೆಂದರೆ ಇಡೀ ಊರಿನವರನ್ನು ತನ್ನ ನಿ೦ಯಂತ್ರಣದಲ್ಲಿಟ್ಟುಕೊಳ್ಳಲು ಮಾಡಿದ ತಂತ್ರ ಫಲಿಸದೆ ಹೋದಾಗ ಹತಾಶೆ೦ಯ ಸ್ಥಿತಿ೦ಯನ್ನು ತಲುಪಿದಂತೆ ಕಂಡು ಬರುತ್ತಾಳೆ.

ಕೊನೆಗೆ ತಾನೇ ನಿಗದಿ೦ಯಾದ ದಿನದಂದು ಬೆಂಕಿ ಹಚ್ಚಿಕೊಂಡು ಸಾ೦ಯುವುದೆಂದು ತೀರ್ಮಾನಿಸಿಸಿದಕ್ಕಿಂತ ಮೊದಲೇ ಅದನ್ನು ಕಾಣಬಹುದು. ಈ ಮುಂಚೆ ಪ್ರೀತಿಸುತ್ತಿದ್ದ ಗುಪ್ತ ಪ್ರೇಮಿ ಮಾಸ್ತರ ಭೈರಪ್ಪನ ವಿರುದ್ಧವೇ ಕಂಪ್ಲೇಂಟು ನೀಡಲು ೦ಯತ್ನಿಸಿದ್ದು "ಆತನ ಇಡೀ ಮಾತು ಆಕೆ೦ಯ ಅಗ್ನಿ ಪ್ರವೇಶವನ್ನು ತಪ್ಪಿಸುವುದೇ ಆಗಿತ್ತು. ಆಕೆ೦ಯ ಮೇಲಿನ ತನ್ನ ತೀವ್ರ ಪ್ರೇಮವನ್ನು ತೋಡಿಕೊಂಡ ಇನ್ನೊಂದು ಪತ್ರಿಕಾಗೋಷ್ಠಿ ಕರೆದು ತನ್ನೆಲ್ಲಾ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಊರವರ ಜೊತೆ ರಾಜಿ ಮಾಡಿಕೊಳ್ಳಬೇಕೆಂದು ಅಂಗಲಾಚಿದ. ಆದರೆ ಚೆಲುವಮ್ಮ ಆತನ ಪ್ರೀತಿ೦ಯನ್ನು ಒಪ್ಪಿದರೂ ಆತನ ಹಿತವಚನ ಕೇಳುವ ಸ್ಥಿತಿ೦ಯಲ್ಲಿರಲಿಲ್ಲ. ಭೈರಪ್ಪನ ಒಂದೊಂದು ಮಾತೂ ಆಕೆ೦ಯನ್ನು ಒಬ್ಬಂಟಿ೦ಯನ್ನಾಗಿ೦ಯೇ ಮಾಡಿದವು. *(3) ಹೀಗೆ ಚೆಲುವಮ್ಮನು ಮನೆ೦ಯ ದುರಂತದ ಜೊತೆಗೆ ತನ್ನ ದುರಂತವನ್ನು ಕೂಡಾ ತಂದುಕೊಂಡಳು.

ಲಂಕೇಶರು ಆಧುನಿಕ ಕಾಲಘಟ್ಟದಲ್ಲಿ ಹೆಣ್ಣಿನ ವಿವಿಧ ರೀತಿ೦ಯ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲಾಗದ ಅಸಾಹ೦ಯಕತೆ೦ಯ ಸ್ಥಿತಿ ಚಿತ್ರಿಸಿದ್ದಾರೆ. **ಕಣ್ಮರೆ** ಕಥೆ೦ಯಲ್ಲಿನ **ಭ್ರಮರಾ** ಅಂತಹ ಒಂದು ಪಾತ್ರ

ಮತ್ತು ಸಾವಿತ್ರಿ0ಯು ಅನುಭವಿಸಿದ ಹತಾಶೆ, ಸೋಲು ಆತಂಕಗಳು ಒಂದು ಬಗೆ0ಯುದಾದರೆ, ಮುಂದಿನ ತಮ್ಮ ಕಥೆಗಳಲ್ಲಿ ಇವೆಲ್ಲವನ್ನೂ ಮೀರುವ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ವೃಕ್ಷದ ವೃತ್ತಿ0ಯು 'ಪಾರ್ವತಜ್ಜಿ, ಸುಭದ್ರ ಮುಂತಾದ ಪಾತ್ರಗಳನ್ನು ವಿವರಿಸಬಹುದು. ಪಾರ್ವತಜ್ಜಿ0ಯು ನಿಗೂಢವಾದ ಶಕ್ತಿ0ಯು ಬಗ್ಗೆ ಒಂದು ರೀತಿ0ಯಾದ ಕುತೂಹಲವನ್ನು ಉಳಿಸಿಕೊಂಡಿರುವುದನ್ನು ಗಮನಿಸಬಹುದು.

ಕಥೆ0ಯು ನಿರೂಪಕನು ನಿವೃತ್ತ ಸೇನಾಧಿಕಾರಿ0ಯಾಗಿ ಪಾರ್ವತಜ್ಜಿ0ಯು ಬಗ್ಗೆ ಹೇಳುವ ಈ ಮಾತುಗಳ ಮುಖ್ಯವೆನಿಸುತ್ತದೆ. "ನಮ್ಮ ಸಮಕಾಲೀನರಲ್ಲಿ ಅನೇಕರು ಸಾಹಿತಿಗಳಾಗಿದ್ದು ಕವಿಗೋಷ್ಠಿಗಳಲ್ಲಿ ಭಾಗವಹಿಸಿ, ಭಾಗವಹಿಸಲು ಅವಕಾಶವಿಲ್ಲದೆ ಹೋಗಿ ಪ್ರಶಸ್ತಿ, ಪಾರಿತೋಷಕಗಳ ಮರೀಚಿ0ಯು ಬೆನ್ನು ಹತ್ತಿದರು. ಭ್ರಷ್ಟತೆ ಅದರ ವಿರುದ್ಧ ಗೊಣಗಾಟ, ಹಾದರ ಮದ್ಯಪಾನಗಳಲ್ಲಿ ನೃತ್ಯ ಸಿನೆಮಾ, ಕಾಡು ಹರಟೆಗಳಲ್ಲಿ ಹರಿದು ಹಂಚಿಹೋಗಿತ್ತು.

ಪಾರ್ವತಿ0ಯು ಆರಂಭದ ತೆಂಗಿನಗೊನೆಗಳು ನಾನೂರಕ್ಕಿಂತ ಹೆಚ್ಚು ಕಾಯಿಕೊಟ್ಟವು. ಇದರೊಂದಿಗೆ ಪಾರ್ವತಿ0ಯು ಹಂಗಿಲ್ಲದ ಸ್ವತಂತ್ರ ಬದುಕು ಶುರುವಾಯಿತು".(4) ಇದನ್ನು 0ಯಾಕಿಲ್ಲಿ ಪ್ರಸ್ತಾಪಿಸುತ್ತಿದ್ದೇನೆಂದರೆ ಆಧುನಿಕ ಸಂದರ್ಭದಲ್ಲಿ ಅಧಿಕಾರ, ಹಣವೇ ಮುಖ್ಯವೆಂದು ತಿಳಿದಿರುವ ಪ್ರಜ್ಞಾವಂತರಿಗೂ, ಪಾರ್ವತಿ0ಯು ಧ್ಯಾನಸ್ಥ

ಮನೋಭೂಮಿಕೆಗೂ ಇರುವ ವ್ಯತ್ಯಾಸ ಕಾಣಬಹುದು. ಲಂಕೇಶರಿಗೆ "ಭ್ರಷ್ಟಾಚಾರದ ವಿರುದ್ಧ ಹೋರಾಡಲು ಏನು ಮಾಡಬೇಕು?" ಎಂದು ೦ಯಾರೋ ಕೇಳಿದಾಗ, 'ಮನೆ೦ಯ ಮುಂದೆ ಗಿಡವೊಂದನ್ನು ನೆಟ್ಟು ಅದನ್ನೇ ಜೋಪಾನವಾಗಿ ಬೆಳೆಸು' ಎಂದರಂತೆ.

ಪಾರ್ವತಿ೦ಯು ಮೊದ ಮೊದಲು ಮರಹತ್ತುವುದಕ್ಕೆ ಅಂಜುತ್ತಿದ್ದಳು. ಆಮೇಲೆ ಸರಿ೦ಯಾಗಿ ಹತ್ತುತ್ತಿದ್ದಳು. ಮರದೊಡ್ಡದಾಗುತ್ತಾ ತೆಂಗಿನ ಕಾಯಿ ಬಿಡುವುದು ಹೆಚ್ಚಾಯಿತು. ಮರದಲ್ಲಿ ಗುಬ್ಬಚ್ಚಿ, ಪಾರಿವಾಳಗಳು ಗೂಡು ಕಟ್ಟುತ್ತಿದ್ದವು. ಪಾರ್ವತಿ೦ಯನ್ನು ಕಂಡರೆ ಅವು ಅಂಜುತ್ತಲೇ ಇರಲಿಲ್ಲ. ಕೆಲವೊಮ್ಮೆ ಪಾರ್ವತಿ ಕಾಯಿ ಕೀಳಲೆಂದು ಮರಹತ್ತಿ ಹಕ್ಕಿಗಳೊಂದಿಗೆ ಆಟ ಆಡುತ್ತಾ ಇದ್ದು ಬಿಡುತ್ತಿದ್ದಳು.

ಈ ರೀತಿ೦ಯ ಪಾರ್ವತಜ್ಜಿ೦ಯ ವ್ಯಕ್ತಿತ್ವ ಕೂಡಾ ವಿಶಿಷ್ಟವಾಗಿದ್ದು ಅವಳು ಮಾನವ ಕುಲದ ಕತೆ೦ಯನ್ನೇ ಬಿಂಬಿಸುವಂತಹ" ಕಥೆಗಳನ್ನು ಹೇಳುತ್ತಿದ್ದರು. ಇಂತಹ ಕಥೆ೦ಯಲ್ಲಿ ಪಾರ್ವತಜ್ಜಿ೦ಯ ವ್ಯಕ್ತಿತ್ವದಿಂದ ಕಲಿ೦ಯಬೇಕಾಗಿರುವುದು ಸಾಕಷ್ಟಿದೆ ಎಂದು ಅನಿಸುತ್ತದೆ. ಇಂದಿನ ಅಧುನಿಕ ಆರ್ಥವ್ಯವಸ್ಥೆ ತಂದೊಡ್ಡಿರುವ ವಿನಾಶಕಾರಿ ಪರಿಣಾಮಗಳಿಗೆ ಪರ್ಯಾ೦ಯವಾಗಿ ಮತ್ತೊಂದನ್ನು ಹುಡುಕುವ ಪಾರ್ವತಜ್ಜಿ೦ಯಂತಹವರು ಬಹಳ ಮುಖ್ಯರಾಗುತ್ತಾರೆ.

ಲಂಕೇಶರ ಮತ್ತೊಂದು ಪ್ರಮುಖ ಕಥೆಯಾದ **ಮಂಜು ಕವಿದ ಸಂಜೆ** ಮತ್ತು ಇತರೆ ಕಥೆಗಳು ಎಂಬ ಕಥಾ ಸಂಕಲನದಲ್ಲಿ ಬರುವ A suicide note ಎಂಬ ಕಥೆಯಲ್ಲಿ ಬರುವ ಮೀನ ಎಂಬ ಹುಡುಗಿ ತನ್ನ ಪ್ರೀತಿ ಪ್ರೇಮಗಳಲ್ಲಿ ಮುಳುಗಿ ತನ್ನನ್ನು ತಾನೇ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಇಡೀ ಕಥೆಯಲ್ಲಿ ರಹಸ್ಯವಾಗಿ ಮೂಡಿ ಬರುತ್ತದೆ. ಕಥೆಗಾರರಾದ ಲಂಕೇಶರು ಹೆಣ್ಣಿನ ಮನಸ್ಸನ್ನು ಮತ್ತು ಮನಸ್ಸಿನಲ್ಲಿನ ಆಸೆಗಳನ್ನು ಹತ್ತಿರದಿಂದ ನೋಡಿದಂತೆ ಕಂಡು ಬರುತ್ತದೆ. A suicide note ಕಥೆಯಲ್ಲಿ ಪ್ರಾರಂಭದಲ್ಲಿ ಮೀನಾಳ ಗಂಡನು ಕಾಲೇಜು ಅಧ್ಯಾಪಕನಾಗಿರುತ್ತಾನೆ. ಅವನ ಹೆಸರು ವಿಶ್ವನಾಥ್ ಇವನು ಕಾಲೇಜಿಗೆ ಹೋಗುವಾಗ ತನ್ನ ಪತ್ನಿಯನ್ನು ಮನೆಯಲ್ಲಿ ಕೂಡಿ ಹಾಕಿ ಎಲ್ಲಾ ಕಡೆ ಬೀಗ ಹಾಕಿ ಮೀನಾಳನ್ನು ಒಳಗೆ ಕೂಡು ಹಾಕಿ ಹೋಗುತ್ತಾನೆ ಎಂಬ ಸುದ್ಧಿ ಇಡೀ ಕಾಲೇಜಿನಲ್ಲಿ ವಿಶ್ವವಿದ್ಯಾಲಯದಲ್ಲಿ ಹಬ್ಬಿಬಿಟ್ಟಿತ್ತು. ವಿಶ್ವನಾಥ್ ಅವರ ವಿಶ್ವನಾಥ್ ಅವರ ವಿರುದ್ಧ ಬಂಡಾಯಕಾರರು ಸ್ತ್ರೀ ವಿಮೋಚನೆಯವರು ಸತ್ಯಾಗ್ರಹ ಧರಣಿ ನಡೆಸಿ ಅವರನ್ನು ಕೆಲಸದಿಂದ ತೆಗೆದು ಹಾಕಲು ಉಪಕುಲಪತಿಯವರನ್ನು ಒತ್ತಾಯಿಸುವ ನಿರ್ಣಯ ತೆಗೆದುಕೊಳ್ಳುತ್ತಾರೆ. ಈ ರೀತಿ A suicide note ಕಥೆಯು ಪ್ರಾರಂಭವಾದರೂ ಅದು ಮುಂದೆ ಹಲವು ರೀತಿಯ ತಿರುವುಗಳನ್ನು ಕಂಡುಕೊಳ್ಳುತ್ತದೆ. ಆದರೆ "ಮೀನ ಕಾಲೇಜಿನಲ್ಲಿ ಓದುತ್ತಿದ್ದಾಗ 18 ವರ್ಷದವಳು. ಅದು ಒಂದು ರೀತಿಯಲ್ಲಿ ಮುಗ್ದತೆ ತುಂಬಿದ್ದ ಕಾಲ. ಅ ಕಾಲ ಎಲ್ಲಿ ಹೋಯಿತೆಂದು ಕೆಲವೊಮ್ಮೆ ಕನಸಿನಲ್ಲಿ ಕೂಡ ಹುಡುಕಿದ್ದೇನೆ. ಕಾಲ ಸಿಕ್ಕುವುದಿಲ್ಲ. ಆದರೆ ನಿಮ್ಮಿಂದ ನಷ್ಟವಾದದ್ದು ಏನೆಂಬುದು ಮಾತ್ರ ನಮ್ಮಲ್ಲಿ ಉಳಿದು ಹೋಗುತ್ತದೆ."*(5) ಕಾಲೇಜಿನಲ್ಲಿ ಓದುತ್ತಿದ್ದ ಮೀನಾಳಿಗೆ ಆ ಸಮಯದಲ್ಲಿ ಮೆಡಿಕಲ್ ಫೈನಲ್‌ವಿದ್ಯಾರ್ಥಿ ಚೀನಿ ಪರಿಚಯವಾದ. ಅವನು ಆವಳ ಬದುಕಿನೊಳಗೆ ಪ್ರವೇಶಿಸಿದ. ಪ್ರಾಯದ ಸಡಗರದಲ್ಲಿದ್ದ ಮೀನಾಳಿಗೆ ಎರಡು

ದಿನಗಳಲ್ಲಿ ಗೆಳೆಯನಾಗಿ ಬಂದ ಚೀನಿ ಅವಳ ಮೆಚ್ಚಿನ ಹುಡುಗನಾದ. ಆತ ಮೀನಾಳನ್ನು ಕಂಡರೆ ಆಡುತ್ತಿದ್ದುದು ನೋಡಿದ. ಅವನ ಗ್ರಹಿಕೆಯ ರೀತಿಯೇ ಮೀನಾಳಿಗಿಂತ ಬದಲಾಗಿತ್ತು. ಮೀನಾಳಾ ಕ್ಲಾಸ್‌ಮೇಟ್ ರೋಹಿಣಿಯ ಮನೆಯಲ್ಲಿ ಚೀನಿಯ ಪರಿಚಯವಾಯಿತು. ರೋಹಿಣಿ ಇವರಿಬ್ಬರ ಪರಸ್ಪರ ಸ್ಪಂದನವನ್ನು ಊಹಿಸಿದಂತಿತ್ತು ಎಂದೂ ಮತ್ಸರ ಪಡದ ಗೆಳತಿ ರೋಹಿಣಿ ಚೀನಿ ಮತ್ತು ಮೀನಾಳನ್ನು ತನ್ನ ಮನೆಯಲ್ಲೇ ಬಿಟ್ಟು ಮಾತಾಡ್ತೀರಿ ಎಂದು ಹೇಳಿ ಕಾಫಿ ಪುಡಿ ತರಲು ಹೋದಳು. ರೋಹಿಣಿ ಹೋದೊಡನೆ ಮೀನಾಳಿಗೆ ಭಯ ಉಂಟಾಗಿತ್ತು. ಚೀನಿ ಕೂಡಾ ಸಣ್ಣಗೆ ಹೋದೊಡನೆ ಮೀನಾಳಿಗೆ ಭಯ ಉಂಟಾಗಿತ್ತು. ಚೀನಿ ಕೂಡ ಸಣ್ಣಗೆ ನಡುಗುತ್ತಿದ್ದಂತಿದ್ದ. ಅಂದು ಅವಳು ಕೂತಿದ್ದ ಸೋಫಾದ ಮೇಲೆ ತನ್ನ ತೋಳುಗಳನ್ನಿಟ್ಟುಕೊಂಡು ಅವಳತ್ತ ಬಗ್ಗಿ ನೀನು ತುಂಬಾ ಒಳ್ಳೆಯ ಹುಡುಗಿ ಅಂದ. ಇದನ್ನು ಸಹಿಸದ ಮೀನಾಳು ಅವನಿಗೆ ನಿನ್ನ ಮಾತು ಪರಂಪರಾಗತ ಮೋಸದ ನುಡುಕಟ್ಟುಗಳಿಂದ ತುಂಬಿದೆ. ಪ್ರತಿಯೊಬ್ಬ ಹುಡುಗನ ಮಾತನಾಡುವುದು ಹಾಗೆ ಎಂದಳು. ಇದಕ್ಕೆ ಚೀನಿ ಎಷ್ಟು ಜನ ಹುಡುಗರು ನಿನಗೆ ಗೊತ್ತು ಎಂದು ಕೇಳಿದ. ಅವನ ಮಾತಿನಲ್ಲಿ ಮುನಿಸು ಇತ್ತು. ಆಗ ಮೀನ ಇಂತಹ ಮಾತುಗಳನ್ನು ಆಡುವುದು ಪಡ್ಡೆ ಹುಡುಗರು ಮಾತ್ರ ಎಂದು ಹೇಳಿದಳು. ನಾನು ಬಹಳ ನಿಮಂತಹ ಹುಡುಗರನ್ನು ನೋಡಿದ್ದೇನೆ ಎಂದು ಹೇಳಿದಳು. ಆಗ ಚೀನಿ ಮಂಕಾಗಿ ಕುಳಿತ. ಆದರೆ ಇವಳಿಗೆ ಇದಾದ 6 ತಿಂಗಳುಗಳ ನಂತರ ಇವಳಲ್ಲಿ ಒಂದು ರೀತಿಯ ಗೊಂದಲ ಪ್ರಾರಂಭವಾಗಿ ಚೀನಿಯನ್ನು 'ಸಾರಿ' ಹೇಳಬೇಕೆಂದು ಅನ್ನಿಸಿತ್ತು. ಆದರೆ ಅವಳ ಅತ್ಮ ಗೌರವ ಕುಂದು ತರಬಲ್ಲಂಥ ಯಾವ ಕೃತ್ಯವೂ ನನ್ನಿಂದ ಸಾಧ್ಯವಿಲ್ಲವೆಂದು ಸುಮ್ಮನಾದಳು. ಅದರೆ ಅವಳಲ್ಲಿ ಅವನ ಮೇಲೆ ಯಾವ ರೀತಿಯ ಪ್ರೇಮವೂ ಇರಲಿಲ್ಲ. ಒಂದೇ ದಿನದ ಪರಿಚಯದಲ್ಲಿ ಅವೆಲ್ಲಾ ಶುರು ಆಗುವ ಸಂಭವವೂ ಇರಲಿಲ್ಲ. ಅದಾದ ನಂತರ ಚೀನಿಗೆ ಗಂಟಲು ನೋವು ಜ್ವರ ಶುರುವಾಯಿತು ಎಂದು ರೋಹಿಣಿ ಹೇಳಿದಳು. ಅವಳ ಹಾಳದಲ್ಲಿ ಆತನ

ಕಾಯಿಲೆಗೂ ನನ್ನ ಕಟು ವರ್ತನೆಗೂ ಸಂಬಂಧವಿದೆ ಎಂದು ಅವಳಿಗೆ ಅನ್ನಿಸುತ್ತಿತ್ತು. ದಿನಗಳುರುಳಿದಂತೆ ಚೀನಿ ಮೀನಾಳಿಗೆ ಮರೆತು ಹೋದ.

ಇದೆಲ್ಲಾ ನಡೆದ ಮೇಲೆ ಮೀನಾಳಿಗೆ ತನ್ನ ಗೆಳತಿಯಾದ ರೋಹಿಣಿಯ ಅಣ್ಣ ಜಗ್ಗುವಿನ ಪರಿಚಯವಾಯಿತು. ಆತ ತುಮಕೂರಿನಲ್ಲಿ ಚಿಕ್ಕ ಫ್ಯಾಕ್ಟರಿಯೊಂದನ್ನು ಇಟ್ಟುಕೊಂಡಿದ್ದ. ಮಹಾ ಸೈಲೆಂಟ್ ಮನುಷ್ಯ. ಪರಿಚಯವಾದರೆ ಎಲ್ಲರೂ ಆಡುವ ಮಾತುಗಳನ್ನು ಕೂಡ ಆಡದಿರುವ ಮನುಷ್ಯ ರೋಹಿಣಿ ತನ್ನ ಅಣ್ಣ ಪರಿಚಯವನ್ನು ಮೀನಾಳಿಗೆ ಮಾಡಿಸಿಕೊಡುತ್ತಾಳೆ. ಮೀನಾಕ್ಷಿ ಅವರ ತಂದೆ ಬಿ.ಇ.ಎಲ್.ನಲ್ಲಿ ನೌಕರಿಯಲ್ಲಿದರು. ಅಪಘಾತದಲ್ಲಿ ತೀರಿಕೊಂಡರು. ನನ್ನ ಎರಡು ವರ್ಷದ ಒಳ್ಳೆಯ ಗೆಳತಿ ಎಂದು ಪರಿಚಯ ಮಾಡಿಕೊಟ್ಟಳು. "ನೋಡುತ್ತಲೇ ಇದ್ದ ಅವನ ಕಣ್ಣು ಚಿರತೆಯ ಕಣ್ಣಿನಂತೆ ಹೊಳೆಯುತ್ತಿದ್ದವು. ಮ್ಯಾಗ್ನೇಟ್ ರೀತಿಯಲ್ಲಿ ಸೆಳೆಯುತ್ತಿದ್ದವು. ನಾನು ನಮಸ್ಕಾರ ಎಂದು ಕೂಡಾ ಹೇಳಲು ಮರೆತೆ ಅವನ ಕಣ್ಣುಗಳಿಂದ ತಪ್ಪಿಸಿ ಕೂತೆ".*(7) ಅವನು ಮೋಟಾಅರ್ ಸೈಕಲ್ ಮೇಲೆ ವೇಗವಾಗಿ ಚಲುಸುವುದು ಪ್ರಾಣದ ಹಂಗಿಲ್ಲದಂತೆ ಹೊಡೆದಾಡುವುದು. ಇದರಿಂದ ಅವನ ಎದುರು ನಿಲುವವರೆ ಇರಲಿಲ್ಲವಂತೆ. ಆದರೆ ಮೀನಾಳ ಮನಸ್ಸಿನ ಮೇಲೆ ಜಗ್ಗು ಕೂಡಾ ಚೀನಿಯಂತೆಯೇ ಮನಸ್ಸಿನ ಪರದೆಯ ಮೇಲೆ ಮಾಸತೊಡಗಿದ ಎಂದು ಮಿನಾಳು ಚೀನಿ ಒಳ್ಳೆಯವನೋ ಜಗ್ಗು ಒಳ್ಳೆಯವನೋ ಎಂಬ ಪ್ರಶ್ನೆಗಳು ಅವಳಲ್ಲಿಯೇ ಮೂಡಿದವು.

ಹೀಗಿದ್ದಾಗ ಒಂದು ದಿನ ಮೀನಾಳಿಗೆ ಜಗ್ಗು ಬಸ್‌ಸ್ಟಾಪಿಗೆ ಹೋಗುವಾಗ ದಾರಿಯಲ್ಲಿ ಸಿಕ್ಕಿದ. ತನ್ನ ಎನ್‌ಫೀಲ್ಡರ್ ಮೋಟರ್ ಬೈಕ್‌ಗೆ ಸ್ಟಾಂಡ್ ಹಾಕಿ ಮೀನಾಳ ಬಳಿ ಬಂದು ತನ್ನ ಮೃಗದ ದೃಷ್ಟಿ ನೆಟ್ಟು ಬನ್ನಿ ಅಂದ. ಮೀನಾ ಆಗ

ಕಾಲೇಜಿಗೆ ಹೋಗಬೇಕು ಎಂದಳು. ಆಗ ಜಗ್ಗು ಮೆಲ್ಲಗೆ ತಲೆ ಆಡಿಸಿದ. ನಾನು ಅವನ ಮೋಟಾರ್‌ಬೈಕನ್ನು ಏರಿದೆ. ಜಗ್ಗು ಯಾವ ಕಾಲೇಜು ಎಂದು ಕೇಳಲಿಲ್ಲ. ಅವನಿಗೆ ಗೊತ್ತಿದಂತ್ತಿತ್ತು. ಕಾಲೇಜಿನ ಅಂಗಳಕ್ಕೆ ತನ್ನ ವಾಹನವನ್ನು ನಿಲ್ಲಿಸಿ ಸರಿ ಆಮೇಲೆ ನೋಡುತ್ತೀನಿ ಎಂದು ಹೊರಟು ಹೋದ.

"ಜಗ್ಗು ತರಹದವರು ಅಪಾಯಕರ ವ್ಯಕ್ತಿಗಳು, ಯಾಕೆಂದರೆ ಅವರು ಹೆಣ್ಣು ಬಯಸುವ ಮೌನ, ದಿಟ್ಟತನ, ಕಠೋರತೆಯ ಜೊತೆಗೆ ಮೃದುತ್ವವನ್ನು ಆಗಾಗ ಸೂಸುವರು"*(8). ಒಂದು ದಿನ ಭಾನುವಾರ ಬಸ್ ಸ್ಟಾಪಿಗೆ ತನ್ನ ಗೆಳತಿಯರ ಮನೆಗೆ ಹೋಗುವುದೆಂದು ತೀರ್ಮಾನಿಸಿದ್ದಳು. ಆದರೆ ಜಗ್ಗು ಅವಳ ಪಕ್ಕದಲ್ಲಿ ಮೋಟಾರ್ ಬೈಕ್ ನಿಲ್ಲಿಸಿ ಬನ್ನಿ ಎಂದ. ಅವನ ನಿಷ್ಠೂರವಾದ ಮುಖ ನೋಡಿ ಮೀನ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಮೀನ ಅವನ ಮೋಟಾರ್ ಬೈಕ್ ಹತ್ತಿ ಕೂತೇ ಬಿಟ್ಟಳು. ಅವನ ಭುಜದ ಮೇಲಿದ್ದ ಮೀನಾಳ ಕೈ ರೋಮಾಂಚನದಿಂದ ತನ್ನ ಶಕ್ತಿಯನ್ನೆಲ್ಲಾ ಕಲೆತುಕೊಂಡಿತ್ತು. ಎಲ್ಲಿಗೆ ಜಗ್ಗು ಎಂದು ಕೇಳಿದಳು ಜಗ್ಗು ಉತ್ತರಿಸಲಿಲ್ಲ. ಕೊನೆಗೆ ಊರ ಹೊರಗೆ ಸೇತುವೆಯ ಹತ್ತಿರ ನಿಲ್ಲಿಸಿದ ಇಳಿ ಎಂದ ಕೂಡ ಆತ ಹೇಳಲಿಲ್ಲ. ಮೀನಾ ಇಳಿದು ಅವನಿಗೆ ತಾಕುವಂತೆ ನಿಂತಳು. ಜಗ್ಗು ಮೀನಾಳ ತೋಳನ್ನು ಹಿಡುಕೊಂಡು ಮುತ್ತು ಕೊಟ್ಟ. ಇಡೀ ಮುಖ, ಕಣ್ಣು, ತುಟಿ.. ನಾ ಅವಳು ಸವಿದ ಮೊದಲ ಚುಂಬನ ಅದು. ಮೀನಾ ಹೋಗೋಣ ಎಂದಳು. ಜಗ್ಗು ಸುಮ್ಮನೆ ನಿಂತ ಅವನ ಮೈ ಕೆಂಡಾವಾಗಿತ್ತು. ನಂತರ ಮೀನಾಳು ಚೀನಿ ಮತ್ತು ಜಗ್ಗುವಿನ ಹತ್ತಿರ ಮದುವೆಯ ಬಗ್ಗೆ ಮಾತನಾಡುವುದು ಸಾಧ್ಯವಿರಲಿಲ್ಲ. ರೋಹಿಣಿ ನಿನಗೆ ಕಷ್ಟವಾದರೆ ನಾನೇ ಕೇಳುತ್ತೇನೆ ಎನ್ನುತ್ತಾಳೆ. ಆದರೆ ಮೀನಾ ತನ್ನ ಅಮ್ಮನಿಗೆ ಬರುತ್ತಿದ್ದ ಪೆನ್‌ಶನ್ ಮೇಲೆ ಭಾರವಾಗಿ ಬಹಳ ವರ್ಷ ಇದ್ದು ಬಿಡುವುದು ಸಾಧ್ಯವಿಲ್ಲ. ಆಗ ಜಗ್ಗು, ಚೀನಿ ನನ್ನ ಸಂಗಾತಿಗಳಾಗಳಾಗಳು

ಸಾಧ್ಯವಿರಲಿಲ್ಲ. ನಂತರ ಒಂದು ದಿನ ಮೀನಾಳ ಅಮ್ಮ ಅವಳಿಗೆ ವಿಶ್ವನಾಥ್ ಎಂಬುವವರು ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಾರೆ ಅವರು ಎಳೆ ವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡಿದ್ದಾರೆ. ನೀನು ಒಮ್ಮೆ ಅವರನ್ನು ನೋಡು ಅಂದಳು. ಮೀನಾಳ ಅಮ್ಮ ನಂತರ ವಿಶ್ವನಾಥ್‌ನ ಜೊತೆ ಮೀನಾಳ ಮದುವೆ ಆಗುತ್ತೆ. ಮೀನಾಳ ಪತಿ ವಿಶ್ವನಾಥ್ ಅನೇಕ ವಿಷಯಗಳಲ್ಲಿ ತನ್ನ ಚಿಂತನೆ, ವ್ಯಥೆಯನ್ನು ಪಾಲ್ಗೊಳ್ಳುವ ವ್ಯಕ್ತಿ. ಅವರ ನಿಷ್ಠೆ, ಹಾಸ್ಯ ಎಲ್ಲವೂ ಮೋಹಕವಾಗಿತ್ತು. ಒಂದು ದಿನ ವಿಶ್ವನಾಥ್ ಕಾಲೇಜಿಗೆ ಹೋದ ಮೇಲೆ ಒಬ್ಬಳೇ ಓದುತ್ತಾ ಕುಳಿತಿದ್ದಳು. ಅವಳಿಗೆ ನಾನು ಎಷ್ಟು ಸುಖಿ ಎಂದು ಅನ್ನಿಸತೊಡಗಿತ್ತು. ಆದರೆ ಬಾಗಿಲು ಬಡಿದ ಸದ್ದು ಕೇಳಿ ಬಂತು. ಬಾಗಿಲನ್ನು ತೆಗೆದಾಗ ಜಗ್ಗು ನಿಂತಿದ್ದ. ಮೀನಾಳಿಗೆ ಜಗ್ಗುವನ್ನು ನೋಡಿದಾಕ್ಷಣ ಮೈಯಲ್ಲಿ ತೀವ್ರ ನಡುಕ ಆವರಿಸಿತು. ಮೀನಾಳಲ್ಲಿ ವಿಚಿತ್ರ ಪ್ರೇಮ ಕರುಣೆ ತುಂಬಿತ್ತು. ಜಗ್ಗು ಒಲಗೆ ಬಂದು ಅವಳನ್ನು ಅಪ್ಪಿಕೊಂಡ "ಮನುಷ್ಯನ ವಿವೇಕ ಎರಡು ಪಾಲು, ಅವಿವೇಕ ಎಂಟು ಪಾಲು. ನಮ್ಮ ಜಗತ್ತಿನ ಎಲ್ಲ ಪ್ರೇಮ, ಸಾಹಿತ್ಯ, ಸಾಹಸ ಬಂದಿರುವುದು ಎಂಟು ಪಾಲಿನಿಂದ *(9) ಅವತ್ತಿನಿಂದ ಜಗ್ಗು ನಾಲ್ಕು ಬಾರಿ ಬಂದ ಆತ ಬಂದು ಹೋದ ದಿನದಂದು ಮೀನಾಳಿಗೆ ತನ್ನ ಪತ್ನಿ ವಿಶ್ವನಾಥರನ್ನು ನೋಡುವುದು ಕಷ್ಟಾವಾಗುತ್ತಿತ್ತು. ಮೀನಾಳ ತನ್ನ ಈ ಸ್ವಭಾವಗಳು ಅವಳಿಗೆ ತಪ್ಪು ಎಂದು ಅರಿವಾಗುತ್ತದೆ. ಏಕೆಂದರೆ ತನ್ನ ಗಂಡನಾದ ವಿಶ್ವನಾಥನು ಅವಳನ್ನು ಒಂದು ಮಗುವಿನಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿರುತ್ತಾನೆ. ಆದರೆ ತನ್ನ ಮಾಗಿದ ಮನಸ್ಸಿನಲ್ಲಿ ಅನುಭವಿಸುವ ತಳಮಳ ವಿಚಿತ್ರ ಇಷ್ಟಾದರೂ ಜಗ್ಗುವಿಗೆ ಮೀನಾ ಬೇಡ ಅನ್ನಲಾಗಲಿಲ್ಲ. ವಿಶ್ವನಾಥ್ ಕಾಲೇಜಿಗೆ ಹೋದೊಡನೆ ತಾನೇ ತನ್ನ ಮನೆಗೆ ಬೀಗ ಹಾಕಿ ಆ ಬೀಗದ ಕೈಯನ್ನು ಜಗ್ಗುವಿಗೆ ಕೊಟ್ಟು ಕರೆದುಕೊಳ್ಳುತ್ತಿದ್ದಳು. ಇಂತಹ ಗುಣವುಳ್ಳವಳಾದ ಮೀನಾಳಿಗೆ ಜೀವನದಲ್ಲಿ ತನ್ನ ಬಗ್ಗೆ ಜಿಗುಪ್ಸೆಗೊಂಡು ತಾನು A

suicide note ಬರೆದಿಟ್ಟು ಅದರಲ್ಲಿ ಅವಳ ಜೀವನದಲ್ಲಿ ನಡೆದ ದುರಂತ ಘಟನೆಗಳನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಈ ಕತೆ೦ಯನ್ನು ನೋಡಿದಾಗ ಪಿ. ಲಂಕೇಶ ಅವರು ಹೆಣ್ಣಿನ ತ್ಯಾಗ, ಹೆಣ್ಣಿನ ಆಸೆ, ಆಕಾಂಕ್ಷೆ ತುಮುಲಗಳನ್ನು ತನ್ನ ಲೈಂಗಿಕ ಈಡೇರಿಕೆಗಾಗಿ ಅವಳು ನಡೆಸಿದ ಕೆಲವು ಕುತಂತ್ರಗಳನ್ನು ಮತ್ತು ಹೆಣ್ಣಿನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲಾಗದೆ ಸಮಜದ ಕಟ್ಟುಪಾಡುಗಳಿಗೆ ಸಿಲುಕಿ ಸಾವಿನಲ್ಲಿ ತಮ್ಮ ಜೀವನದ ಅಂತ್ಯವನ್ನು ಕಂಡುಕೊಳ್ಳುವುದನ್ನು ಪಿ. ಲಂಕೇಶ್‌ರವರು ತಮ್ಮ ಕಥೆ೦ಯಾದ ಮಂಜು ಕವಿದ ಸಂಜೆ ಮತ್ತು ಇತರ ಕತೆಗಳಲ್ಲಿ ಬರುವ A suicide note ಕಥೆ೦ಯಲ್ಲಿ ಸ್ತ್ರೀ ಪಾತ್ರವಾದ ಮೀನಾಕ್ಷಿ೦ಯು ತನ್ನ ಗಂಡಾನ ಮನಸ್ಸಿನಲ್ಲಿ ಮತ್ತು ಪ್ರಿ೦ಯಕರರ ಮನಸ್ಸಿನಲ್ಲಿ ಹೇಗೆ ಚಿತ್ರಿತವಾಗುತ್ತಾಳೆ ಎಂಬುದನ್ನು ಇವರ ಈ ಕತೆ೦ಯಲ್ಲಿ ಕಾಣಬಹುದಾಗಿದೆ.

ಲಂಕೇಶರ ಮತ್ತೊಂದು ಪ್ರಮುಖ ಕತೆ೦ಯಾದ 'ಕಲ್ಲು ಕರಗುವ ಸಮ೦ಯ'ದಲ್ಲಿ ಹುಡುಗಿ೦ಯೊಬ್ಬಳ ದಿಟ್ಟ ನಿರ್ಧಾರ ಕ್ರಮಗಳಿಂದ ಜಾತೀ೦ಯತೆ೦ಯೆಂಬ ಕಲ್ಲು ಕೂಡಾ ಕರಗುವ ಪ್ರಕ್ರಿ೦ಯೆ೦ಯನ್ನು ಕಾಣಬಹುದು. ಇಡೀ ಸಮುದಾ೦ಯವು – 'ವೀರಾವೇಶದಿಂದ ಮಾರಾಮಾರಿ೦ಯ ಊರು ಆಗಿದ್ದಿತು. ಕಥೆಗಾರರೇ ಸೂಚಿಸುವಂತೆ ಕಥೆ೦ಯ ನಾ೦ಯಕಿ೦ಯಾದ ಶ್ಯಾಮಲಾಳನ್ನು ಬೇರೊಂದು ದೃಷ್ಟಿಯಿಂದ ನೋಡಿದ್ದಾರೆ. ಆಕೆ೦ಯ ಪರೆ೦ಯ ಉಕ್ಕುತ್ತಿದ್ದಂತೆ ಗೆಳತಿ೦ಯರೊಂದಿಗೆ ಕೇದಿಗೆ ಬನಕ್ಕೆ ಹೋದವಳೆ" ಹುಡುಗರು ದೂರದಿಂದಲೇ ಕಿಚಾಯಿಸುತ್ತಿದರು. ಪರಿಚ೦ಯ

ಮಾಡಿಕೊಳ್ಳಲು ೦ಯತ್ನಿಸುತ್ತಿದ್ದರು. ಆಗ ತಾನೇ ಕಾಲೇಜು ಮೆಟ್ಟಿಲು ಹತ್ತಿದ್ದ ಶ್ಯಾಮಲ ಮನಸ್ಸಿನಲ್ಲಿ ಆಸೆ ತುಂಬಿದ್ದರೂ ಭ೦ಯದಿಂದ ಕೇದಿಗೆ ಬನಕ್ಕೆ ನಮಸ್ಕಾರ ಹೇಳಿದ್ದಳು.*(6) ೦ಯೌವ್ವನದ ಆಸೆ –ಆಕಾಂಕ್ಷೆಗಳಿದ್ದರೂ ಕೂಡಾ ತೀರಿಸಿಕೊಳ್ಳಲಾಗದೆ ಹತ್ತಿಕ್ಕಿದ್ದಳು. ಆದರೆ ಕಮ್ಮಟವೊಂದು ತನ್ನ ವ್ಯಕ್ತಿತ್ವವನ್ನು ಬದಲಾಯಿಸಿತು. ಇದರಿಂದ ಆಕೆಗೆ ಹೊಸ ಜೀವಂತಿಕೆ೦ಯ ಕ್ರಿ೦ಯಾತ್ಮಕ ಚಟುವಟಿಕೆಗಳನ್ನು ಮೂಡಿಸಿ ಸವಾಲನ್ನು ಎದುರಿಸುವ ಶಕ್ತಿ ಬಂದಿತು.

ಶ್ಯಾಮಲ ದಿಟ್ಟತನದಿಂದ ತಿಪ್ಪಣ್ಣನನ್ನು ಮದುವೆ ಆಗುವುದಾಗಿ ಒಪ್ಪಿಕೊಳ್ಳುತ್ತಾಳೆ. ಅವಳ ದಿಟ್ಟತನವೇ ಎಲ್ಲರ ಎದುರು ನೇರವಾಗಿ ತನ್ನ ಪ್ರೀತಿಗಾಗಿ ಪ್ರತಿಭಟನೆ ಮಾಡುತ್ತಾಳೆ. ಇವಳು ಮಾಡುವ ಪ್ರತಿಭಟನೆ೦ಯು ಪ್ರೀತಿ೦ಯ ಮೂಲಕ ಎಲ್ಲವನ್ನು ಗೆಲ್ಲುವನೆಂಬ ಹಠ. ಶ್ಯಾಮಲ ಮನೆ ಮತ್ತು ವ್ಯವಸ್ಥೆ೦ಯ ಎದುರು ನಿಂತು ಇದರ ಮೂಲಕವೇ ಮಾರಾಮಾರಿ೦ಯ ಊರಾದ ಅಮೃತಾಂಬುಧಿಗೆ, ವ್ಯವಸ್ಥೆ೦ಯನ್ನು ಜಾತೀ೦ಯತೆ೦ಯನ್ನು ಕರಗಿಸಿಬಿಡುತ್ತಾಳೆ. “ಬಂಡೆ೦ಯ ಸಂಧಿ೦ಯಲ್ಲಿ ಮರ ಬೇರೆ ಬಿಟ್ಟಂತೆ, ಬೇರು ಬಿಟ್ಟು ಬಂಡೆ೦ಯನ್ನು ಒಡೆದಂತೆ ಎಳೆ೦ಯ ಹೆಣ್ಣಿನಲ್ಲಿ ಹೊಸ ಜೀವನ ಮೊಳತಂತೆ ಮೊಳೆತು ಅವುಗಳನ್ನು ಅಲ್ಲಾಡಿಸಿದಂತೆ ಅಥವಾ ಪರಂಪರಾನುಗತ ಬದುಕಿನಲ್ಲಿ ಮುಳುಗಿದವ ಸ್ಪಷ್ಟವಾದ ಆಚರಣೆಗಳಲ್ಲಿ ಬಂಧಿಸಲ್ಪಟ್ಟವು. ಒಂದು ದಿನ ಪೂರ್ಣ ನೀಲಿ ಆಕಾಶ ಬೆಳ್ಳಕ್ಕಿಗಳ ಹಿಂಡು ಅದರೊಂದಿಗೆ ಅನಂತತೆ೦ಯ ಕಾಣ್ಕೆ ಕಂಡಂತೆ”(10) ಶ್ಯಾಮಲಾಳ ಈ

ಕ್ರಿಯೆ ಇಡೀ ಜಡ ವ್ಯವಸ್ಥೆಯನ್ನು ಸಂಘರ್ಷದ ಊರನ್ನು, ಪ್ರೀತಿಯ ಮರವು ನೆಟ್ಟಂತೆ ನೆಡಲ್ಪಟ್ಟಿತು.

ನಂತರ ಕಥೆಯನ್ನು ಚಿತ್ರಿಸಿರುವ ರೀತಿ ವಿಶಿಷ್ಟವಾದದ್ದು. "ತಿಪ್ಪಣ್ಣನ ಬಗ್ಗೆ ವಿಚಿತ್ರದೊಂದು ವಿಷಯ ತಿಳಿಯಿತು. ಒಂದು ದಿನ ಆತನೇ ಹೇಳಿದ. ಆಗೋಲ್ಲ ನನ್ನಿಂದ ಆಗೋಲ್ಲ. ಅಂದರೆ ತಿಪ್ಪಣ್ಣ ಷಂಡನಂತೆ ಆಗಿದ್ದ. ಇದನ್ನು ಕೇಳಿದ ಶ್ಯಾಮಲ ಗಟ್ಟಿಯಾಗಿ ನಕ್ಕಿದ್ದಳು. ಹೊಟ್ಟೆ ಹಿಡಿದುಕೊಂಡು ನಕ್ಕಿದ್ದಳು.*(11) ಹಾಗೆಂದರೇನೆಂದು ಕೇಳಿದ್ದಳು. ಇಂತಹ ಸೂಕ್ಷ್ಮವಾದ ವಿಚಾರವಲ್ಲಿ ಶ್ಯಾಮಲಾಳ ಈ ನಗುವು ತುಂಬಾ ವಿಚಿತ್ರವೆನಿಸುತ್ತದೆ.

ಆದರೆ ಇವಳ ನಗುವಿನ ಹಿಂದೆ ಅನೇಕ ರೀತಿಯ ಅರ್ಥಗಳು, ಸೂಕ್ಷ್ಮಗಳು, ಸತ್ಯಗಳು ಇರುವುದನ್ನು ತಿಳಿಯಬಹುದು. ತೀವ್ರವಾದ ಸಂಘರ್ಷ, ಸಂಪ್ರದಾಯ, ಪರಂಪರೆಯಲ್ಲಿನ ಪುರಾಣಗಳು ಹೇರಿದ ನಿರ್ಬಂಧಕ್ಕೆ ಒಳಗಾದ ಶ್ಯಾಮಲ ಅಷ್ಟೇ ತೀವ್ರವಾದ ಪ್ರೀತಿ, ನೇರವಾದ ನುಡಿಯಿಂದಾಗಿ ಹೊಸ ರೀತಿಯ ಹೆಣ್ಣಾಗಿ ಜಾತಿ ಪದ್ಧತಿಗೆ ಎದುರಾಗಿ ನಿಂತು ಅದನ್ನು ಸಮರ್ಥವಾಗಿ ನಿಭಾಯಿಸಿದವಳಾಗಿ ಕಂಡು ಬರುತ್ತಾಳೆ.

ಲಂಕೇಶರ ಕಥೆಗಳನ್ನು ಒಟ್ಟು ಸ್ತ್ರೀ-ದೃಷ್ಟಿಕೋನದಿಂದ ನೋಡಿದಾಗ ಅನಿಸೋದು ಲಂಕೇಶರೇ ಒಂದು ರೀತಿಯ 'ಹೆಣ್ಣಿನ' ವ್ಯಕ್ತಿತ್ವವಾಗಿ ಬರೆಯುತ್ತಾರೆ ಎನ್ನಬಹುದು. ಗಂಡು ಹೆಣ್ಣಿನ ಬಗೆಗಿನ ವ್ಯಾಮೋಹ, ಆಕ್ರಮಣ ಶೀಲತೆ, ಪರಪೀಡನೆ, ಮುಂತಾದವುಗಳನ್ನು

ಸ್ಟೆಲ್ಲಾಳು ತನ್ನ ಗಂಡ, ಪ್ರಿಯಕರ, ಇಬ್ಬರನ್ನು ದೂರ ಕಳುಹಿಸಿ ಬಿಕ್ಕುವುದನ್ನು ಕಾಣಬಹುದು. ಸ್ಟೆಲ್ಲಾಳ ಈ ಬಿಕ್ಕುವಿಕೆ, 'ಕಣ್ಮರೆ'ಯಲ್ಲಿ ಭ್ರಮರ, ಸಾವಿತ್ರಿ, ಪಚ್ಚಮ್ಮರು ಅನುಭವಿಸಿದ ಸೋಲು ಹತಾಶೆಗಳು ಕಂಡು ಬಂದರೆ, ದೇವಿಯಲ್ಲಿ ಸುಭದ್ರಾ ಬೇರೊಂದು ರೀತಿಯಲ್ಲಿ ಸಾರ್ಥಕ ಪಡೆಯುವುದನ್ನು ಕಾಣಬಹುದು.

ಹೆಣ್ಣಿನ ಇಂತಹ ವಿಷಯ ಸ್ವರೂಪದ ಗ್ರಹಿಕೆಯೂ ಕೂಡಾ ಅವರೇ ಅನುಭವಿಸುವ, ಮಂಡಿಸುವ ಕ್ರಮ ಮಾನವತಾವದ ಮತ್ತು ಪ್ರೀತಿಯ ಫಲವಾದ ಹೃದಯ ಪರಿವರ್ತನೆಯ ನೆಲೆಯಲ್ಲಿಯೇ ಬದುಕಿನ ಸುಖಗಳ ಬಗೆಗೆ ತೆರೆದ ಮನಸ್ಸು, ಆತ್ಮ ಗೌರವ ಮತ್ತು ಕ್ಷುಲ್ಲಕವೆನಿಸುವುದರ ಬಗ್ಗೆ ತಿರಸ್ಕಾರಾವನ್ನು ಕಾಣಬಹುದು.

ಹೆಣ್ಣಿನ ತ್ಯಾಗ ಪರತೆಗೆ ಒತ್ತುಕೊಡುತಿದ್ದ, ಪಾರಂಪರಿಕ ಮಹಿಳೆಯರಿಗಿಂತ ಭಿನ್ನವಾಗಿದ್ದರೂ ಕೂಡಾ ಜೀವಂತಿಕೆಯ ಚೈತನ್ಯದ ಪೋಷಣೆಯ ಕೇಂದ್ರಗಳಾಗಿವೆ. ಇಂತಹ ನಿರ್ದೇಶನವೆಂದರೆ ಧಾಳಿ ಕಥೆ ಕಾಣಬಹುದು. "ಸ್ತ್ರೀಯರ ಬದುಕನ್ನು ಕೇಂದ್ರವಾಗಿರಿಸಿಕೊಂಡಾ ಇವರು ಬರವಣಿಗೆಯ ಮೂಲಕ ಅವಳು ತ್ಯಾಗದಿಂದಲೇ ದೊಡ್ಡವಳಾಗಬೇಕೆಂದು ನಿರೀಕ್ಷಿಸುವುದಿಲ್ಲ ಬದಲಿಗೆ ಹೆಂಗಸಿನಲ್ಲಿರುವ ಲೈಂಗಿಕತೆಯನ್ನು ಗುರುತಿಸುತ್ತಾ ಅದನ್ನು ಒಪ್ಪುತ್ತಲೇ ಅವಳ ಎತ್ತರವನ್ನು ಗುರುತಿಸುವುದು

ಅವರ ವಿಶೇಷ. ಲಂಕೇಶರು ಆ ಕ್ಷಣದಲ್ಲಿ ಅನ್ನಿಸುವುದನ್ನು ಹೇಳುವ ಸಂದರ್ಭಗಳಿಂದಾಗಿ0ಯೇ ಹೆಚ್ಚು ಪ್ರಸ್ತುತವೆನಿಸುತ್ತಾರೆ.

ಅಡಿ ಟಿಪ್ಪಣಿಗಳು:

1) ಪಿ. ಲಂಕೇಶರ ಸಮಗ್ರ ಕಥೆಗಳು – ಪುಟ 71
2) ತಲೆಮಾರಿನ ತಳಮಳ – ಗಂಗಾಧಾರ ಕುಷ್ಟಗಿ
3) ಪಿ. ಲಂಕೇಶರ ಸಮಗ್ರ ಕಥೆಗಳು – ಪುಟ 366
4) ಪಿ. ಲಂಕೇಶರ ಸಮಗ್ರ ಕಥೆಗಳು – ಪುಟ 377
5) ಮಂಜು ಕವಿದ ಸಂಜೆ ಮತ್ತು ಇತರೆ ಕಥೆಗಳು ಪುಟ – 13
6) ಲಂಕೇಶರ ಸಮಗ್ರ ಕಥೆಗಳು, ಪುಟ – 375.
7) ಮಂಜು ಕವಿದ ಸಂಜೆ ಮತ್ತು ಇತರೆ ಕಥೆಗಳು, ಪುಟ 15
8) ಮಂಜು ಕವಿದ ಸಂಜೆ ಮತ್ತು ಇತರೆ ಕಥೆಗಳು, ಪುಟ 16 ಮತ್ತು 19
9) ಪಿ. ಲಂಕೇಶರ ಸಮಗ್ರ ಕಥೆಗಳು – ಪುಟ 376

ಅಧ್ಯಾಯ – 8

ಉಪಸಂಹಾರ ಅಥವಾ ಸಮಾರೋಪ / ಫಲಿತಗಳು

ಲಂಕೇಶರು ನನಗೆ ವೈಯುಕ್ತಿವಾಗಿ ಇಷ್ಟವಾಗುವುದು ಅವರ ಆತ್ಮಕಥೆಯಾದ 'ಹುಳಿಮಾವಿನ ಮರ'ದ ಕಾರಣಕ್ಕಾಗಿ. ಅವರ ವ್ಯಕ್ತಿತ್ವದಲ್ಲಿ ಪ್ರಾಮಾಣಿಕತೆ, ನಿರಂತರ ಚಡಪಡಿಕೆ, ನೇರ ಸ್ವಭಾವದ ವ್ಯಕ್ತಿತ್ವ, ಅಧಿಕಾರವನ್ನು ನಂಬದ ಮತ್ತು ಆ ಕ್ಷಣದಲ್ಲಿ ಅನಿಸಿದ ಸತ್ಯಗಳನ್ನು ಹೇಳುವಂತಹದಕ್ಕೆ ಇದು ಅವರು ತಮ್ಮ ಬರಹಗಳಲ್ಲಿ ಸೃಜನಶೀಲತೆಯನ್ನು ವ್ಯಕ್ತಗೊಳಿಸುತ್ತಾ ಹೋಗಿದ್ದಾರೆಂದು ನನ್ನ ನಂಬಿಕೆ ಮತ್ತು ಅವರಲ್ಲಿನ ಸಿಟ್ಟು ವ್ಯಗ್ರತೆ, ಕೋಪ, ಆವೇಶ ನನ್ನನ್ನು ದಂಗು ಬಡಿಸಿವೆ. ಇದು ಅವರ ಕಥೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಹೇಳುತ್ತಿರುವುದು.

ನಾವು ಯಾವುದನ್ನು ಪ್ರಾಮಾಣಿಕವೆಂದು, ಸತ್ಯವೆಂದು ಸಂಬಂಧಗಳ ಗಟ್ಟಿತನವನ್ನು, ಆದರ್ಶವೆಂದು ಭಾವಿಸಲಾಗುತ್ತಿದ್ದೇವೆಯೋ ಅವೆಲ್ಲವನ್ನು ಭಗ್ನಗೊಳಿಸುವಂತದ್ದು. ಅವರ ಕಥೆಗಳಲ್ಲಿನ ವಿಶಿಷ್ಟತೆ ಮುಖ್ಯವಾಗಿ ಮಾನವ ಸಂಬಂಧಗಳ ಬಗೆಗಿನ ಡೊಂಗಿತನವನ್ನು ಜರಿಯುವುದು ಅವರ ಮರೆಯಲಾಗದ ನೆಲ ಎಂಬ ಕಥೆಯಲ್ಲಿನ ವಿಶ್ವನಾಥನು ತಂಗಿಯೆಂದು ಕರೆಯುವ ಸಾವಂತ್ರಿಯನ್ನು ಮೋಹಿಸುವ 'ದಾಹ' ಕತೆಯಲ್ಲಿನ ನಾಯಕ ತಲ್ಲಣ ಮತ್ತು ಮತ್ತೊಂದು ಕಥಾ ಸಂಕಲನವಾದ ಉಲ್ಲಂಘನೆ ಮತ್ತು

ಇತರ ಕಥೆಗಳಲ್ಲಿ ಬರುವ ಚಂದ್ರೇಗೌಡರಿಗೆ ಬಿದ್ದ ಕನಸಿನಲ್ಲಿ ಚಂದ್ರೇಗೌಡ ಮಗಳು ಎಂದು ಕರೆಯುವ ಮನೆಯಾಳನ್ನು ಕೂಡುವುದನ್ನು ಕಾಣಬಹುದು.

ಇಲ್ಲೆಲ್ಲಾ ಮನುಷ್ಯ ಸಂಬಂಧಗಳ ಛಿದ್ರೀಕರಣವನ್ನು ಹೇಗೆ ಮಾನವ ಮೂಲ ಪ್ರವೃತ್ತಿಗಳು ನಿರಂತರವಾಗಿ ಆತಂಕಕ್ಕೀಡು ಮಾಡುವುದು ಕಂಡು ಬಂದಿದೆ.

ಕಾಮ, ರೋಗ, ಜೂಜು, ಈ ಮೂರು ಲಂಕೇಶರ ಒಟ್ಟು ಬರವಣಿಗೆಯಲ್ಲಿ ಮತ್ತೆ ಮತ್ತೆ ಭಿನ್ನ ರೀತಿಯಲ್ಲಿ ಕಂಡು ಬಂದಿದೆ. ಇದರ ಜೊತೆಯಲ್ಲಿ ಈ ಕಥೆಗಳಲ್ಲಿ ಕಂಡು ಬರುವ ಮತ್ತೊಂದು ಮುಖ್ಯ ಅಂಶವೆಂದರೆ ಮನುಷ್ಯನ ವಿವಿಧ ಮುಖಗಳು ಬಹುಶಃ ಕನ್ನಡ ಕಥಾ ಸಾಹಿತ್ಯದಲ್ಲಿ ಇವರಷ್ಟು ವೈವಿಧ್ಯಮಯವಾಗಿ ಸಮಾಜದ ಎಲ್ಲಾ ವರ್ಗಗಳ ಜನರನ್ನು ಇಷ್ಟು ತೀವ್ರವಾಗಿ ಚಿತ್ರಿಸಿದ್ದು ಕಂಡು ಬರುವುದಿಲ್ಲ. ಇಲ್ಲಿನ ಕಥೆಗಳಲ್ಲಿ ಬರುವ ಡಾಕ್ಟರ್, ಉಪನ್ಯಾಸಕ, ಹುಡುಗಿ, ಹುಡುಗ, ಸಾಹಿತಿ, ರಾಜಕಾರಣಿ, ಶಿಕ್ಷಕ, ಹಜಾಮ, ರೋಗಿ ನರ್ಸು, ಕ್ರಾಂತಿಕಾರರು ಹಳ್ಳಿಯ ಮುಗ್ಧರು, ಕೆಲಸಗಾರರು, ಧರ್ಮದ ಗುರುಗಳು ಹೀಗೆ ಹಲವು ವರ್ಗಗಳ ತೀವ್ರವಾದ ತೀವ್ರ ಪಾತ್ರಗಳು ಪರಿಕ್ಷೆಗೆ ಗುರಿಯಾಗಿದ್ದಾರೆ.

ಜೀವನದಲ್ಲಿ ಯಾವುದು ಮುಖ್ಯವೆಂಬುದರ ಬಗೆಗಿನ ತೀವ್ರ ಕುತೂಹಲವನ್ನು ಇಟ್ಟುಕೊಂಡವರಾಗಿದ್ದಾರೆ ಮತ್ತು ಇಲ್ಲಿ ಹಣ, ಜಾತಿ,

ಧರ್ಮ, ಲಿಂಗ, ಹಾದರ, ಸತ್ಯ, ಕಪಟತನ, ಜೂಜು, ಎಲ್ಲವನ್ನೂ ತೀವ್ರವಾಗಿ ವಿಮರ್ಶೆಗೆ ಗುರಿಮಾಡಿದಂತಿದೆ.

ಕಥೆಗಾರರಾಗಿ ಲಂಕೇಶರು ಇಷ್ಟವಾಗುವುದು ಇಂತಹ ಸಂಕೀರ್ಣ ಸ್ಥಿತಿಯಲ್ಲಿಯೇ. 'ಕಲ್ಲು ಕರಗುವ ಸಮಯದಲ್ಲಿನ' ತಿಪ್ಪಣ್ಣನ ಷಂಡತನವನ್ನು ಒಪ್ಪಿ, ಸುಖವಾಗಿರಲು ಪ್ರಯತ್ನಿಸುವ ಶ್ಯಾಮಲಳಂತಹವರ ಬದುಕು, 'ರೊಟ್ಟಿ' ಕತೆಯ ಆಕೆಯಲ್ಲಾದ ಬದಲಾವಣೆಯ ಮನಸ್ಸು, 'ಧಾಳಿ' ಕತೆಯಲ್ಲಿ ಮಲ್ಲಿ 'ಸಹಪಾಠಿ' ಕತೆಯ ಬಸವೇಗೌಡ, ಮುಟ್ಟಿಸಿಕೊಂಡವರು ಕತೆಯ ತಿಪ್ಪಣ್ಣನ ಔದಾರ್ಯ, ಉಮಾಪತಿಯಲ್ಲಿನ ಮುಗ್ಧತೆ ಇವುಗಳಿಂದಾಗಿ ನಮ್ಮ ಮನವನ್ನು ಮುಟ್ಟುತ್ತಾರೆ ಮತ್ತು ಗಂಭೀರ ಚಿಂತನೆಯಲ್ಲಿ ತೊಡಗುವಂತೆ ಮಾಡುತ್ತದೆ. ಯಾವುದೇ ರೀತಿಯ ತತ್ವ ಸಿದ್ಧಾಂತಗಳನ್ನು ಮೀರಿ ನಮ್ಮಲ್ಲಿ ಇದು ಬೆಳೆಯುತ್ತಾ ಹೋಗುತ್ತದೆ. ಹಾಗೆಯೇ ಮತ್ತೊಂದು ಮುಖ್ಯ ಅಂಶವೆಂದರೆ ಆದರ್ಶ ತತ್ವಗಳನ್ನಿಟ್ಟುಕೊಂಡ ಜೊತೆಗಾರ ಕತೆಯ ನಾಯಕರು ವಾಮನ ಕತೆಯಲ್ಲಿನ 'ನಾನು' ಅಂತಹವರು ಹೇಗೆ ಹುಸಿ ಮಾದರಿಗಳಾಗಿ ಭಗ್ನಗೊಳ್ಳುವುದನ್ನು ಕಾಣಬಹುದು. ಗುತ್ತಿಯ ವ್ಯವಸ್ಥೆಗೆ ಸಿಕ್ಕಿ ಗೀತಾ ಆದದ್ದು, ಹಳ್ಳಿಯ ಮುಗ್ಧದೇವಿಯಂತಹವರು ನಗರದ ಸಿನಿಮಾ ನಾಯ್ಕುವನ್ನು ಎದುರಿಸಿದ್ದು. ಸುಭದ್ರ ತನ್ನ ಲೈಂಗಿಕಾಪೇಕ್ಷೆಯನ್ನು ಈಡೇರಿಸಿಕೊಳ್ಳುವ ಸಲುವಾಗಿ ಮಾಡಿದ ಕುತಂತ್ರಗಳು ನಮ್ಮ ನಡುವೆ ಇರುವ ಬಿಕ್ಕಟ್ಟುಗಳು, ಆತಂಕಗಳನ್ನು ಸೂಚಿಸುವುದಾಗಿದೆ.

ಮನುಷ್ಯನ ತನ್ನ ಡೊಂಗಿತನವನ್ನು, ಬುಟಾಟಿಕೆ೦ಯುನ್ನು ಹಿಪೋಕ್ರಸಿ೦ಯುನ್ನು ಮೀರಲು ಬೇಕಾದ್ದನ್ನು ಅವರ ಕತೆಗಳಲ್ಲಿ೦ಯೇ ವ್ಯಕ್ತವಾಗಿದೆ. ಅಂತಹ ಕೆಲವೊಂದು ಸನ್ನಿವೇಶ ಸಂದರ್ಭಗಳು ಕೂಡಾ ಮುಖ್ಯವೆನಿಸುತ್ತವೆ. ನಿವೃತ್ತರು ಕಥೆ೦ಯಲ್ಲಿನ "ಮನುಷ್ಯ ಒಬ್ಬನೇ ಇದ್ದಾಗ ನಿಜವಾಗಿ೦ಯೂ ಕಣ್ಣು ತೆರೆದಿರುತ್ತಾನೆ. ಒಂದು ಬಾಗಿಲು "ನನ್ನ ಹುಚ್ಚಿನಲ್ಲಿ ಹಲವು ಸತ್ಯಗಳು ಹೊಳೆ೦ಯುತ್ತವೆ" ಮತ್ತು ಕಲ್ಲು ಕರಗುವ ಸಮ೦ಯದ "ಮನುಷ್ಯ ಬಾಯಿ ಬಿಟ್ಟೊಡನೆ ಒಂದು ಸುಳ್ಳು ಹೇಳುತ್ತಾನೆ" ಎನ್ನುವ ಮಾತುಗಳು ಕಥೆಗಾರನ ದೃಷ್ಟಿಯಿಂದ ಮುಖ್ಯವೆನಿಸುತ್ತವೆ. ಆದರೆ ಕೇವಲ ಕಥೆ೦ಯ ಮಟ್ಟಕ್ಕಷ್ಟೇ ನಿಲ್ಲದೆ ನಮ್ಮ ಆಳದ ಅನುಭವದ ಸ್ತರವನ್ನು ಕೂಡಾ ತಲುಪುವಂತೆ ಮಾಡುತ್ತದೆ.

ಲಂಕೇಶರ ಎಲ್ಲಾ ಕಥೆಗಳಲ್ಲಿ೦ಯೂ ಕೂಡಾ ಒಬ್ಬಂಟಿ ನಾ೦ಯಕರಿರುವುದು. ಈ ಕೇಂದ್ರಪಾತ್ರದ್ಧ ಮೂಲಕವೇ ಇಡೀ ಸಮಾಜವನ್ನು ಗ್ರಹಿಸಲೆತ್ನಿಸುವಾಗ ಕೆಲವೊಂದು ಮಿತಿಗಳು ಕೂಡಾ ಕಾಣಬಹುದು. ಎಲ್ಲಾ ಕಥೆಗಳಲ್ಲಿ೦ಯೂ ಕೂಡಾ ಕಾಮದ ಬಗ್ಗೆಯಿರುವ ಹೆಣ್ಣಿನ ಭಾವನೆಗಳನ್ನು ವಿವರಿಸಲು ಸಾಧ್ಯವಾಗಿರುವಂತೆ, ಅವರ ಹಿತದೃಷ್ಟಿ೦ಯಲ್ಲಿ ಆದ ಅನುಭವಗಳನ್ನು ಹೇಳಿಕೊಳ್ಳಲು ಅವಕಾಶವೇ ಕಲ್ಪಿಸಿದಂತೆ ಇರುವುದನ್ನು ಕಾಣಬಹುದು. ಆದರೆ ಕೆಲವೊಂದು ಮಿತಿಗಳನ್ನು ಮೀರಿ೦ಯೂ ಕೂಡಾ ಆ ಪಾತ್ರವು ೦ಯಶಸ್ವಿ೦ಯಾಗಿದೆ೦ಯೆಂದು ಹೇಳಬಹುದು.

ಲಂಕೇಶರ ಎಲ್ಲಾ ಸೃಜನಶೀಲ ಬರವಣಿಗೆಗಳ ಹಿಂದೆ ಈ ರೀತಿಯಾದ ಅವಕಾಶಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಅದನ್ನು ಮೀರುವ ಹಾಗೆ "ಸಾಮಾಜಿಕ ಗುಣಗಳು ಮನುಷ್ಯನ ಗುಣ ಸ್ವಭಾವ ಕ್ರಿಯಾ ವರ್ತನೆಯನ್ನು ನಿರ್ದೇಶಿಸುತ್ತವೆ ಎಂಬುದನ್ನು ಲಂಕೇಶರು ಒಪ್ಪುವ ಹಾಗೆ ಕಾಣುವುದಿಲ್ಲ. ಬದುಕಿನಲ್ಲಿ ಚಲನೆಗೊಳ್ಳಬಲ್ಲ ಶುದ್ಧ ಮನುಷ್ಯನ ಹುಡುಕುವಿಕೆ ಇವರ ಕಥೆಗಳ ಮುಖ್ಯ ಭಿತ್ತಿ ಎನ್ನಬೇಕು. ಸಾಮಾಜಿಕ ಕವಚವನ್ನು ಕಿತ್ತೆಸೆ ಯಾವುದೇ ಅದು ಒಂದು ಬಂಧನವೆನ್ನುವುದನ್ನು ಗ್ರಹಿಸಿಕೊಳ್ಳುವುದೇ ಲಂಕೇಶರ ಕಥೆಗಳ ಚಲನಶೀಲ ಪಾತ್ರಗಳು ಎದುರಿಸುವ ಮುಖ್ಯ ಸಂಘರ್ಷ ಎಂದಿದ್ದಾರೆ.

"ಸಮಕಾಲೀನ ವಿದ್ಯಾಮಾನಗಳನ್ನು ಗ್ರಹಿಸುವುದು ಮನುಷ್ಯನ ಮುಗ್ಧತೆ, ವ್ಯಕ್ತಿಗಳ ದೌರ್ಬಲ್ಯ, ಒಳ್ಳೆಯತನ, ಕ್ರಿಯಾಶೀಲತೆಯಿಂದಲೇ ಒಂದು ಸಮಾಜದ ಒಂದು ಕಾಲದ ಎಲ್ಲಾ ವಿದ್ಯಾಮಾನಗಳನ್ನು ವಿವರಿಸಬಹುದೆಂದು ನಂಬಿದಂತೆ ಕಾಣುತ್ತದೆ". ಅದರೆ ಇವೆಲ್ಲವುಗಳನ್ನು ಮೀರಿ ಲಂಕೇಶರ ಕಥೆಗಳು, ಆಧುನಿಕ ಮಾನವನ ತಲ್ಲಣಗಳನ್ನು ಆತಂಕಗಳನ್ನು ಹೇಳುವಂತದ್ದಾಗಿದೆ. ಬದುಕಿನ ವಿವಿಧ ಸ್ತರಗಳನ್ನು ತಲುಪಿದ ವ್ಯಕ್ತಿಗಳ ಕಥೆಗಳಾಗಿ ಕಾಣಬಹುದು.

ಪ್ರಸ್ತುತ ನನ್ನ ಅಧ್ಯಯನವು ಕೂಡಾ ಅಂತಹ ಪ್ರಯತ್ನ. ಬೇರೆ ಬೇರೆ ದೃಷ್ಟಿಕೋನ, ವಸ್ತುಗಳನ್ನಿಟ್ಟುಕೊಂಡು ಕೆಲವೊಂದು ಕಥೆಗಳನ್ನು ವಿಶೇಷವಾಗಿ ವಿಶ್ಲೇಷಣೆ ಮಾಡಿದ ನಂತರವೂ ಕೂಡಾ ಉಳಿದ ಕಥೆಗಳು ಅಷ್ಟೇ ಮುಖ್ಯವೆನಿಸುತ್ತವೆ ಎಂದೇ ನನ್ನ ನಂಬಿಕೆ. ಮತ್ತೊಂದು ಮಾತು ಲಂಕೇಶ ಎಂದ ತಕ್ಷಣ ನನಗೆ ನೆನಪು ಬರುವುದು 'ಕಲ್ಲು ಕರಗುವ ಸಮಯ'ವಾಗಿದೆ.

ಆಕರ ಗ್ರಂಥಗಳು

ಪಿ. ಲಂಕೇಶರ ಸಮಗ್ರ ಕತೆಗಳು (1992) – ಪಿ. ಲಂಕೇಶ

ಉಲ್ಲಂಘಾನೆ ಮತ್ತು ಇತರೆ ಕಥೆಗಳು – ಪಿ. ಲಂಕೇಶ

ಮಂಜು ಕವಿದ ಸಂಜೆ ಮತ್ತು ಇತರೆ ಕಥೆಗಳು – ಪಿ. ಲಂಕೇಶ್

ಕೆರೆಯ ನೀರನು ಕೆರೆಗೆ ಚೆಲ್ಲಿ – ಪಿ. ಲಂಕೇಶ್

ನಾನಲ್ಲ – ಪಿ. ಲಂಕೇಶ್

ಉಮಾಪತಿಯ ಸ್ಕಾಲರ್ ಶಿಪ್ ಯಾತ್ರೆ – ಪಿ. ಲಂಕೇಶ್

ಕಲ್ಲು ಕರಗುವ ಸಮಯ – ಪಿ. ಲಂಕೇಶ

ಪರಾಮರ್ಶನ ಗ್ರಂಥಗಳು

1) ನಕ್ಷೆ ಮತ್ತು ನಕ್ಷತ್ರ – ಡಾ. ಬಸವರಾಜ ಕಲ್ಗುಡಿ

2) ಪುಸ್ತಕ ಪ್ರೀತಿ – ಟಿ.ಪಿ. ಅಶೋಕ

3) ಸಾಹಿತ್ಯ ಮತ್ತು ಸಂಸ್ಕೃತಿ – ಡಾ. ನರಹಳ್ಳಿ ಬಾಲಸುಬ್ರಮಣ್ಯ

4) ಟೀಕೆ ಟಿಪ್ಪಣಿ – ಪಿ. ಲಂಕೇಶ

5) ಕಂಡದ್ದು ಕಂಡ ಹಾಗೆ – ಪಿ. ಲಂಕೇಶ

6) ಹುಳಿ ಮಾವಿನ ಮರ – ಪಿ. ಲಂಕೇಶ

7) ಬೋದಿಲೇರನ ಸಖ – ರಾಘವೇಂದ್ರ ಪಾಟೀಲ

8) ತಲೆಮಾರಿನ ತಳಮಳ – ಗಂಗಾಧರ್ ಕುಷ್ಟಗಿ

9) ವ್ಯಷ್ಟಿ ಮತ್ತು ಸಮಷ್ಠಿ – ಡಾ. ಕರಿಗೌಡ ಬೀಚನಹಳ್ಳಿ

10) ಪ್ರಜ್ಞೆ ಮತ್ತು ಪರಿಸರ – ಡಾ. 0ಯು.ಆರ್. ಅನಂತಮೂರ್ತಿ